Registered with the Registrar of Newspapers in India Under No. 50622/86
'Prasada' Bi-Monthly, Vol. 34 Issue No. 1, January-February 2019



ಆದಿಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಪುತ್ಥಳಿಯ ಸನ್ನಿಧಿಯಲ್ಲಿ
ಡಾ. ರಾಜೇಂದ್ರ ಶ್ರೀಗಳು ಹಾಗೂ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು

ಬಿಡಿ ಪ್ರತಿ: ರೂ. 10
e-mail: jsspublications@gmail.com * www.jssonline.org

# ಪ್ರಸಾದ

## ದ್ವೈಮಾಸಿಕ

ಸಂಪುಟ 34 ಸಂಚಿಕೆ 1 ಜನವರಿ–ಫೆಬ್ರವರಿ 2019



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

# ಪ್ರಸಾದ

**ಸಂಪುಟ 34 : ಸಂಚಿಕೆ 1** **ಜನವರಿ-ಫೆಬ್ರವರಿ 2019**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

## ಪರಿವಿಡಿ


| | |
|---|---|
| ಸಂಪಾದಕೀಯ | 5 |
| ಗುರುವಾಣಿ | 9 |
| ಶಿವಕುಮಾರ ಸ್ವಾಮೀಜಿ<br>**ರಚನೆ : ಡಾ. ಎ.ಪಿ.ಜೆ. ಅಬ್ದುಲ್ ಕಲಾಂ**<br>**ಅನುವಾದ : ಗೊ.ರು. ಚನ್ನಬಸಪ್ಪ** | 11 |
| ಶ್ರೀ ಸಿದ್ಧಗಂಗೆಯ ಶ್ರೀಚರಣದಲ್ಲಿ<br>**ಡಾ. ಜಿ.ಎಸ್. ಶಿವರುದ್ರಪ್ಪ** | 12 |
| ನಡೆದಾಡುವ ದೇವ ಶರಣು ಶರಣು!<br>**ಪ್ರೊ. ಜಿ.ಎಚ್. ಹನ್ನೆರಡುಮಠ** | 13 |
| ಶ್ರೀ ಶಿವಕುಮಾರಸ್ವಾಮ್ಯಷ್ಟಕಂ<br>**ಶ್ರೀ ಕುಮಾರ ನಿಜಗುಣ ಸ್ವಾಮಿಗಳು** | 14 |
| ಪವಾಡಪುರುಷ<br>**ದೊಡ್ಡಬಾಣಗೆರೆ ಪ್ರಕಾಶಮೂರ್ತಿ** | 17 |
| ಶಿವಕುಮಾರ ಶ್ರೀಗಳು ಭಾರತ ರತ್ನ ಅಲ್ಲ, ವಿಶ್ವ ರತ್ನ<br>**ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು** | 18 |
| ನಿಷ್ಕಾಮ ಕರ್ಮಯೋಗಿ<br>**ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು** | 23 |
| ಶೈಕ್ಷಣಿಕ ಕ್ರಾಂತಿಯ ಪ್ರೇರಕ-ಸಾಧಕ<br>**ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆ** | 25 |
| ಬುದ್ಧನ ಕಾರುಣ್ಯ, ಬಸವಣ್ಣನ ಕಾಳಜಿಯೇ ಮೈವೆತ್ತ ರೂಪ<br>**ಡಾ. ಜಿ.ಎಸ್. ಶಿವರುದ್ರಪ್ಪ** | 26 |
| ಮಹಾಮಾನವತಾವಾದಿ ಶ್ರೀ ಶಿವಕುಮಾರ ಸ್ವಾಮೀಜಿ<br>**ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ** | 30 |

ಕಾರುಣ್ಯದ ನಿಧಿ, ಕಲ್ಯಾಣದ ಪ್ರತಿರೂಪ 35
**ಕುಂ. ವೀರಭದ್ರಪ್ಪ**

ಅನ್ನ ಮತ್ತು ಅಕ್ಷರ ದಾಸೋಹಗಳ ಮಹಾಯೋಗಿ 38
**ಡಾ. ಮಲ್ಲೇಪುರಂ ಜಿ. ವೆಂಕಟೇಶ**

ಸರಳತೆಯ ಕಾಯಕಯೋಗಿ 41
**ಡಿ.ಎಂ. ಕುರ್ಕೆ ಪ್ರಶಾಂತ್**

ಹೊರಟೇ ಬಿಟ್ಟಿತು ಜಂಗಮದ ಜೋಳಿಗೆ 43
**ಕೆ.ವಿ. ಸಿಬಂತಿ ಪದ್ಮನಾಭ**

ಬಸವಣ್ಣ ಹೇಗಿದ್ದರು ಅಂದರೆ ಶ್ರೀಗಳನ್ನು ತೋರಿಸಬಹುದು 46
**ನ್ಯಾ. ಡಾ. ಶಿವರಾಜ್ ಪಾಟೀಲ್**

ಪವಾಡ ಸದೃಶ ವ್ಯಕ್ತಿತ್ವದ ಸಿದ್ಧಗಂಗಾ ಶ್ರೀ 48
**ಜಿ.ಎಸ್. ಜಯದೇವ**

ಗದ್ದುಗೆಯೇರಿದ ಸದ್ದುಗದ್ದಲವಿರದ ಸಾಧನೆ 49
**ಪ್ರೊ. ಮೊರಬದ ಮಲ್ಲಿಕಾರ್ಜುನ**

ಸಿದ್ಧಗಂಗೆಯ ದೇವಮಾನವ 53
**ನಗರ್ಲೆ ಶಿವಕುಮಾರ**

ಬಟ್ಟೆ ಹರಿದಿದ್ದರೂ ಪರವಾಗಿಲ್ಲ, ಕೈಲೊಂದು ಪುಸ್ತಕವಿರಲಿ! 61

ಸಿದ್ಧಗಂಗಾ ಶ್ರೀಗಳ ಮೊದಲ ಪ್ರತಿಮೆ ತಯಾರಾಗಿದ್ದು ಮೈಸೂರಲ್ಲಿ 62

111ರ ಸಾರ್ಥಕ ಬದುಕು 63

ಶ್ರೀಮಠದ ನೆನಪಿನ ಪುಟಗಳಲ್ಲಿ 65

**'ಪ್ರಸಾದ' ಚಂದಾ ವಿವರ**

ವಾರ್ಷಿಕ ರೂ. 100 * ದಶವಾರ್ಷಿಕ ರೂ. 500

# ಸಂಪಾದಕೀಯ

ವಿಶ್ವಲಿಂಗವನ್ನು ತಮ್ಮ ಸೇವಾಪುಷ್ಪ ಪರಿಕರಗಳಿಂದ ಪೂಜಿಸುತ್ತಾ, ಶತಮಾನದ ಶತಕೋಟಿ ಘಳಿಗೆ ಘಳಿಗೆಗಳನ್ನು ಸಾರ್ಥಕವಾಗಿ ಕಳೆದ ಸಿದ್ಧಗಂಗೆಯ ಸಿರಿಬೆಳಗು ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು (21.1.2019) ಲಿಂಗೈಕ್ಯರಾಗಿದ್ದಾರೆ. ತ್ರಿವಿಧ ದಾಸೋಹದ ಸೇವಾ ಪಥದಲ್ಲಿ 111 ವರ್ಷಗಳ ಸುದೀರ್ಘ ಪಯಣ! ಅಖಂಡ ವೈರಾಗ್ಯ ಅಗ್ನಿಪಥದ ಕಾಡುಮೇಡುಗಳಲ್ಲಿ ಅಲೆದು, ಗಿರಿದರಿಗಳಲ್ಲಿ ಕುಳಿತು, ಲೋಕವನ್ನೇ ತಿರಸ್ಕರಿಸಿ, ಮೋಕ್ಷ (?) ಪಡೆಯಲು ಏಕಾಂತದಲ್ಲಿ ದೇಹ ಮನಸ್ಸುಗಳನ್ನು ಅಸಹನೀಯ 'ಹಿಂಸೆ'ಗಳಿಗೆ ಒಡ್ಡಿಕೊಂಡು ಊರಿಗೆ ಉಪಕಾರಿಯಲ್ಲದೆ, ದಾರಿಗೆ ನೆರಳಲ್ಲದೆ ನಾಮಾವಶೇಷವಾದ ಸಾಧಕರ ಲೆಕ್ಕ ಯಾರಿಗೆ ಬೇಕಿದೆ? ಅವರು ಆತ್ಮೋದ್ಧಾರಕರೋ, ಲೋಕೋದ್ಧಾರಕರೋ ಎನ್ನುವುದು ಯಾರ ಅರಿವಿಗೂ ಬಂದಿಲ್ಲ. ಗಿರಿಗಹ್ವರಗಳ ನಿಗೂಢ ಸ್ಥಳದಲ್ಲಿಯೋ, ನದಿನದ ಸಂಗಮಕ್ಷೇತ್ರ ವ್ಯಾಪ್ತಿಯಲ್ಲಿಯೋ, ಮನ ಬೋಳಾಗದೆ ಕೇವಲ ಮಂಡೆಯನ್ನು ಮಾತ್ರ ಮುಂಡನ ಮಾಡಿಕೊಂಡು, ಅಂಗಜಂಗುಳಿಯ ಅತೃಪ್ತಿಗಳನ್ನು ಭಂಗಿ ಸೇದುತ್ತಲೋ, ಮೈತುಂಬಾ ಬೂದಿ ಬಡಿದುಕೊಂಡು ಅಕರಾಳ ವಿಕರಾಳವಾಗಿ ವರ್ತಿಸುತ್ತಾ, ಭಕ್ತಿಗಿಂತ ಭಯದ ಆವರಣವನ್ನು ಸೃಷ್ಟಿಸುವ, ಪವಾಡದ ಹೆಸರಿನ ಕಣ್ಕಟ್ಟು ಮಾಡುವ ಸಾಧು ಸಂತರೆನಿಸಿಕೊಂಡವರನ್ನು, ಭಾವೋನ್ಮಾದದ ಪ್ರವೃತ್ತಿಯನ್ನು ಈ ಲೋಕ ಎಂದೂ ಗಂಭೀರವಾಗಿ ಪರಿಗಣಿಸಿಲ್ಲ. ಅಂಗವನ್ನು ಲಿಂಗತ್ವದ ಸ್ತರಕ್ಕೆ ಏರಿಸಿ, ಆ ನಿರಂಜನ ಸ್ಥಿತಿಯ ಮನೋ ಮಹತ್ ಸಂಕಲ್ಪದಿಂದ ಲಿಂಗತ್ವವನ್ನು ಜಂಗಮತ್ವಗೊಳಿಸಿಕೊಂಡು, ನಿರಪೇಕ್ಷತೆಯಿಂದ ತಮ್ಮ ಶಿವಮಯದ ಸಮಗ್ರ ವ್ಯಕ್ತಿತ್ವವನ್ನು ಸಕಲ ಜೀವಜಾಲಗಳ ಲೇಸಿಗಾಗಿ ಶ್ರೀಗಂಧದಂತೆ ಸವೆಸುವವರು ಮಾತ್ರ ಆದರ ನಿಜಾರ್ಥದಲ್ಲಿ ಸಂತಮಹಂತ ರಾಗುತ್ತಾರೆ. ಅಂತಹವರ ಸಾಲಿನಲ್ಲಿ ನಿಲ್ಲುವಂತಹ ನಿರ್ವಿಕಲ್ಪಚೇತನ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು.

ದಯೆ, ಕರುಣೆ, ತ್ಯಾಗ, ನಡೆ-ನುಡಿ ಸಿದ್ಧಾಂತಗಳ ಸಂಗಮವನ್ನು 'ಧರ್ಮ' ಎಂದು ಕರೆಯಲಾಗುತ್ತದೆ. ಅದು ಕೇವಲ ಮನುಕುಲಕ್ಕೆ ಮಾತ್ರ ಸೀಮಿತವಾಗಿರದೆ, ವಿಶ್ವವನ್ನೇ ತಬ್ಬುವ ಬೇರೆ ಬೇರೆ ಸ್ತರದ ಒಂದು ಅನುಭೂತಿಯಾಗಿರುತ್ತದೆ. ಮನಸ್ಸಿನೊಳಗೆ

ಮೂಡುವ ಒಂದು ಸಣ್ಣ ಭಾವತಂತುವಿನಿಂದ ಹಿಡಿದು ಎತ್ತರದ ಅರಿವಿನ ಸ್ತರದಲ್ಲಿ ಕಾಣುವ 'ದರ್ಶನ'ದ ತನಕ ಇದರ ವ್ಯಾಪ್ತಿಯಿರುತ್ತದೆ. ಒಂದು ತುದಿ ನದಿಮೂಲದ ನೀರ ಹನಿಯಾದರೆ ಮತ್ತೊಂದು ತುದಿ ವಿಶಾಲ ಸಾಗರವಾಗಿರುತ್ತದೆ. ಆದರೆ ಈ ಎರಡೂ ತುದಿಗಳೂ ಅಂತರ್‌ಸಂಬಂಧವನ್ನು ಹೊಂದಿ ಕ್ರಿಯಾಶೀಲವಾಗಿರುತ್ತವೆ.

ವಿಶ್ವಮುಖಿಯಾದ ಸಂತರ ಬದುಕು ಇಂತಹದ್ದು. ಹರಿವ ನದಿಗೆ ಮೈಯೆಲ್ಲಾ ಕಾಲು, ಉರಿವ ಬೆಂಕಿಗೆ ಮೈಯೆಲ್ಲಾ ನಾಲಗೆಯಾಗಿರುವ ಸ್ವರೂಪದ್ದು. ಇಂತಹ ಮಹಾಮಹಿಮರ ಅಂತರಂಗ ಮತ್ತು ಬಹಿರಂಗ, ಉಸಿರಿನ ಪರಿಮಳವೇ ಭೂವ್ಯೋಮವನ್ನು ವ್ಯಾಪಿಸುವ ಸೌರಭಶಕ್ತಿಯನ್ನು ಹೊಂದಿರುವುದರಿಂದ ಅವರ ಪೂಜೆಗೆ ಪರಿಮಳಭರಿತ ಪುಷ್ಪಗಳ ಹಂಗಿರುವುದಿಲ್ಲ. ಡಾ. ಶಿವಕುಮಾರ ಮಹಾಸ್ವಾಮಿಗಳವರು ನಿತ್ಯವೂ ತಪ್ಪದೆ ಮಾಡುತ್ತಿದ್ದ ಇಷ್ಟಲಿಂಗಪೂಜೆ, ಇಂತಹ ವಿಶ್ವಪೂಜೆಯ ಸಾಂಕೇತಿಕ ರೂಪ ಅಷ್ಟೆ! ಆದ್ದರಿಂದಲೇ ಅವರನ್ನು ಜನಮನ ನಡೆದಾಡುವ ದೇವರೆಂದು ತಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡಿತ್ತು. ಯಾವುದೇ ಎತ್ತರದ ಬಿತ್ತರದ ಬೆಳ್ಳಿ ಬಂಗಾರದ ಪೀಠಗಳು, ಭಕ್ತ ಹೃದಯದ ನಿಷ್ಕಲ್ಮಷ ಪೀಠದಷ್ಟು ಪರಿಶುದ್ಧವೂ ಅಲ್ಲ, ಶಾಶ್ವತವೂ ಅಲ್ಲ. ಧರ್ಮದ ಹೆಸರಿಗಾಗಿ, ಧರ್ಮದ ಲಾಂಛನಕ್ಕಾಗಿ, ಪೀಠಗಳ ತರತಮಗಳ ಪರಿಕಲ್ಪನೆಯನ್ನು ವಿನಾಕಾರಣ ಹುಟ್ಟುಹಾಕಿ ಮತ್ತಷ್ಟು ತಮಂಧವನ್ನೇ ಘನವಾಗಿಸಿಕೊಂಡು ಮುಗ್ಧ ಜನಸಮುದಾಯವನ್ನು ತಮ್ಮ 'ತಪ್ಪಿದ ತಾಳ'ಕ್ಕೆ ತಕ್ಕಂತೆ ಕುಣಿಸುತ್ತಾ ಗುಪ್ತ ಕಾರ್ಯಸೂಚಿಗಳ ಸ್ವಾರ್ಥಲೋಲುಪತೆಗೆ ಬಳಸಿಕೊಂಡು ಬಡಿದಾಡಿಸುವವರ ನಡುವೆ ಪರಮಪೂಜ್ಯರು 'ನಡೆದಾಡುವ ದೇವರ ಸ್ವರೂಪವನ್ನು ಪಡೆದದ್ದು' ಎಲ್ಲವನ್ನು ಒಳಗೊಂಡೂ ಎಲ್ಲವನ್ನೂ ಮೀರಿನಿಂತ 'ಶೂನ್ಯ' ಸ್ಥಿತಿಯಿಂದ.

ಸ್ವಾಮಿತ್ವದ ಯಾವ ಕನಸ ಕಾಣದೆ, ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿಕೊಂಡು ತಮ್ಮಷ್ಟಕ್ಕೆ ತಾವು ತಂದೆಗೆ ತಕ್ಕ ಮಗನಂತೆ ಇದ್ದ ವೀರಾಪುರದ ಶಿವಣ್ಣ, ಉದ್ದಾನ ಶಿವಯೋಗಿಗಳವರ ಕೃಪಾದೃಷ್ಟಿಗೆ ಬಿದ್ದು, ಕಾಷಾಯವಸನಧಾರಿಯಾಗಬೇಕಾಗಿ ಬಂದದ್ದು ಒಂದು ಆಕಸ್ಮಿಕ ಘಟನೆ ಎನಿಸಿದರೂ, ಪೂರ್ಣದೃಷ್ಟಿಯಿಂದ ಪರಿಭಾವಿಸಿದಾಗ ಅದೊಂದು ಪೂರ್ವನಿಯೋಜಿತ ಜಗನ್ನಿಯಾಮಕ ನಿಯಮ ಎನಿಸುತ್ತದೆ. ಅಂತೆಯೇ ಜನಸಮುದಾಯದ ಅನಂತಕಾಲದ ಪ್ರಾರ್ಥನೆಯ ಫಲವೇ ಆಗಿದೆ ಎನಿಸುತ್ತದೆ.

ಬರಪೀಡಿತವಾಗಿದ್ದ ಉರಿ ಬೆಟ್ಟವನ್ನು ಗೋಸಲ ಸಿದ್ದೇಶ್ವರರು ತಮ್ಮ ಯೋಗದೃಷ್ಟಿಯಿಂದ ನೋಡಿ ಅಲ್ಲಿನ ಒಂದು ಬಂಡೆಯನ್ನು ಮೆಟ್ಟಿದಾಗ ನೀರಿನ ಬುಗ್ಗೆ

ಚಿಮ್ಮಿ ಆ ಪ್ರದೇಶ ಸಿದ್ಧಗಂಗೆ ಎಂದು ಅಭಿಧಾನವನ್ನು ಪಡೆಯಿತು. ಈ ಐತಿಹ್ಯ ಜನಮಾನಸದಲ್ಲಿ ನಿರಂತರವಾಗಿ ಗಟ್ಟಿಗೊಂಡು ಬಂದದ್ದು, ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 'ದಾಸೋಹದ ಗಂಗೆ' ಅಹರ್ನಿಶಿ ಪ್ರವಹಿಸುತ್ತಾ ಬಂದ ಕಾರಣಕ್ಕಾಗಿ ಎನ್ನುವುದರಲ್ಲಿ ಎರಡು ಮಾತಿಲ್ಲ.

ಕುರುಡು ಕಾಂಚಾಣ ತನ್ನ ಅಕರಾಳ ವಿಕರಾಳ ಕುಣಿತದಿಂದ ಜಗತ್ತನ್ನು ಮೋಡಿಗೆ ಒಳಗುಮಾಡುತ್ತಿರುವ ಈ ದಿನಮಾನಗಳಲ್ಲಿಯೂ, ಅದನ್ನು ಕಡೆಗಣಿಸಿ, "ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದೊಳಗೆ, ತಾನಿಲ್ಲದಂತಿರ ಬೇಕು" ಎನ್ನುವ ಬಸವೇಶ್ವರರ ನಿರ್ಲಿಪ್ತ ನಿಲುವಿನ ಪ್ರತಿರೂಪದಂತೆ ಬದುಕಿದ್ದ ಪರಮಪೂಜ್ಯರು ಆ ಮೂಲಕ ಭಾರತದ ಸಂತಪರಂಪರೆಗೆ ಬಹುದೊಡ್ಡ ಗೌರವವನ್ನು ತಂದುಕೊಟ್ಟರು; ಇಡೀ ನಾಡಿನ ಗುರುವೃಂದಕ್ಕೆ ಗುರುವಾಗಿ ಮೆರೆದರು. ಆ ಕಾರಣಕ್ಕಾಗಿಯೇ ಈ ತ್ಯಾಗದ ಮಹಾಮೇರು ಅವರವರ ಭಾವಕ್ಕೆ, ಅವರವರ ದರುಶನಕ್ಕೆ ಒಂದೊಂದು ತೆರನಾಗಿ ಕಂಡರು. ಹಾಗೆ ಕಂಡವರೆಲ್ಲಾ ಪೂಜ್ಯರನ್ನು ತಮ್ಮದೇ ನುಡಿಗಟ್ಟುಗಳಲ್ಲಿ ಉಗ್ಘಡಿಸಿ ಹರ್ಷಿಸಿದರು.

ಆಧುನಿಕ ಬಸವಣ್ಣ, ಪರಮ ತಪಸ್ವಿ, ತ್ರಿವಿಧ ದಾಸೋಹಿ, ದೂರದರ್ಶಿ, ದಿವ್ಯ ದಾರ್ಶನಿಕ, ವೀರ ವಿರಾಗಿ, ಲೋಕಪೂಜ್ಯ, ಕಾಯಕಯೋಗಿ, ಸರ್ವೋದಯ ಸಾಧಕ, ಅವತಾರಪುರುಷ, ಮಹಾಶರಣ, ಅಂತರ್ಮುಖಿ, ಧರ್ಮದ್ರಷ್ಟಾರ, ಸಮನ್ವಯ ಯೋಗಿ, ಪುಣ್ಯಪುರುಷ, ನಿಷ್ಕಾಮ ಕರ್ಮಯೋಗಿ, ಆಧುನಿಕ ಕುಲಪತಿ, ಜ್ಞಾನಗಂಗೆ, ಆನಂದಮೂರ್ತಿ, ಸಿದ್ಧಗಂಗಾ ಸಿರಿ, ದಾಸೋಹ ಸಿರಿ, ಪವಾಡಪುರುಷ, ಮಹಾನ್ ಚೇತನ, ತ್ರಿಗುಣ ಸಂಗಮ, ವಾತ್ಸಲ್ಯಮೂರ್ತಿ, ಪರಧರ್ಮಸಹಿಷ್ಣು, ಧೀಮಂತ ಶಕ್ತಿ, ದಿವ್ಯಜ್ಯೋತಿ, ಸಂಕಲ್ಪ ಗಂಗೋತ್ರಿ, ಪರಮಪೂಜ್ಯ, ದೇವಪುರುಷ, ಸತ್ಯಚೇತನ, ಮಂಗಳಮೂರ್ತಿ, ಬಸವತೇಜ, ಅಖಂಡ ದಾಸೋಹಿ, ಅಪ್ರತಿಮ ಅನುಭವಿ, ದಿವ್ಯಶಿಲ್ಪ, ಕರುಣೆಯ ಕಡಲು, ದೀನರ ದಾರಿದೀಪ, ಪಾವನಮೂರ್ತಿ, ಬಡವರ ಕಲ್ಪವೃಕ್ಷ, ಅನುಗ್ರಹ ಸಮರ್ಥ, ಮಹಾತ್ಯಾಗಿ, ದಿವ್ಯ ಹೃದಯಿ, ತತ್ತ್ವರೂಪಾರಿ, ಪಾವನಾತ್ಮ, ಜಂಗಮಶ್ರೇಷ್ಠ, ಸಮ್ಯಕ್‌ಯೋಗಿ, ಶಿವಬೆಳಕು, ದೇವಮಾನವ, ಕನ್ನಡದ ಬುದ್ಧ, ನೀತಿನಿಧಿ, ವಿಶ್ವಪ್ರೇಮಿ, ದೇವದೀವಿಗೆ, ಅಲ್ಲಮಪ್ರಭೆ, ಬಸವವಾಣಿ, ಚಿದ್ಘನಮೂರ್ತಿ, ಜ್ಞಾನಕೋಶ, ಧರ್ಮದೀಪ, ಕ್ರಿಯಾಮೂರ್ತಿ, ಮಾತೃಸ್ವರೂಪಿ, ಧರ್ಮಕಿರಣ, ಪ್ರಸನ್ನ ಪರಿಣಾಮಿ ಇತ್ಯಾದಿ... ಇತ್ಯಾದಿ... ಹೀಗೆ ಏನೆಲ್ಲಾ ರೀತಿಯಲ್ಲಿ ಕೀರ್ತಿಸಿದರೂ ಅತ್ಯತಿಷ್ಠದಶಾಂಗುಲವಾಗಿಯೇ ಉಳಿಯುವವರು ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು.

ಇಂತಹ ಮಹಾನ್‌ಚೇತನವನ್ನು ನಾಡಿನ ಸಂಸ್ಕೃತಿ ಚಿಂತಕರಾದ ಗೊ.ರು.ಚ. ಕಂಡ ಪರಿ ಹೀಗೆ –

ಭಾವ ಜಾಗೃತರಾಗಿ; ಭ್ರಾಂತಿ ಮೂಲವ ತೊಡೆದ
ಭಕ್ತಿ ಕರ್ಮ ಜ್ಞಾನಜ್ಯೋತಿ ನೀವು ;
ಅಂತರಂಗದ ಅರಿವ ಬಾಹ್ಯ ಬದುಕಿಗೆ ತಂದ
ಅನುಭಾವ ಪರಿಣಾಮ ಮಹತಿ ನೀವು !

ನಿಷ್ಠೆ ನಿಯಮದ ಪಾತ್ರ, ಭಕ್ತಿ ಸಮರಸ ಪ್ರಜ್ಞೆ
ನಿರ್ವಿಕಾರದ ದೃಷ್ಟಿಸೂತ್ರ ನೀವು ;
ಮಾತು ಮನದೆತ್ತರವ ಮೀರಿ ನಿಂತಿಹ ಸಿದ್ಧಿ
ಮೌನ ಚೇತನಶಕ್ತಿಮಂತ್ರ ನೀವು !

ಸತ್ಯ ಸಾಕ್ಷಾತ್ಕಾರ, ಸ್ಥಿತಪ್ರಜ್ಞೆ ಮಂದಾರ
ಸಾಹಿತ್ಯ ಸೌಂದರ್ಯ ನಿಧಿಯು ನೀವು;
ಧರ್ಮ ಜೀವನಮಾರ್ಗದರ್ಶನದ ಮೇಲು
ದಿವ್ಯದಾಸೋಹದಾ ಮೂರ್ತಿ ನೀವು !

ಕಾಯಕವೇ ಕೈಲಾಸ ಶ್ರುತಿಯ ಕೃತಿಗೈತಂದ
ಕರ್ಮಯೋಗದ ತತ್ತ್ವಶೀಲ ನೀವು ;
ಮೇಲು ಕೀಳುಗಳೆಂಬ ಮಾಲಿನ್ಯವನೆ ಕಳೆದ
ಮಾನವೀಯತೆಯ ಘನಮೌಲ್ಯ ನೀವು !

ಶತಮಾನದ ಜ್ಯೋತಿಪುಂಜವಾಗಿದ್ದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಸ್ಮರಣೆಗಾಗಿ ಈ ಸಂಚಿಕೆಯನ್ನು ರೂಪಿಸಲಾಗಿದೆ. ಹೊಸ ಲೇಖನಗಳ ಜೊತೆಗೆ, ಆ ಸಂದರ್ಭದಲ್ಲಿ ಬಂದ ಪತ್ರಿಕೆಗಳ ಕೆಲವು ಲೇಖನಗಳನ್ನು ಯಥಾವತ್ತಾಗಿ ಬಳಸಿಕೊಳ್ಳಲಾಗಿದೆ. ಅದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ನಡೆದಾಡುವ ದೇವರೆನಿಸಿದ್ದ ಆ ಮಹಾಚೇತನಕ್ಕೆ ಭಕ್ತಿಯ ನುಡಿಕುಸುಮಗಳನ್ನು ಅರ್ಪಿಸುತ್ತದೆ - ಪ್ರಸಾದ ಬಳಗ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

**ಈ** ಶತಮಾನದ ಸಿದ್ಧಪುರುಷ ಸಿದ್ಧಗಂಗೆಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಅಸ್ತಂಗತರಾದುದು ನಾಡಿನ ಮೇಲೆ ಕಾರ್ಗತ್ತಲೆ ಕವಿದಂತಾಯಿತು. ನೂರಾಹನ್ನೊಂದು ವರ್ಷಗಳ ತುಂಬು ಬದುಕನ್ನು ಇಷ್ಟಲಿಂಗ ಪೂಜೆ, ಅಂತರಂಗಶೋಧನೆ ಮತ್ತು ತ್ರಿವಿಧ ದಾಸೋಹದ ಚಿಂತನೆಗಳಿಗೆ ಮುಡಿಪಾಗಿಟ್ಟಿದ್ದ ಪರಮಪೂಜ್ಯರು ನಾಡಿನ ಧರ್ಮಗುರುಗಳ ಸಂಕುಲಕ್ಕೆ ಎಲ್ಲ ರೀತಿಯಲ್ಲಿಯೂ ಗುರುಸ್ಥಾನದಲ್ಲಿದ್ದವರು. ಆ ಕಾರಣಕ್ಕಾಗಿಯೇ ಸಿದ್ಧಗಂಗಾ ಕ್ಷೇತ್ರ ಭಕ್ತಸಮೂಹಕ್ಕೆ ಮಾತ್ರವಲ್ಲ, ಗುರುಸಮುದಾಯಕ್ಕೂ ಒಂದು ಪವಿತ್ರ ಕ್ಷೇತ್ರವೇ ಆಗಿತ್ತು. ಅವರ ಸಾಮೀಪ್ಯವೇ ಸಾಧಕರಿಗೆ ಒಂದು ಬಗೆಯ ಆತ್ಮಸ್ಥೈರ್ಯವನ್ನು ತಂದುಕೊಡುತ್ತಿತ್ತು. ಬೆಳಗಿನಿಂದ ಬೈಗಿನ ತನಕ ಅವರ ನಿರಂತರ ಕ್ರಿಯಾಶೀಲತೆಯನ್ನು ನೋಡುತ್ತಿದ್ದರೆ, ನೋಡುಗರ ಭಾವಕೋಶಕ್ಕೆ ಹೊಸ ಜೀವದ್ರವ್ಯವನ್ನು ತುಂಬಿದಂತಾಗುತ್ತಿತ್ತು. ಅವರು ಏಕಾಂತ ಮತ್ತು ಲೋಕಾಂತಗಳನ್ನು ಏಕಕಾಲದಲ್ಲಿ ಸಾಧಿಸುತ್ತಿದ್ದ ಪರಿ ನಿಜಕ್ಕೂ ಅವರ್ಣನೀಯ.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸಾಂಪ್ರದಾಯಿಕ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಂಡಿದ್ದ ದಿನಗಳಲ್ಲಿಯೇ ಆಕಸ್ಮಿಕವಾಗಿ ಒದಗಿಬಂದ ಶ್ರೀಮಠದ ಜವಾಬ್ದಾರಿಯ ಅವಕಾಶವನ್ನು ಅವರು ಎರಡಿಲ್ಲದ ಮನಸ್ಸಿನಿಂದ ಸ್ವೀಕರಿಸಿ, ಅದಕ್ಕೆ ತಮ್ಮ ಒಳಹೊರಗನ್ನು ಹದಮಾಡಿಕೊಂಡ ಪರಿ ಅಚ್ಚರಿ ಮೂಡಿಸುವಂತಹುದು. ಹಿರಿಯ ಗುರುಗಳಾಗಿದ್ದ ಶ್ರೀ ಉದ್ದಾನ ಶಿವಯೋಗಿಗಳವರ ಆಚಾರವಿಚಾರಗಳ ಕಡಿಹಕ್ಕೆ ಬಡಿಹಕ್ಕೆ ಬೆದರದೆ ಬೆಚ್ಚದೆ ತಮ್ಮನ್ನು ಒಡ್ಡಿಕೊಂಡು ವೈರಾಗ್ಯದ ಭಾವ, ವೀರತ್ವದ ಛಲವನ್ನು ಮುಂದಿನ ಮಹಾಮಣಿಹಕ್ಕೆ ಅಣಿಗೊಳಿಸಿಕೊಂಡ ಅವರ ಸಾಧನೆಯ ಹಾದಿಯ ಗತಿ ಗಮ್ಯಗಳದ್ದೇ ಒಂದು ರೋಚಕ ಕಥೆ.

ಶ್ರೀ ಉದ್ದಾನ ಶಿವಯೋಗಿಗಳು ಲಿಂಗೈಕ್ಯರಾದಾಗ ಶ್ರೀಮಠದ ತಿಜೋರಿ (?) ಯಲ್ಲಿದ್ದುದು ಕೇವಲ ಮೂರುನೂರು ರೂ.ಗಳು ಮಾತ್ರ. ಅದು ಶಿವಯೋಗಿಗಳ ಆರಾಧನೆಗೂ ಸಾಕಾಗುವ ಸಂಪತ್ತಾಗಿರಲಿಲ್ಲ! ಅಂತೂ ಭಕ್ತರ ಒತ್ತಾಸೆಯಿಂದ ಆರಾಧನೆಯೇನೋ ಚೆನ್ನಾಗಿಯೇ ನಡೆಯಿತು. ಆದರೆ ಮುಂದೆ? ಹೊಸದರಲ್ಲಿಯೇ ಸವಾಲುಗಳ ಪರ್ವತಶ್ರೇಣಿಗಳನ್ನು ಏರಬೇಕಾದ ಪರಿಸ್ಥಿತಿ! ಹರದನಹಳ್ಳಿಯ ಗೋಸಲ ಸಿದ್ಧೇಶ್ವರರು ಶಿಷ್ಯರೊಂದಿಗೆ ಬಂದು ಇಲ್ಲಿ ತಂಗಿದ್ದಾಗ, ಸಾಧಕರೊರ್ವರಿಗೆ ಬಾಯಾರಿಕೆ

ಉಂಟಾಯಿತಂತೆ. ಆದರೆ ಅಲ್ಲಿ ಎಲ್ಲಿಯೂ ನೀರಿನ ತಾಣ ಕಾಣಲಿಲ್ಲ, ಯಾವುದೋ ಒಂದೆಡೆ ಅವರು ತಮ್ಮ ಪಾದದಿಂದ ಒತ್ತಿದಾಗ ನೆಲದಾಳದಿಂದ ಸುಜಲವು ಚಿಮ್ಮಿಬಂದಿತಂತೆ, ಈ ಕಾರಣಕ್ಕೆ ಇದು ಸಿದ್ಧಗಂಗೆ ಎನ್ನುವ ಹೆಸರು ಪಡೆಯಿತು ಎನ್ನುವ ಒಂದು ಐತಿಹ್ಯವಿದೆ. ಆರ್ಥಿಕವಾಗಿ ಅಷ್ಟು ಬಲಿಷ್ಠವಾಗಿರದ ಶ್ರೀಮಠವು ಮುಂದೆ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಧೀಶಕ್ತಿಯಿಂದ ಭಕ್ತರ ಮಹಾಪೂರವನ್ನೇ ತಮ್ಮೆಡೆ ಸೆಳೆದುಕೊಂಡು, ಮಠವನ್ನು ಕಟ್ಟಿದುದನ್ನು ಈ ಐತಿಹ್ಯ ಸಂಕೇತಿಸುತ್ತದೆ ಎನ್ನಬಹುದು.

ನಮ್ಮ ಸುತ್ತೂರು ಶ್ರೀಮಠದೊಂದಿಗೆ ಅವರದು ನಿರ್ವ್ಯಾಜ ಸಂಬಂಧ. ನಮ್ಮ ಹಿರಿಯ ಜಗದ್ಗುರುಗಳು ಹಾಗೂ ಡಾ. ಶ್ರೀ ಶಿವಕುಮಾರ ಸ್ವಾಮಿಗಳವರೀರ್ವರಿಗೂ ಪರಸ್ಪರರಲ್ಲಿ ಅಪಾರ ಗೌರವ. ನಾಡು ಕಂಡ ಬಹುದೊಡ್ಡ ಜ್ಞಾನಿಗಳಾದ ಮೈಸೂರಿನ ಪಂಚಗವಿಮಠದ ಶ್ರೀ ಗೌರೀಶಂಕರ ಸ್ವಾಮಿಗಳು, ಶ್ರೀ ರಾಜೇಂದ್ರ ಶ್ರೀಗಳು ಹಾಗೂ ಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು ಇವರ ನಡುವೆ ಇದ್ದ ಭಾವಸಂಬಂಧ ಬಹಳ ಅಪರೂಪವಾದುದಾಗಿತ್ತು.

ಪೂಜ್ಯ ರಾಜೇಂದ್ರ ಶ್ರೀಗಳ ಬಗ್ಗೆ, ಡಾ. ಶಿವಕುಮಾರ ಮಹಾಸ್ವಾಮಿಗಳವರು ಬರೆದಿರುವ ಮಾತುಗಳು ಹೀಗಿವೆ:

"ಶ್ರೀಮಠದೊಡನೆ ಜಗದ್ಗುರುಗಳು ಬೆಳೆಸಿಕೊಂಡು ಬಂದಿದ್ದ ಮಧುರ ಬಾಂಧವ್ಯ ಅವಿಸ್ಮರಣೀಯವಾದುದು; ಸಂಸ್ಥೆಯ ಸುಖದುಃಖಗಳನ್ನು ತಮ್ಮವೆಂದೇ ಭಾವಿಸಿ ಪರಮಾಪ್ತರಾಗಿ ಸಹಕರಿಸುತ್ತಿದ್ದರು. ತಾವೊಂದು ಹಿರಿಯ ಸಂಸ್ಥಾನದ ಜಗದ್ಗುರುಗಳಾಗಿದ್ದರೂ, ನಮ್ಮೊಂದಿಗೆ ಸಮಾನ ಭಾವಸಿರಿಯನ್ನು ತಮ್ಮದಾಗಿಸಿಕೊಂಡ ವರಾಗಿದ್ದರು. ಆಪ್ತಾಲೋಚನೆಯ ಸಂದರ್ಭಗಳಲ್ಲಿ ಅವರು ನೀಡುತ್ತಿದ್ದ ಸಲಹೆ, ಸೂಚನೆಗಳು ಧನಾತ್ಮಕವಾಗಿರುತ್ತಿದ್ದುವು. ಅವರು ಮೌನಕ್ರಾಂತಿಯ ಮಹಾಂತರು."

ಜಲಭಾರದ ಮೋಡವೊಂದು ಶೃಂಗವೊಂದನ್ನು ಸ್ಪರ್ಶಿಸುವ ದೈವಿಕ ಪರಿಯೇ ಹೀಗೆ. ಅಲ್ಲಿ ಜೀವಜಾಲವನ್ನು ತಣಿಸುವ ಜೀವಜಲ ಮಾತ್ರ ಧೋ ಎಂದು ಸುರಿಯುತ್ತದೆ. ಇಂತಹ ಮಹಾ ಚೇತನವನ್ನು ಕಳೆದುಕೊಂಡ ಸಮಾಜ ಒಂದು ರೀತಿಯ ಅನಾಥಪ್ರಜ್ಞೆಯನ್ನು ಅನುಭವಿಸುತ್ತಿದೆ. ನಮಗಂತೂ ಇದೊಂದು ತುಂಬಲಾರದ ನಷ್ಟ.

ಆದರೂ ಕಾಲದ ಕರೆ ಎನ್ನುವುದು ನಿಸರ್ಗನಿಯಮ. ಅದನ್ನು ಗೌರವಿಸುತ್ತಲೇ, ಪರಮಪೂಜ್ಯರು ತೋರಿದ ಆದರ್ಶದ ಹಾದಿಯಲ್ಲಿ ನಡೆಯುವುದೇ ಭಕ್ತಸಮುದಾಯ ಅವರಿಗೆ ತೋರಿಸುವ ಗೌರವವಾಗಬೇಕಿದೆ. ಅವರು ಸೂರ್ಯನಾದರೆ, ಅವರಿಂದ ಉಪಕೃತರಾದವರು, ಸ್ಫೂರ್ತಿ ಪಡೆದವರೆಲ್ಲರೂ ಕೊನೆಯ ಪಕ್ಷ ಒಂದೊಂದು ಕಿರು ಹಣತೆಗಳಾದರೂ ಆಗಬೇಕಲ್ಲವೆ!

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಶಿವಕುಮಾರ ಸ್ವಾಮೀಜಿ

ರಚನೆ : ಡಾ. ಎ.ಪಿ.ಜೆ. ಅಬ್ದುಲ್ ಕಲಾಂ
ಅನುವಾದ : ಗೊ.ರು. ಚನ್ನಬಸಪ್ಪ

ನೀವು ನಮ್ಮೆದುರಿಗೆ ನೋಡಿ ಓರ್ವ ಋಷಿಯ
ಶ್ರೇಷ್ಠ ಆಧ್ಯಾತ್ಮಿಕ ಅನುಗ್ರಹಧಾರಣೆಯ ಋಷಿಯ
ಸರ್ವಶಕ್ತನು ಈ ಋಷಿಗೆ ನಿತ್ಯ ಇತ್ತಿಹನು
ಬದುಕಿನಸ್ತಿತ್ವದ ಒಂದು ಅಮೂಲ್ಯ ವಜ್ರವನು
ತಪದ ಬದುಕಿನ ಮೌಲಿಕ ಮಾಲೆಯಾಗಿ
ಮೂವತ್ತಾರು ಸಾವಿರ ವಜ್ರಗಳ ಪವಣಿಸಿದ ಈ ಋಷಿ
ಮಾನವ ಕುಲಕೆ ಕರುಣಿಸಿಹ ಸಂದೇಶ
ಓ ನನ್ನ ಒಡನಾಡಿ ನಾಗರಿಕರೇ,
ಕೊಡುವಲ್ಲಿ ಪಡೆಯಿರಿ, ನೆಮ್ಮದಿಯ ದೇಹಾತ್ಮಗಳಲ್ಲಿ
ಇರಲು ನಿಮ್ಮೊಳು ಜ್ಞಾನ ಅದ ಹಂಚಿಕೊಳ್ಳಿ
ಸಂಪತ್ತು ಇದ್ದಲ್ಲಿ ನಿರ್ಗತಿಕರೊಡನೆ ಹಂಚಿಕೊಳ್ಳಿ
ಸಂಪತ್ತು ಇದ್ದಲ್ಲಿ ........
ದುಃಖಗಳ ನೋವ ನಿವಾರಿಸಲು
ನಿಮ್ಮ ಮನಸ್ಸು ಹೃದಯಗಳ ಬಳಸಿ
ನೊಂದ ಹೃದಯಗಳ ಸಂತೈಸಿ
ಕೊಡುವಲ್ಲಿ ಪಡೆಯುವಿರಿ ಸಂತೃಪ್ತಿ
ನಿಮ್ಮೆಲ್ಲ ಕ್ರಿಯೆಗಳನು ಹರಸುವುದು ದೈವಶಕ್ತಿ!

# ಶ್ರೀ ಸಿದ್ಧಗಂಗೆಯ ಶ್ರೀಚರಣದಲ್ಲಿ

**ಡಾ. ಜಿ.ಎಸ್. ಶಿವರುದ್ರಪ್ಪ**
**('ಸಿದ್ಧಗಂಗಾ ಶ್ರೀ'ಯಿಂದ)**

ಹರನ ಕರುಣೋದಯದ ತೆರದಲಿ ಬೆಳಗು ತೆರೆಯುವ ಹೊತ್ತಿಗೆ
ವೇದ ಘೋಷದ ದಿವ್ಯ ಲಹರಿಯು ಮನವ ತೊಳೆಯಲು ಮೆಲ್ಲಗೆ
ಬರುವ ಶ್ರೀಗುರು ಪಾದುಕೆಯ ದನಿ ಅನುರಣಿತವಾಗಲು ಮೌನಕೆ
ಸಿದ್ಧಗಂಗೆಯ ನೆಲವು ಜಲವು ನಮಿಸಿ ನಿಲುವುದು ಸುಮ್ಮನೆ

ಬೆಟ್ಟ ಬಂಡೆಯ ನಡುವೆ ಗಿಡ ಮರ ಹೂವನೆತ್ತಿರೆ ಪೂಜೆಗೆ
ದೇಗುಲದ ಪೂಜಾರತಿಯ ಗಂಟೆ ಮೊಳಗು ಮುಟ್ಟಲು ಬಾನಿಗೆ
ಧೂಪಗಂಧವು ಮಂದ ಮಂದಾನಿಲ ಜೊತೆಯೊಳು ಮನಸಿಗೆ
ಸಂಭ್ರಮವನುಕ್ಕಿಸೆ ಬೆಳಗು ಇಳಿವುದು ಸಿದ್ಧಗಂಗೆಯ ಕ್ಷೇತ್ರಕೆ

ಇಲ್ಲಿ ಇಲ್ಲ ಪವಾಡದದ್ಭುತ ಅಥವಾ ಉತ್ಸವದಬ್ಬರ
ಮುಡಿಯನೆತ್ತಿದೆ ಸರಳ ಸಾಧಾರಣದ ಬದುಕಿನ ಗೋಪುರ
ಅದರ ಮೇಲಿದೆ ತ್ಯಾಗ ಧ್ವಜ ಕೈಬೀಸಿ ಕರೆವುದು ಪಥಿಕರ
ಪರಮ ನಿರಪೇಕ್ಷೆಯಲಿ ದಿನವೂ ಸೇವೆಗಾಗಿದೆ ಸರ್ವರ

ಭಿಕ್ಷೆ ಹೊರಟಿದೆ ಜಂಗಮದ ಜೋಳಿಗೆ ಲಕ್ಷ ಜನಗಳ ಪೊರೆದಿದೆ
ತೀರ್ಥವಾಗಿದೆ ಭಕ್ತರಿಗೆ ಜೊತೆಗೇ ಸ್ಫೂರ್ತಿಯಾಗಿದೆ ಬುದ್ಧಿಗೆ
ಬಂದ ಹಣತೆಗೆ ಎಣ್ಣೆ ಬತ್ತಿಯ ದೀಪ್ತಿದಾನ ಮಾಡಿದೆ
ರಕ್ಷೆಯಾಗಿದೆ ಮುಗಿಲನೇರಿದ ಎಷ್ಟೊ ರೆಕ್ಕೆಯ ಹಾದಿಗೆ

ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ
ಕಾಯಕವೇ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ
ಕಾವಿಯುಡುಗೆಯನುಟ್ಟು ನಭವೇ ಕಿರಣಹಸ್ತವ ಚಾಚಿದೆ
ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ

□

# ನಡೆದಾಡುವ ದೇವ ಶರಣು ಶರಣು !

**ಪ್ರೊ. ಜಿ.ಎಚ್. ಹನ್ನೆರಡುಮಠ**

**ಸಿ**ದ್ಧಗಂಗೆಯ ಸಿದ್ಧ ಜ್ಞಾನಯೋಗದ ಬುದ್ಧ
ನಡೆದಾಡುವ ದೇವ ಶರಣು ಶರಣು
ಕಡಲು ಆರತಿ ನಿನಗೆ ಮುಗಿಲು ಪುಷ್ಪವು ನಿನಗೆ
ಸೂರ್ಯ ಚಂದ್ರರೆ ದೀಪ ಶರಣು ಶರಣು

ಬಸವ ತತ್ತ್ವದ ಶಿಖರ ವಚನ ವಾಙ್ಮಯ ಮುಕುರ
ಕಾಯಕದ ಶಿವಯೋಗಿ ಶರಣು ಶರಣು
ಅನ್ನ ಬ್ರಹ್ಮನು ನೀನೆ ನನ್ನಿ ಬ್ರಹ್ಮನು ನೀನೆ
ಕನ್ನಡದ ರಸಋಷಿಯೆ ಶರಣು ಶರಣು

ಕೋಟಿ ಕೂಗನು ಕೇಳು ನಿನ್ನ ಮಕ್ಕಳ ನೋಡು
ಜಗತಂದೆ ಯುಗತಂದೆ ತುಂಬಿ ಬಾರಾ
ಮಳೆಯಾಗಿ ಬೆಳೆಯಾಗಿ ಹಸಿರಾಗಿ ಹೂವಾಗಿ
ನಡೆದಾಡುವಾ ದೇವ ನಗಿಸಿ ಬಾರಾ

ನಿನ್ನ ಚಿತ್ತವೆ ಬ್ರಹ್ಮ ನಿನ್ನ ಚಿತ್ತವೆ ರುದ್ರ
ಜನಕುಲಕೆ ಮನುಕುಲಕೆ ಬೆಳಕು ತಾರಾ
ಕಡಲು ದೀಪವು ನಿನಗೆ ಭುವನ ಪತ್ರಿಯು ನಿನಗೆ
ಕೋಟಿಮಕ್ಕಳ ಕೂಗು ಕೇಳಿ ಬಾರಾ
ಸಿದ್ಧಗಂಗಾ ಶಿಖರ ಕುಣಿಸಿ ಬಾರಾssss
ಯುಗಕೋಟಿ ಜಗಕೋಟಿ ನಗಿಸಿ ಬಾರಾssss

**ಪ್ರೊ. ಜಿ.ಎಚ್. ಹನ್ನೆರಡುಮಠ,** ನಂ. 5, "ಮಾವುಮಲ್ಲಿಗೆ", ಇಂದ್ರಪ್ರಸ್ಥ ಕಾಲನಿ, ಗೊಟ್ಟಿಗೆರೆ ಅಂಚೆ, ಬೆಂಗಳೂರು - 560 083

# ಶ್ರೀ ಶಿವಕುಮಾರಸ್ವಾಮ್ಯಷ್ಟಕಂ

**ಶ್ರೀ ಕುಮಾರ ನಿಜಗುಣ ಸ್ವಾಮಿಗಳು, ಚಿಲಕವಾಡಿ**

ಶ್ರೀಗುರುವೆ ನಿಜದರಿವೆ ಶಾಂತಿಸುಖದಾಗರವೆ
ಭೋಗಭಾಗ್ಯವನೀವ ಭೂತಳದ ಸುರತರುವೆ
ನಾಗಭೂಷಣಭಕ್ತಜನರ ಭಾಗ್ಯೋದಯವೆ ದೀನಜನ
ವರಬಂಧುವೆ |

ತ್ಯಾಗತಳಹದಿ ಮೇಲೆ ನಿಂತ ಸುರಮಂದಿರವೆ
ಯೋಗಿಜನಮರಕತವೆ ಸೌಂದರ್ಯಸಾಗರವೆ
ಬಾಗಿ ಮಣಿಯುವೆ ಪ್ರಭುವೆ ಸಿದ್ಧಗಂಗಾ ಮಠದ
ಶಿವಕುಮಾರೇಶ ವಿಭುವೆ || 1 ||

ಶಿವರೂಪಮಂ ಧರಿಸಿ ಭುವಿಯಮೇಲವತರಿಸಿ
ಶಿವಶರಣ ತಿಂಥಿಣಿಯು ನಡೆದ ಮಾರ್ಗದಿ ಗಮಿಸಿ
ಸವಳಿಸಪ್ತಾವರಣ ಪರಮ ಪಂಚಾಚಾರ ಷಟ್ಸ್ಥಲಂಗಳ
ಬೋಧಿಸಿ |

ಭವಭವದಿ ಬಂದಿಳೆಗೆ ಬಹುವಾಗಿ ಬಳಲುತಿಹ
ಶಿವಭಕ್ತಸಂತತಿಯ ತ್ರೈಮಲವ ಕಳೆಯುತಿಹ
ಭವರೋಗ ಸದ್ವೈದ್ಯ ಶಿವಕುಮಾರೇಶಭವನಾಶಗೈಯೋ
ಪ್ರಭುವರಾ || 2 ||

ವರವಿದ್ಯೆ ಕುಲವನಿತೆ ಸವೆಯದಾನಂದ ಸುತ
ವಿರತಿಯನುಕೂಲಜನ ಶಾಂತಿಸುಖ ಮತಿಗೇಹ
ಪರಭಕ್ತಿಮಾತೆ ಸುಚರಿತಪಿತ ಕ್ಷಮೆಭೃತ್ಯನಾಚಾರ
ಸುಕ್ಷೇತ್ರವು |

ಸಿರಿಗುವರಿ ಸತ್ಯ ದಾಸಿಯಹಿಂಸೆ ತೊತ್ತನಪ
ಹರಣ ಮೈತ್ರ್ಯಾದಿಪೌತ್ರರು ಧರ್ಮರಥ ನಂಬು
ಗೆ ರಹಸ್ಯಜನ ಮುಕ್ತಿದೇಶವರಿವೆ ಗುರುವಹ
ಶಿವಕುಮಾರೇಶ ಶರಣು || 3 |

**ಕು**ಲಜಾತಿ ಮತವರ್ಣ ಯಾವುದನು ಲೆಕ್ಕಿಸದೆ
ದಲಿತಸೇವೆಯೆ ದೈವಸೇವೆಯೆಂಬುದ ತಿಳಿದು
ಬಲುಬಳಲಿ ಬಡತನದಿ ಬಳಿಸಾರ್ದ ಹಲವಾರು
ದಶನೂರು ಮಕ್ಕಳುಗಳ |

ಒಲುಮೆಯಿಂ ಮೈದಡವಿ ವಸ್ತ್ರವೋದನವಿತ್ತು
ಸಲಿಗೆಯಿಂ ಸಂತೈಸಿ ವಿದ್ಯೆಬುದ್ಧಿಯ ಕಲಿಸಿ
ಸಲೆ ಮುದದಿ ಪೊರೆಯುತಿಹ ಕಾರುಣ್ಯಗುಣಸಿಂಧು
ಕೃಪೆದೋರು ದೀನಬಂಧು || 4 ||

**ಮಾ**ರಮರ್ದನರೂಪಿ ಮೃದುಮಧುರಸಲ್ಲಾಪಿ
ಸಾರಗುಣಸಂಪನ್ನ ಶರಣಸಂಕುಲರನ್ನ
ಪಾರಮಾರ್ಥಜ್ಞಾನಿ ಷಟ್ಸ್ಥಲಸುವಿಜ್ಞಾನಿ
ಸುಜ್ಞಾನವರದಾನಿಯು |

ಚಾರುಮಂಗಳಮೂರ್ತಿ ಶಾಶ್ವತಾಮಲಕೀರ್ತಿ
ಕಾರುಣ್ಯಘನಶರಧಿ ವೈರಾಗ್ಯಪುಣ್ಯನಿಧಿ
ವೀರಶೈವಾಚಾರನಿಷ್ಠ ಜಂಗಮಶ್ರೇಷ್ಠ ಶಿವಕುಮಾರೇಶ
ಶರಣು || 5 ||

**ರ**ವಿಯುದಯಕೇಳೆಂಟು ಘಳಿಗೆ ಮುನ್ನವೆ ಎದ್ದು
ಜವದಿಂದ ಶೌಚಾದಿಗಳ ಮುಗಿಸಿ ಮೌನದಿಂ
ತವೆ ಮಿಂದು ಮಡಿಯುಟ್ಟು ತಾದಾತ್ಮ್ಯದಿಂದಿ
ಷ್ಟಲಿಂಗಾರ್ಚನೆಯಂ ತೀರಿಸಿ|

ಭುವಿಜನರ ಮಂಗಳ ಜಪತಪವನಾಚರಿಸಿ
ಕವಿಜನರ ಕಲ್ಪನೆಗೆ ಸಿಗದ ಶಿವನೊಳ್ಬೆರೆವ
ಶಿವಶರಣಕುಲತಿಲಕ ಶಿವಕುಮಾರೇಶ ವಿಭು ಶಿವಪಾದ
ತೋರೋ ಪ್ರಭು || 6 ||

**ಸ್ವಾ**ಮಿಯಾದವರಾದ ನೇಮನಿಷ್ಠೆಯ ಹಿಡಿದು
ಪ್ರೇಮಪಥದಿಂ ನಡೆಯಬೇಕೆಂಬುದಂ ತೋರಿ
ಕಾಮಿಸದೆ ಕಾಮಿನೀಕಾಂಚನಂಗಳನುಳಿದು
ವೈರಾಗ್ಯಮೂರ್ತಿಯೆನಿಸಿ |

ವ್ಯೋಮಕೇಶನ ಬೆರೆಯೆ ಹಗಲಿರುಳು ತಪಿಸುತಿಹ
ಕಾಮಾರಿಭಕ್ತಜನ ಹೃದಯದೊಳ್ನೆಲೆಸಿರ್ಪ
ಸೋಮಧರಸಮರೂಪ ಶಿವಕುಮಾರೇಶ ವಿಭು
ಬಿಡದೆಮ್ಮ ಕಾಯೋ ಪ್ರಭು|| 7 ||

**ಮಿ**ಸುನಿವಣ್ಣದ ಮೈಗೆ ಹಸನು ಕಾವಿಯ ಧರಿಸಿ
ಲಸಿತಭಸಿತವ ಪೂಸಿ ನೊಸಲ ಮಿಗೆ ಸಿಂಗರಿಸಿ
ಎಸೆವ ರುದ್ರಾಕ್ಷಿಯಿಂ ಕೊರಳನ್ನಲಂಕರಿಸಿ
ವಿನಯದಿಂದನವರತವು |

ತುಸು ಬಾಗಿ ಶೋಭಿಸುವ ತಲೆಗೆ ಮುಂಡಾಸಿರಿಸಿ
ಮಸುಳಿಸದ ಸೂರ್ಯಸಮತೇಜದಿಂ ಕಂಗೊಳಿಪ
ಅಸಮಾಕ್ಷಸಮರೂಪ ಶಿವಕುಮಾರೇಶ ವಿಭು ಸದ್ಗತಿಯ
ತೋರೋ ಪ್ರಭು || 8 ||

# ಪವಾಡಪುರುಷ

**ದೊಡ್ಡಬಾಣಗೆರೆ ಪ್ರಕಾಶಮೂರ್ತಿ**

ಪ್ರಣವರೂಪಿ ಶಿವಸ್ವರೂಪಿ ಮಹಾಸ್ವಾಮಿ ಗುರುವರ |
ಘನವಿಶೇಷ ಗುಣಗಣಾಧಿಪತಿಯೆ ಪ್ರಭುವೆ ಶಂಕರ ||

ಸಿದ್ಧಗಂಗಾ ಕ್ಷೇತ್ರಪಾಲ ಭಕ್ತಕೋಟಿ ಚಂದಿರ |
ಶುದ್ಧಮನದ ಭಕ್ತಿ ನಲಿವ ಶಕ್ತ ತಪೋ ಮಂದಿರ ||
ಬದ್ಧ ನಿಲುಮೆ ಸಿದ್ಧ ಗೆಲುಮೆ ವರ ಪವಾಡ ಬಂಧುರ |
ಸಿದ್ಧನೀತ ಕೀರ್ತಿಚತುರ ಜಗದಗಲಕು ಬಿತ್ತರ || 1 ||

ದಟ್ಟಭಕ್ತಿ ವಿಚಾರಶಕ್ತ ಸುಸಂಸ್ಕೃತಿಯ ಆಗರ |
ದಿಟ್ಟ ನಿಲುವು ದೈವಭಕ್ತಿಗೊಲವು ಕೊಟ್ಟ ಸಾಗರ ||
ಶಿಷ್ಟವಿದ್ಯೆ, ಅನ್ನ, ವಸತಿ ಮಹಾದಾನಿ ಗುರುವರ |
ಪುಷ್ಟಿಕರದ ಸಂಸ್ಕೃತ ನುಡಿ ವಿದ್ಯಾಗುರುವು ನೇಸರ || 2 ||

ಕಾಮಧೇನು ಕಲ್ಪವೃಕ್ಷ ಕರ್ನಾಟಕ ಸಂತರು|
ಕರ್ಮಯೋಗಿ ಶರಣಸಿಂಧು ನಡೆದಾಡುವ ದೇವರು ||
ನಿರ್ಮಲಾತ್ಮ ಕರ್ಮಶೀಲ ಭಕ್ತ ಬಂಧು ಶಿವಸುತ |
ಧರ್ಮಚಿತ್ತ ನ್ಯಾಯಪಾಲ ಸತ್ಯ ಸಿಂಧು ಶಿವಪಥ || 3 ||

ನಗೆ ತುಳುಕಿದ ನಮ್ರ ಭಾವ ಸದಾಕ್ಷೇತ್ರ ಚಿಂತನ |
ಹಗಲು ರಾತ್ರಿ ಕ್ಷೇತ್ರ ಪ್ರಗತಿಗಾಗಿ ದಣಿವ ಚೇತನ ||
ಶಕ್ತ ಶ್ರೀ ವಿಭೂತಿಪುರುಷ ನಿತ್ಯಸೇವೆ ಸಾಧನ |
ಭಕ್ತಕೋಟಿ ಬಡವ ಬಂಧು ಸೇವಕರ್ತ ಚಂದನ || 4 ||

ಘನತೆವೆತ್ತ ಭಕ್ತಿನಿಪುಣ ಪೂಜಾಸಕ್ತ ತನುಮನ |
ದಿನಚರಿಯಲಿ ಶಿಸ್ತಿನ ಧಣಿ ಸಮಯನಿಷ್ಠ ಸಜ್ಜನ ||
ಧನ್ಯಗುರು ವಿರಾಜಶ್ರೇಷ್ಠ ಸಂತ ರತ್ನ ಸದ್ಗುಣ |
ಮಾನ್ಯ ತಪೋಬಲದ ಗುರುವು ಪವಾಡಪುರುಷ ನಿರಂಜನ || 5 ||

**ದೊಡ್ಡಬಾಣಗೆರೆ ಪ್ರಕಾಶಮೂರ್ತಿ,** ನಂ. 4, ಗೀತಾ ನಿಲಯ, 5ನೇ ಕ್ರಾಸ್, ರಾಜೇಂದ್ರ ನಗರ, ಚಿತ್ರದುರ್ಗ 577 501

# ಶಿವಕುಮಾರ ಶ್ರೀಗಳು ಭಾರತ ರತ್ನ ಅಲ್ಲ, ವಿಶ್ವ ರತ್ನ

**ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು**
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ

**ಜ**ನವರಿ 21, ಸೋಮವಾರ ಮಧ್ಯಾಹ್ನ. ಅಂದು ಸಿರಿಗೆರೆಯಲ್ಲಿ ನಮ್ಮ ಸದ್ಧರ್ಮ ನ್ಯಾಯಪೀಠದ ಕಾರ್ಯಕಲಾಪಗಳು ನಡೆಯುತ್ತಿದ್ದವು. ಯಾವುದೋ ಪ್ರಕರಣದ ವಿಚಾರಣೆಯ ಮಧ್ಯೆ ಮೊಬೈಲ್ ರಿಂಗಣಿಸಿತು. ಕರೆಯನ್ನು ಸ್ವೀಕರಿಸಿದಾಗ ಆಚೆಕಡೆಯಿಂದ ಮಾತನಾಡಿದವರು ದಾರುಣವಾದ ಸುದ್ದಿಯನ್ನು ನೀಡಿದರು. ನಡೆದಾಡುವ ದೇವರೆಂದೇ ಖ್ಯಾತರಾದ ಸಿದ್ಧಗಂಗಾ ಶ್ರೀಗಳು ಶಿವಸಾಯುಜ್ಯ ಹೊಂದಿದರು ಎಂಬುದೇ ಆ ಸುದ್ದಿ. ನಂಬುವುದು ಬಹಳ ಕಷ್ಟವಾಯಿತು. ಕೆಲವು ದಿನಗಳ ಹಿಂದಷ್ಟೇ ತುಮಕೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರನ್ನು ಭೇಟಿ ಮಾಡಲು ಹೋದಾಗ ಗಾಢ ನಿದ್ರೆಯಲ್ಲಿದ್ದರು. ದೀರ್ಘವಾಗಿ ಉಸಿರಾಡುತ್ತಿದ್ದರು. ವೈದ್ಯರು ಅವರ ಹೃದಯದ ನಾಡಿ ಮಿಡಿತ, ಉಸಿರಾಟ ಎಲ್ಲವೂ Normal ಆಗಿಯೇ ಇದೆ ಎಂದು ಹೇಳಿದ್ದರು. ಕಿರಿಯ ಶ್ರೀಗಳವರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳವರು ಅವರ ಭುಜವನ್ನು ಅಲ್ಲಾಡಿಸಿ ಸಿರಿಗೆರೆ ಗುರುಗಳು ತಮ್ಮನ್ನು ನೋಡಲು ಬಂದಿದ್ದಾರೆ ಎಂದು ಏರುದನಿಯಲ್ಲಿ ಹೇಳಿ ಅವರನ್ನು ಎಚ್ಚರಿಸಲು ಯತ್ನಿಸಿದರು. ಅವರಿಗೆ ನಿದ್ರಾಭಂಗವಾಗಬಾರದೆಂದು ತಕ್ಷಣವೇ ತಡೆದು ನಿಲ್ಲಿಸಿ ಅವರ ಮುಖವನ್ನೇ ದಿಟ್ಟಿಸಿ ನೋಡುತ್ತಾ ನಿಂತಾಗ ಅವರ ಮುಖದಲ್ಲಿ ಲೌಕಿಕ ಜೀವನದ ಯಾವ ಹಂಗೂ ಇಲ್ಲದ 'ಸ್ಥಿತಪ್ರಜ್ಞ' ಮುಖಭಾವ ಕಣ್ಣಿಗೆ ಗೋಚರಿಸುತ್ತಿತ್ತು.

ಈ ಹಿಂದೆ ಎಷ್ಟೋ ಸಲ ಜವರಾಯ ಶ್ರೀಗಳವರೊಂದಿಗೆ ಕಣ್ಣಾಮುಚ್ಚಾಲೆ ಆಡಿದ್ದ. ಅತಿ ಸಮೀಪಕ್ಕೆ ಬಂದಾಗಲೂ ಅವರನ್ನು ಮುಟ್ಟುವ ಧೈರ್ಯ ಅವನಿಗೆ ಇರಲಿಲ್ಲ. ಪವಾಡವೆಂಬಂತೆ ಅವನನ್ನು ಹಿಮ್ಮೆಟ್ಟಿಸಿ ಚೇತರಿಸಿಕೊಂಡು ಬದುಕಿ ಉಳಿದಿದ್ದರು. ಈ ಸಲವೂ ಹಾಗೇ ಆಗುತ್ತದೆಂಬ ನಮ್ಮ ನಿರೀಕ್ಷೆ ಹುಸಿಯಾಗಿತ್ತು. ಹಿರಿಯ ತಲೆಮಾರಿನ ಕೊನೆಯ ಕೊಂಡಿ ಕೊನೆಗೂ ಕಳಚಿ ಬಿದ್ದಿತ್ತು! ನ್ಯಾಯಪೀಠದ ಕಲಾಪವನ್ನು ಮುಂದೂಡಿ ಅವಸರವಸರವಾಗಿ ಸಿದ್ಧಗಂಗೆಯತ್ತ ಧಾವಿಸಿದೆವು. ಹಿಂದೊಮ್ಮೆ ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದ ಶ್ರೀಗಳವರನ್ನು ಭೇಟಿ ಮಾಡಲು ಹೋಗಿದ್ದಾಗ ನುರಿತ ವೈದ್ಯಕೀಯ ತಂಡದವರೇ ವಿಸ್ಮಯಗೊಳ್ಳುವಂತೆ

ಚೇತರಿಸಿಕೊಂಡಿದ್ದರು. ನಮ್ಮ ಜತೆ ಉಭಯ ಕುಶಲೋಪರಿ ಮಾತುಗಳ ನಂತರ ವೈದ್ಯರತ್ತ ತಿರುಗಿ "Very hard-working Swamiji' ಎಂದು ನಮ್ಮನ್ನು ಪರಿಚಯಿಸಿದರು. ಶ್ರೀಗಳವರಿಗೆ ಹಳ್ಳಿಯ ರೈತರೆಂದರೆ ಬಹಳ ಪ್ರೀತಿ. ಅವರ ಕಷ್ಟಗಳಿಗೆ ಮಮ್ಮಲ ಮರುಗುವ ಹೃದಯ. ಯಾರೇ ದರ್ಶನಕ್ಕೆ ಬಂದರೂ ಅವರು ಕೇಳುತ್ತಿದ್ದ ಮೊಟ್ಟಮೊದಲ ಪ್ರಶ್ನೆ: "ನಿಮ್ಮ ಕಡೆ ಮಳೆ ಬೆಳೆ ಹೇಗೆ?" ಅವರ-ನಮ್ಮ ಭೇಟಿಯಾದಾಗಲೆಲ್ಲಾ ನಮಗೂ ಇದೇ ಪ್ರಶ್ನೆ. ಅವರಿಗೆ ಭಕ್ತರ ಚಿಂತೆ ಬಿಟ್ಟರೆ ತಮ್ಮ ಆರೋಗ್ಯದ ಬಗ್ಗೆ ಚಿಂತೆ ಇರಲಿಲ್ಲ. ಅಂದು ಆಸ್ಪತ್ರೆಯಿಂದ ಬಿಡುಗಡೆಗೊಂಡು ಸಿದ್ಧಗಂಗೆಗೆ ಪ್ರಯಾಣ ಬೆಳೆಸುವುದರಲ್ಲಿದ್ದರು. ಚಿಕಿತ್ಸೆ ನೀಡಿದ ವೈದ್ಯರಿಗೆ ಮತ್ತು ಆಸ್ಪತ್ರೆ ಸಿಬ್ಬಂದಿಗೆ ಕಿರಿಯ ಶ್ರೀಗಳು ನಮ್ಮ ಕೈಯಿಂದಲೇ ನೆನಪಿನ ಕಾಣಿಕೆಗಳನ್ನು ಕೊಡಿಸಿದರು. ಅದೊಂದು ಕೃತಜ್ಞತೆಯನ್ನು ಸೂಚಿಸುವ ಅನೌಪಚಾರಿಕ ಸಭೆಯಾಗಿತ್ತು!

ಶ್ರೀಗಳೊಂದಿಗೆ ಪಾಲ್ಗೊಂಡ ಅನೇಕ ಸಭೆ-ಸಮಾರಂಭಗಳು ನಮ್ಮ ಕಣ್ಮುಂದೆ ಈಗಲೂ ಹಚ್ಚಹಸಿರಾಗಿವೆ. ವೇದಿಕೆಯನ್ನು ಮೇಲೇರುತ್ತಿದ್ದಂತೆಯೇ ನಮ್ಮ ಗುರುಗಳ ಸಮಾನರಾಗಿದ್ದ ಅವರು ವಯಸ್ಸಿನಲ್ಲಿ ಹಿರಿಯರಾಗಿದ್ದರೂ ಎದ್ದುನಿಂತು ಕೊಡುತ್ತಿದ್ದ ಗೌರವ ನಮಗೆ ಮುಜುಗರವನ್ನುಂಟುಮಾಡುತ್ತಿತ್ತು. ಶ್ರೀಗಳು ಸಭೆ ಸಮಾರಂಭಗಳಲ್ಲಿ ನೀಡುತ್ತಿದ್ದ ಆಶೀರ್ವಚನ ಜನರನ್ನು ನೋಡುತ್ತಾ ಅಲ್ಲ; ತಲೆ ಬಾಗಿಸಿ ತಮ್ಮ ಆತ್ಮದ ಜೊತೆ ಸಂಭಾಷಣೆ ಮಾಡಿದ ರೀತಿಯಲ್ಲಿರುತ್ತಿತ್ತು. ಕೆಲವು ವರ್ಷಗಳ ಹಿಂದೆ ಸುತ್ತೂರು ಮಠದಲ್ಲಿ ಒಂದು ಕಾರ್ಯಕ್ರಮವಿತ್ತು. ಮಠದ ಗದ್ದುಗೆಯ ಮೇಲೆ ತುಂಬಾ ಎತ್ತರದಲ್ಲಿದ್ದ ಗೋಪುರದ ಕಲಶಾರೋಹಣ, ಯುವಸ್ವಾಮಿಗಳೂ ನಾಚುವಂತೆ ಪಾದರಸದಷ್ಟು ಚುರುಕಾಗಿ ಶಿಖರವನ್ನೇರಿ ಕಲಶಾರೋಹಣ ನೆರವೇರಿಸಿದರು. ಈಗ್ಗೆ ಎರಡು ತಿಂಗಳ ಹಿಂದೆ ಸಿದ್ಧಗಂಗಾ ಮಠದ ಶಿಷ್ಯರು ನಮ್ಮನ್ನು ಕಂಡು ಗುರುಗಳ 112ನೇ ಜನ್ಮದಿನಾಚರಣೆಯಲ್ಲಿ ಭಾಗವಹಿಸಲು ಒಪ್ಪಿಸಿಕೊಂಡಿದ್ದರು (ಏಪ್ರಿಲ್ 1ಕ್ಕೆ ಅವರಿಗೆ 112 ವರ್ಷ ತುಂಬುತ್ತಿತ್ತು). ಕ್ರಿಕೆಟ್ ಆಟದ ಮೈದಾನದಲ್ಲಿ ನೂರು ರನ್ ಬಾರಿಸಿ ಶತಕವೀರನೆನಿಸಿಕೊಂಡವರು ಅನೇಕರಿದ್ದಾರೆ. ಆದರೆ ಬದುಕಿನ ಕ್ರಿಕೆಟ್‌ನಲ್ಲಿ ಶತಕ ಬಾರಿಸುವವರು ಅಪರೂಪ. ಶ್ರೀಗಳದು ಶತಮಾನ ದಾಟಿ ಬದುಕಿದ ಜಗತ್ತಿನ ದೀರ್ಘಾಯುಷಿಗಳಲ್ಲಿ ಆರನೆಯ ಶ್ರೇಯಾಂಕ; ಭಾರತದಲ್ಲಿ ಅವರದು ಮೊದಲನೆಯ ಸ್ಥಾನ!

ಇದೇ ಜನವರಿ ತಿಂಗಳು ಉತ್ತರ ಭಾರತದ ಪ್ರಯಾಗದಲ್ಲಿ ಮಕರಸಂಕ್ರಮಣದ ದಿನ ಕುಂಭಮೇಳ; ಅಂದು ಗಂಗೆಯಲ್ಲಿ ಮೀಯಲು ದೇಶಾದ್ಯಂತ ಆಗಮಿಸಿದ ಲಕ್ಷಾಂತರ ಜನರ ಮಹಾಸಾಗರ. ಈ ವರ್ಷ ಎರಡು ಕುಂಭಮೇಳಗಳು ನಡೆದಂತಾಗಿವೆ - ಒಂದು ಉತ್ತರ ಭಾರತದ ಪ್ರಯಾಗದಲ್ಲಿ ಶತಶತಮಾನಗಳಿಂದಲೂ ನಡೆದುಕೊಂಡು ಬಂದಿರುವ

ಕುಂಭಮೇಳ; ಮತ್ತೊಂದು ದಕ್ಷಿಣ ಭಾರತದ ಸಿದ್ಧಗಂಗೆಯಲ್ಲಿ ಜನವರಿ 21-22 ರಂದು ನಡೆದ ಭಕ್ತಿಸಂಕ್ರಮಣದ ಕುಂಭಮೇಳ. ಮಕರಸಂಕ್ರಮಣದ ಕೆಲವೇ ದಿನಗಳ ನಂತರ ನಡೆದ ಈ ಎರಡನೆಯ 'ಕುಂಭಮೇಳ'ದ ಭಕ್ತಿಯ ರಸಗಂಗೆಯಲ್ಲಿ ಮೀಯಲು ಲಕ್ಷೋಪಲಕ್ಷ ಜನರ ಸಾಗರ. ಶ್ರೀಗಳ ಅಂತಿಮ ದರ್ಶನಕ್ಕೆ ಹರಿದುಬಂದಿತ್ತು ಹತ್ತಾರು ಕಿಲೋಮೀಟರುಗಳ ಸರತಿಯ ಸಾಲಿನಲ್ಲಿ. ದಿವಂಗತ ಪ್ರಧಾನಿ ವಾಜಪೇಯಿ ಸರಿಯಾಗಿಯೇ ಹೇಳಿದ್ದಾರೆ: "ಉತ್ತರ್ ಮೇ ಗಂಗಾ, ದಕ್ಷಿಣ್ ಮೇ ಸಿದ್ಧಗಂಗಾ!" ಪ್ರಯಾಗಕ್ಕೆ ಎತ್ತರದ ಹಿಮಾಲಯದಿಂದ ಅಧೋಮುಖವಾಗಿ ಗಂಗೆ ಹರಿದು ಬಂದರೆ ಸಿದ್ಧಗಂಗೆಯ ಎತ್ತರದ ಬೆಟ್ಟಕ್ಕೆ ಊರ್ಧ್ವಮುಖವಾಗಿ ಏರಿಬಂದಿತ್ತು ಹಳ್ಳಿಹಳ್ಳಿಗಳಿಂದ, ನಗರ ಪಟ್ಟಣಗಳಿಂದ ಭಕ್ತಿಯ ರಸಗಂಗೆ! ಅದು ಗುರುಭಕ್ತಿಯ ಮಹಾಪೂರ! ಇಡೀ ರಾಜ್ಯ ಸರಕಾರವೇ ಅಂದು ಸಿದ್ಧಗಂಗೆಯಲ್ಲಿತ್ತು - ದೇವರ ಸನ್ನಿಧಿಯಲ್ಲಿ ಹುಲಿ, ಸಿಂಹ, ಹಂದಿ, ನವಿಲು, ಕಾಡಾನೆ, ಹಾವು, ಇಲಿ - ಹೀಗೆ ಎಲ್ಲವೂ ಆಜನ್ಮ ವೈರತ್ವವನ್ನು ತೊರೆದು ಒಟ್ಟಿಗೆ ಇರುವಂತೆ ಆಳುವ ಪಕ್ಷ ವಿರೋಧ ಪಕ್ಷ ಎಂಬ ಭೇದಭಾವ ಇಲ್ಲದೆ ಎಲ್ಲ ರಾಜಕೀಯ ಪ್ರಮುಖರೂ ಎರಡೂ ದಿನ ಸಿದ್ಧಗಂಗೆಯ ಬೆಟ್ಟದ ತಪ್ಪಲಿನಲ್ಲಿ ಒಟ್ಟಾಗಿ ಸೇರಿದ್ದರು! ಅವರೆಲ್ಲ ಗಂಟೆಗಟ್ಟಲೆ ಶಾಂತವಾಗಿ ಒಟ್ಟಿಗೆ ಕುಳಿತ ದೃಶ್ಯ ನೋಡಿದವರಿಗೆ ಒಂದು ರೀತಿಯಲ್ಲಿ 'ರಾಜಕೀಯ ಕದನ ವಿರಾಮ'ದಂತೆ ಕಾಣಿಸುತ್ತಿತ್ತು! ಅಶಾಂತ ಮನಸ್ಸಿನಿಂದ ತೊಳಲಾಡುತ್ತಿದ್ದ ಅವರಿಗೂ ಅದರ ಅವಶ್ಯಕತೆ ಇತ್ತು!

ಶ್ರೀಗಳು ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದ ಪಟೇಲ್ ಹೊನ್ನಯ್ಯ-ಗಂಗಮ್ಮ ದಂಪತಿಗಳ 13ನೇ ಮಗನಾಗಿ ಜನಿಸಿದರು (ಏಪ್ರಿಲ್ 1, 1908). ಕೊನೆಯ ಮಗನಾಗಿ ತಂದೆ ತಾಯಿಗಳ ಕಣ್ಮಣಿಯಾಗಿದ್ದ ಅವರ ಜನ್ಮನಾಮ ಶಿವಣ್ಣ. 1927ರಲ್ಲಿ ಆಗಿನ ಸಿದ್ಧಗಂಗಾ ಮಠಾಧಿಪತಿಗಳಾಗಿದ್ದ ಶ್ರೀ ಉದ್ದಾನ ಶಿವಯೋಗಿಗಳವರ ಕೃಪಾಕಟಾಕ್ಷ ಅವರಿಗೆ ದೊರೆಯಿತು. ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಆಶ್ರಯ ಪಡೆದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಶಿವಣ್ಣ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಸಿದ್ಧಗಂಗಾ ಮಠದಲ್ಲಿ ಒಂದು ದುರ್ಘಟನೆ ನಡೆಯಿತು. 1930 ರಲ್ಲಿ ಶ್ರೀ ಉದ್ದಾನ ಶಿವಯೋಗಿಗಳ ನಿಯೋಜಿತ ಉತ್ತರಾಧಿಕಾರಿ ಶ್ರೀ ಮರುಳಾರಾಧ್ಯರು ಆಕಸ್ಮಿಕವಾಗಿ ಲಿಂಗೈಕ್ಯರಾದರು. ಕ್ರಿಯಾಸಮಾಧಿಗೆ ಬಂದಿದ್ದ ಶಿವಣ್ಣನವರನ್ನು ಗುರುಗಳು ತಮ್ಮ ಉತ್ತರಾಧಿಕಾರಿ ಎಂದು ಘೋಷಿಸಿಯೇ ಬಿಟ್ಟರು! ಶ್ರೀ ಶಿವಕುಮಾರ ಸ್ವಾಮಿಗಳೆಂಬ ಅಭಿದಾನ ನೀಡಿಯೂ ಬಿಟ್ಟರು. ಬಿಳಿಯುಡುಗೆ ಉಟ್ಟು ಸಿದ್ಧಗಂಗೆಗೆ ಬಂದಿದ್ದ ಶಿವಣ್ಣ ಕಾಷಾಯವಸ್ತ್ರ ಧರಿಸಿ ಶಿವಕುಮಾರ ಸ್ವಾಮಿಗಳಾಗಿ ಬೆಂಗಳೂರಿಗೆ ಮರಳಿ ವಿದ್ಯಾಭ್ಯಾಸ ಮುಂದುವರಿಸಿದರು. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಮಠಕ್ಕೆ ಹಿಂದಿರುಗಿ ಅಂದಿನಿಂದ ಮಠದ ಏಳಿಗೆಗೆ ತಮ್ಮ ಸಂಪೂರ್ಣ ಸಮಯವನ್ನು

ಮೀಸಲಿಟ್ಟರು. ಮುಂದೆ ಶ್ರೀ ಉದ್ದಾನ ಶಿವಯೋಗಿಗಳವರು ಲಿಂಗೈಕ್ಯರಾದ ನಂತರ ಮಠದ ಸಂಪೂರ್ಣ ಉಸ್ತುವಾರಿ ಶ್ರೀಗಳವರ ಹೆಗಲೇರಿತು. ಆರಂಭದ ದಿನಗಳು ಬಹಳ ಕಷ್ಟದ ದಿನಗಳು. ಅನೇಕ ಕಷ್ಟಕಾರ್ಪಣ್ಯಗಳನ್ನು ಅವರು ಹೊತ್ತು ನಿತ್ತರಿಸಿದರು. ಆಗ ಮಠದ ಆದಾಯ ತೀರಾ ಕಡಿಮೆ. ಶ್ರೀಗಳು ಹಳ್ಳಿಹಳ್ಳಿಗಳಿಗೆ ಕಾಲುನಡಿಗೆಯಲ್ಲೇ ಭಕ್ತರ ಮನೆಮನೆಗೆ ತೆರಳಿ ದನಸಧಾನ್ಯಗಳನ್ನು ಸಂಗ್ರಹಿಸಿ ಬಡಮಕ್ಕಳಿಗೆ ಅನ್ನದಾನ ಮಾಡಿದರು. ಬರಬರುತ್ತಾ ಮಠ ಪ್ರವರ್ಧಮಾನಕ್ಕೆ ಬಂದಿತು. ಸಿದ್ಧಗಂಗಾ ಮಠ ದೇಶದ ಭೂಪಟದಲ್ಲಿ ಒಂದು ಸ್ಥಾನ ಪಡೆಯಲು ಶ್ರೀಗಳವರ ಕಾಯಕನಿಷ್ಠೆಯೇ ಕಾರಣ.

ಉತ್ತರ ಭಾರತದ ಪ್ರಯಾಗದಲ್ಲಿ ಮೂರು ನದಿಗಳು ಸಂಗಮಿಸುತ್ತವೆ - ಗಂಗಾ, ಯಮುನಾ ಮತ್ತು ಅಂತರಗಾಮಿಯಾದ ಸರಸ್ವತೀ. ಇಲ್ಲಿ ಪುಣ್ಯಸ್ನಾನ ಮಾಡಲು ಶ್ರದ್ಧಾಳುಗಳು ಹಾತೊರೆಯುತ್ತಾರೆ. ಪ್ರಯಾಗದಂತೆ ಕರ್ನಾಟಕದಲ್ಲಿ ಮೂರು ಮಠಗಳ 'ತ್ರಿವೇಣಿ ಸಂಗಮ'ವಿದೆ - ಅದೇ ಸಿದ್ಧಗಂಗಾ, ಸಿರಿಗೆರೆ ಮತ್ತು ಸುತ್ತೂರು. ಈ ಮೂರೂ ಮಠಗಳ ಸಂಗಮದಲ್ಲಿ ಮಿಂದೆದ್ದವರು ಲಕ್ಷಾಂತರ ಬಡಮಕ್ಕಳು. ಈ ಮಠಗಳ ಹಿರಿಯ ಗುರುವರ್ಯರುಗಳಿಗೆ ಲಿಂಗಪೂಜೆಗಿಂತಲೂ ಬಡ ಮಕ್ಕಳ ಬಾಳನ್ನು ರೂಪಿಸುವ ಅನ್ನದಾನ, ವಿದ್ಯಾದಾನಗಳೇ ಮಹಾಪೂಜೆಯಾಗಿತ್ತು. ನಮ್ಮ ವಿದ್ಯಾಗುರುಗಳಾದ ರಾಷ್ಟ್ರಕವಿ ಶಿವರುದ್ರಪ್ಪನವರ ಬದುಕು ಅರಳಿದ್ದು ಸಿದ್ಧಗಂಗಾ ಮಠದಲ್ಲಿಯೇ. ತಾವು ವಿದ್ಯೆ ಪಡೆದ ಸಿದ್ಧಗಂಗೆಯ ಶ್ರೀಚರಣಕ್ಕೆ ಅರ್ಪಿಸಿದ ಅವರ ಅಕ್ಷರ ಕುಸುಮ ಹೀಗಿದೆ:

ಭಿಕ್ಷೆಹೊರಟಿದೆ ಜಂಗಮದ ಜೋಳಿಗೆ,
ಲಕ್ಷ ಜನಗಳ ಪೊರೆದಿದೆ;
ತೀರ್ಥವಾಗಿದೆ ಭಕ್ತರಿಗೆ, ಚಿರಸ್ಫೂರ್ತಿಯಾಗಿದೆ ಬುದ್ಧಿಗೆ
ಬಂದ ಹಣತೆಗೆ ಎಣ್ಣೆ - ಬತ್ತಿಯ - ದೀಪ್ತಿದಾನವ ಮಾಡಿದೆ
ರಕ್ಷೆಯಾಗಿದೆ ಮುಗಿಲನೇರಿದ ಎಷ್ಟೋ ರೆಕ್ಕೆಯ ಹಾದಿಗೆ

ಜೀವನದ ಉದ್ದಕ್ಕೂ ಪರಾರ್ಥಕ್ಕಾಗಿ ಶರೀರವನ್ನು ಸವೆಸಿದ ಮಹಾನ್ ಶಿವಯೋಗಿ ಶ್ರೀ ಶಿವಕುಮಾರ ಸ್ವಾಮಿಗಳವರದು ಸಮಾಜಮುಖಿ ಬದುಕು; ಉರಿಯುಂಡ ಕರ್ಪೂರದಂತಹ ಬದುಕು. ನಮ್ಮ ಗುರುವರ್ಯರು ಮತ್ತು ಸಿದ್ಧಗಂಗೆಯ ಲಿಂಗೈಕ್ಯ ಗುರುವರ್ಯರ ಮಧ್ಯೆ ಸುಮಧುರ ಸಂಬಂಧವಿತ್ತು. ಕಾಕತಾಳೀಯವೆಂಬಂತೆ ಇಬ್ಬರ ಹೆಸರೂ ಸಹ ಒಂದೇ - ಶ್ರೀ ಶಿವಕುಮಾರ ಸ್ವಾಮಿಗಳು. ನಮ್ಮ ಗುರುಗಳವರು ಅವರನ್ನು ನಮ್ಮ ಮಠದ ವಾರ್ಷಿಕ ಸಮಾರಂಭವಾದ ತರಳಬಾಳು ಹುಣ್ಣಿಮೆ ಮಹೋತ್ಸವಕ್ಕೆ ಆಹ್ವಾನಿಸಿದಾಗಲೆಲ್ಲಾ ಅವರು ತುಂಬ ಪ್ರೀತಿ ಮತ್ತು ಅಭಿಮಾನಗಳಿಂದ ಭಾಗವಹಿಸುತ್ತಿದ್ದರು. ನಮ್ಮ ಗುರುಗಳವರೂ ಅಷ್ಟೇ ಪ್ರೀತ್ಯಾದರದಿಂದ ಸಿದ್ಧಗಂಗೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಪರಸ್ಪರ ಭೇಟಿಯಾದಾಗ ಇಬ್ಬರ ಕೈಗಳು

ಪರಸ್ಪರ ಹಿಡಿಯುತ್ತಿದ್ದವು; ಕ್ಷಣಮಾತ್ರದಲ್ಲಿ ಒಬ್ಬರೊಬ್ಬರ ಪಾದಕ್ಕೆ ನಮಸ್ಕರಿಸಿಬಿಡುತ್ತಿದ್ದರು! 1979 ರಲ್ಲಿ ನಮ್ಮ ಪಟ್ಟಾಭಿಷೇಕ ಸಿರಿಗೆರೆಯಲ್ಲಿ ಜರುಗಿದಾಗ ಪಾಲ್ಗೊಂಡು ನಮ್ಮನ್ನು ಆಶೀರ್ವದಿಸಿದ್ದರು. ನಮ್ಮ ಕಾಲದಲ್ಲೂ ಎರಡೂ ಮಠಗಳ ಸಂಬಂಧ ಹಿಂದಿನಷ್ಟೇ ಸುಮಧುರವಾಗಿ ಮುಂದುವರಿದಿದೆ.

ಇಂದು ಸಿದ್ಧಗಂಗೆಯಲ್ಲಿ ಅವರ ಶ್ರದ್ಧಾಂಜಲಿ ಸಮಾರಂಭ. ಜನ್ಮಜನ್ಮಾಂತರಗಳಲ್ಲಿಯೂ ತೀರಿಸಲಾರದಷ್ಟು ಋಷಿ ಋಣ ಭಕ್ತಸಮುದಾಯದ ಮೇಲಿದೆ. ವಾರದ ಹಿಂದೆ ಬೆಟ್ಟದ ತಪ್ಪಲಿನಲ್ಲಿ ನಡೆದ ಅವರ ಕ್ರಿಯಾ ಸಮಾಧಿಯ ಬಳಿ ನೆರೆದಿದ್ದ ಭಕ್ತರು ಗುರುಗಳವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಬೇಕೆಂದು ಘೋಷಣೆಗಳನ್ನು ಕೂಗುತ್ತಿದ್ದರು. ಭಾರತ ರತ್ನ ಅವರ ವ್ಯಕ್ತಿತ್ವಕ್ಕೆ ತುಂಬಾ ಚಿಕ್ಕದು. ಸರಕಾರ ಅವರಿಗೆ ಭಾರತ ರತ್ನ ಕೊಡದೇ ಇದ್ದರೂ ಆ ಪ್ರಶಸ್ತಿಯನ್ನು ಮೀರಿಸುವ ಘನ ವ್ಯಕ್ತಿತ್ವ ಅವರದು. ಅವರು ಭಾರತ ರತ್ನ ಅಲ್ಲ, ವಿಶ್ವ ರತ್ನ! **(ಕೃಪೆ: ವಿಜಯ ಕರ್ನಾಟಕ)**

---

## ದೇಶ ಕಂಡ ದೊಡ್ಡ ಶಿವಜ್ಞಾನಿ

ಶ್ರೀ ಶಿವಕುಮಾರ ಸ್ವಾಮೀಜಿ ಅವರು 111 ವರ್ಷ ಕಾಲ ಭೂಮಿಯ ಮೇಲೆ ನಡೆದಾಡಿದರು. ಪೂರ್ಣತ್ವದ ಸಾಕಾರ ಅವರು. ಭಾರತ ಕಂಡ ಅತ್ಯಂತ ದೊಡ್ಡ ಶಿವಜ್ಞಾನಿಯವರು. ಕರ್ನಾಟಕದಲ್ಲಿ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಕ್ರಾಂತಿ ಸೃಷ್ಟಿಸಿದವರು. ಅವರ ಜೀವನವು ಮುಂದಿನ ಪೀಳಿಗೆಗೂ ಸ್ಫೂರ್ತಿದಾಯಕ.

**ಶ್ರೀ ರವಿಶಂಕರ ಗುರೂಜಿ**
ಆರ್ಟ್ ಆಫ್ ಲಿವಿಂಗ್, ಬೆಂಗಳೂರು

# ನಿಷ್ಕಾಮ ಕರ್ಮಯೋಗಿ

**ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು**
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಆದಿಚುಂಚನಗಿರಿ ಕ್ಷೇತ್ರ

ಹಲವು ಮುನಿಪುಂಗವರ ತಪೋಭೂಮಿಯಾಗಿ ಬೆಳಗಿದ ಮಹಾನ್ ಪರಂಪರೆ ಹೊಂದಿರುವ ಸಿದ್ಧಗಂಗಾ ಮಠವು ನೂರಾರು ವರ್ಷಗಳ ಇತಿಹಾಸ ಹೊಂದಿದ್ದರೂ, ಇಂದು ಜಾತಿ ಮತ ಪಂಥಗಳ ಎಲ್ಲೆ ಮೀರಿ ಜನಮಾನಸದಲ್ಲಿ ನೆಲೆಯೂರಲು ಕಾರಣೀಭೂತರಾದವರು ನಡೆದಾಡುವ ದೇವರೆಂದೇ ಜನಮಾನಸದಲ್ಲಿ ನೆಲೆಯಾಗಿರುವ ಕರ್ಮಯೋಗಿ ಶಿವಕುಮಾರ ಮಹಾಸ್ವಾಮಿಯವರು. ತ್ರಿವಿಧ ದಾಸೋಹಿಗಳಾಗಿದ್ದ ಶ್ರೀಗಳು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ವೈದ್ಯಕೀಯ, ಸಾಂಸ್ಕೃತಿಕ...ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದವರು.

ಪರರ ಹಿತಕ್ಕಾಗಿ ನಿಷ್ಕಾಮಕರ್ಮ ಮಾಡಿ, ತನ್ಮೂಲಕ ಭಗವಂತನನ್ನು ತುಷ್ಟಿಗೊಳಿಸುವುದರಲ್ಲಿಯೇ ಬದುಕಿನ ಸಾರ್ಥಕತೆ ಇದೆ ಎಂಬುದನ್ನು ತಮ್ಮ ಬಾಳಿನ ಮೂಲಕ ತೋರಿಸಿದ ವಿಭೂತಿಪುರುಷರು. 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ವಿಶಾಲ ಮನೋಭೂಮಿಕೆಯೊಂದಿಗೆ ತಮ್ಮ ಜೀವಿತಾವಧಿಯನ್ನು ಸಮಾಜದ ಒಳಿತಿಗಾಗಿ ತೊಡಗಿಸಿಕೊಂಡ ಗುರುಶ್ರೇಷ್ಠರು. ನಾಡಿನೆಲ್ಲೆಡೆಯಿಂದ ಬರುವ ಸಾವಿರಾರು ನಿರ್ಗತಿಕ ಹಾಗೂ ಬಡಮಕ್ಕಳಿಗೆ ಅಕ್ಷರ, ಅನ್ನ ಹಾಗೂ ಆಶ್ರಯವನ್ನು ನೀಡಿ ಅವರ ಬದುಕನ್ನು ಕಟ್ಟಿಕೊಡುವುದರಲ್ಲಿ ಮುಂಚೂಣಿಯಲ್ಲಿರುವ ಸಿದ್ಧಗಂಗಾ ಮಠದ ಹೆಸರಿಗೆ ಮತ್ತಷ್ಟು ಮೆರಗು ತಂದವರು. ಲೋಕೋಪಕಾರಣಕ್ಕಾಗಿಯೇ ಜನ್ಮ ತಳೆದ ಶಿವಕುಮಾರ ಮಹಾಸ್ವಾಮಿ ತಮ್ಮ ನಿಷ್ಕಾಮ ಸೇವೆಯ ಮೂಲಕವೇ ಆಧುನಿಕ ಬಸವಣ್ಣ ಎನಿಸಿದ್ದರು.

ಸತ್ಕಾರ್ಯಗಳ ಅನುಷ್ಠಾನದಲ್ಲಿ ನಿರತರಾಗಿದ್ದ ಮಹಾಸ್ವಾಮಿ ಇಳಿವಯಸ್ಸಿನಲ್ಲೂ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಉತ್ಕರ್ಷದಲ್ಲಿ ತಮ್ಮ ಬದುಕನ್ನು ತೊಡಗಿಸಿಕೊಂಡಿದ್ದುದು ಅನನ್ಯ, ಅನುಕರಣೀಯ. ಅವರ ನಿಷ್ಕಾಮ ಬದುಕು ಎಲ್ಲರಿಗೂ ಆದರ್ಶ.

ನಮ್ಮ ನಾಡಿನಲ್ಲಿ ಬಹುತೇಕ ಎಲ್ಲ ಜಾತಿ, ಪಂಗಡ, ಮತಗಳಿಗೂ ಒಬ್ಬೊಬ್ಬ ಗುರುಗಳಿದ್ದಾರೆ. ಆದರೆ ಕರ್ಮಯೋಗಿಗಳೆಂದು, ಧರ್ಮಯೋಗಿಗಳೆಂದು

ಸುವಿಖ್ಯಾತರಾಗಿ ಧರ್ಮಪ್ರಜ್ಞೆ ಹಾಗೂ ಭಾರತೀಯ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಸರ್ವರೂ ಸನ್ಮಾರ್ಗದಲ್ಲಿ ಮುನ್ನಡೆಯುವಂತೆ ಪ್ರೇರೇಪಿಸುತ್ತಿದ್ದ ಸಿದ್ಧಗಂಗಾ ಮಠದ ಪರಮಪೂಜ್ಯರು ಜಾತಿ, ಮತ, ಧರ್ಮಗಳ ಪರಿಧಿಯನ್ನು ಮೀರಿ ಜನಮಾನಸದಲ್ಲಿ ಬೆಳಗಿದವರು.

ಶತಾಯುಷಿಯಾದ ನಂತರವೂ ತಮ್ಮ ಅಪ್ರತಿಮ ಸೇವಾ ಕೈಂಕರ್ಯದ ಮೂಲಕ ಈ ಪುಣ್ಯ ನೆಲದ ಮಣ್ಣನ್ನು ಪುನೀತಗೊಳಿಸುವ ಪವಿತ್ರ ಕಾರ್ಯದಲ್ಲಿ ನಿರತರಾಗಿದ್ದುದು ನಾಡಿನ ಸೌಭಾಗ್ಯ. ಸಿದ್ಧಗಂಗಾ ಮಠದ ಸರ್ವಾಂಗೀಣ ಪ್ರಗತಿಗೆ ಪೂಜ್ಯರು ಕೈಗೊಂಡ ಕಾರ್ಯಗಳು ಆದರಣೀಯವೂ ಅನುಕರಣೀಯವೂ ಆಗಿವೆ.

ಶ್ರೀಗಳ ಧರ್ಮಬೋಧನೆಗಳು ಜನರ ಅಂಧಕಾರವನ್ನು ನೀಗಿಸುವಲ್ಲಿ ದಿವ್ಯೌಷಧಿ. ಲೋಕಕಲ್ಯಾಣಕ್ಕಾಗಿ ಸಂಕಲ್ಪಿಸಿದ ಸಕಲವನ್ನೂ ಸಾಕಾರಗೊಳಿಸಿರುವ ಮಹಾಸ್ವಾಮಿಗಳಿಂದಾಗಿ ಸಿದ್ಧಗಂಗೆಯು ಇಂದು ಜನಮನ ಬೆಳಗುವ ಜ್ಞಾನಕೇಂದ್ರವಾಗಿದೆ.

ನಮ್ಮ ಗುರುಗಳಾದ ಜಗದ್ಗುರು ಬಾಲಗಂಗಾಧರನಾಥ ಮಹಾಸ್ವಾಮಿ ಹಾಗೂ ಶಿವಕುಮಾರ ಮಹಾಸ್ವಾಮಿ ಪರಸ್ಪರ ಗೌರವಾದರಣೀಯರಾಗಿದ್ದರು. ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ನಡೆಯುವ ಧರ್ಮಸಭೆಗಳಲ್ಲಿ ಸಿದ್ಧಗಂಗಾ ಶ್ರೀಗಳು ಭಾಗವಹಿಸಿ ಮಾರ್ಗದರ್ಶನ ನೀಡುತ್ತಿದ್ದರು. ಅವರ ಅನುಗ್ರಹ ಸಂದೇಶಗಳು ಯಾವತ್ತೂ ಸಮಾಜಕ್ಕೆ ದಾರಿದೀಪ. ಸಿದ್ಧಗಂಗಾ ಮಠವನ್ನು ಸರ್ವಧರ್ಮ ಸಮನ್ವಯ ಕೇಂದ್ರವನ್ನಾಗಿ ಬೆಳಗಿಸಿದ ಪರಮಪೂಜ್ಯರು ಶಿವೈಕ್ಯರಾದುದರಿಂದ ನಾಡಿಗಷ್ಟೇ ಅಲ್ಲ ಇಡೀ ಆಧ್ಯಾತ್ಮಿಕಲೋಕಕ್ಕೆ ಭರಿಸಲಾರದ ನಷ್ಟವುಂಟಾಗಿದೆ. **(ಕೃಪೆ : ಪ್ರಜಾವಾಣಿ)**

□

---

## ಶ್ರೀಗಳ ಕೊಡುಗೆ ಅಪಾರ

ಆಧ್ಯಾತ್ಮಿಕ ಗುರು ಶಿವಕುಮಾರ ಶ್ರೀಗಳು ನಿಧನ ಹೊಂದಿರುವುದು ದುಃಖ ತರಿಸಿದೆ. ಅವರು ಸಮಾಜಕ್ಕೆ, ಅದರಲ್ಲೂ ವಿಶೇಷತಃ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ಅವರ ಅಸಂಖ್ಯಾತ ಅನುಯಾಯಿಗಳಿಗೆ ನನ್ನ ಸಂತಾಪಗಳು.

**ಶ್ರೀ ರಾಮನಾಥ ಕೋವಿಂದ್, ರಾಷ್ಟ್ರಪತಿಗಳು**

# ಶೈಕ್ಷಣಿಕ ಕ್ರಾಂತಿಯ ಪ್ರೇರಕ-ಸಾಧಕ

**ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆ**
ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ

**ಸಿ**ದ್ಧಗಂಗಾ ಮಠದ ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿ ತಮ್ಮ ಬಾಳನ್ನು ಸಾರ್ಥಕವಾಗಿ ಪೂರೈಸಿದ್ದಾರೆ.

ಶಾಸ್ತ್ರಗಳಲ್ಲಿ ದೇಹ ಮತ್ತು ಆತ್ಮದ ಭೇದವನ್ನು ತಿಳಿಸಲಾಗಿದೆ. ಆತ್ಮ ಕಲ್ಯಾಣಕ್ಕಾಗಿ ಮತ್ತು ಸಮಾಜೋನ್ನತಿಗಾಗಿಯೇ ದೇಹವನ್ನು ಬಳಸಬೇಕು ಎಂಬುದು ಭಾರತೀಯರ ನಂಬಿಕೆ. ಬದುಕನ್ನು ಯಶಸ್ವಿಯಾಗಿ ನಿರ್ವಹಿಸುವುದು ಹೇಗೆ ಎಂಬುದನ್ನು ಸ್ವಾಮೀಜಿಯವರು ಬದುಕಿನಲ್ಲಿ ಮಾದರಿಯಾಗಿ ತೋರಿಸಿಕೊಟ್ಟವರು. ಬಾಲ್ಯದಿಂದಲೇ ವಿರಕ್ತಿ ಮಾರ್ಗ ಅನುಸರಿಸಿ, ಆತ್ಮೋನ್ನತಿಗಾಗಿ ಪೂಜೆ, ಧ್ಯಾನ, ತಪಸ್ಸು-ಅಂತೆಯೇ ಸಮಾಜದ ಮತ್ತು ದೇಶದ ಕಲ್ಯಾಣಕ್ಕಾಗಿ ದೇಹವನ್ನು ಕೊರಡಿನಂತೆ ಸವೆಸಿದರು. ಅವರು ಧಾರ್ಮಿಕರಾದರೂ ಅವರಲ್ಲಿ ದೇಶಭಕ್ತಿ ಆಳವಾಗಿ ನೆಲೆಯೂರಿತ್ತು. ದೇಶ ಉದ್ಧಾರವಾಗಬೇಕಾದರೆ ಜನರ ಬಡತನ ನಿವಾರಣೆಯಾಗಬೇಕು. ವಿದ್ಯಾರ್ಜನೆಗೆ ಅವಕಾಶಗಳಿರಬೇಕು ಎಂದು ಅವರು ಯೋಜನೆಗಳನ್ನು ಹಾಕಿಕೊಂಡವರು. ಲಕ್ಷಾಂತರ ಮಂದಿ ವಿದ್ಯಾರ್ಥಿಗಳು ಸಿದ್ಧಗಂಗಾ ಮಠದಲ್ಲಿ ಶಿಕ್ಷಣ ಪಡೆದು ಬಾಳಿನಲ್ಲಿ ಬದಲಾವಣೆ ಕಂಡುಕೊಂಡರು. ಮೂರು ತಲೆಮಾರುಗಳ ಶಿಕ್ಷಣದಿಂದ ಸಮಾಜದಲ್ಲಿದ್ದ ಜಾತೀಯತೆಯ ಅಂತರ ಹೋಗಲಾಡಿಸಿ ಎಲ್ಲರಿಗೂ ಸಮಾನ ಅವಕಾಶ ನೀಡಿದರು. ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ಸ್ವ-ಉದ್ಯೋಗಕ್ಕೆ ಮಾರ್ಗದರ್ಶನ ನೀಡಿದರು. ಅವರ ಪ್ರೇರಣೆಯಿಂದ ನೂರಾರು ಮಠ-ಮಂದಿರಗಳು ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿದವು. ಹಳ್ಳಿ-ಹಳ್ಳಿಗಳಲ್ಲಿ ಶೈಕ್ಷಣಿಕ ಕ್ರಾಂತಿಯಾಯಿತು. ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಾರ ಪ್ರೀತಿ ಮತ್ತು ಆಶೀರ್ವಾದವನ್ನಿತ್ತಿದ್ದ ಪೂಜ್ಯರು ಅನೇಕ ಬಾರಿ ಕ್ಷೇತ್ರಕ್ಕೆ ಭೇಟಿ ಕೊಟ್ಟಿರುವುದನ್ನು ಇಲ್ಲಿ ಸ್ಮರಿಸಿ, ಅವರು ಖಂಡಿತವಾಗಿಯೂ ಸ್ವರ್ಗಾರೋಹಣ ಮಾಡಿದ್ದಾರೆ ಎಂಬ ಸ್ಮರಣೆಯೊಂದಿಗೆ ನನ್ನ ಗೌರವ ಸಲ್ಲಿಸುತ್ತೇನೆ.

# ಬುದ್ಧನ ಕಾರುಣ್ಯ, ಬಸವಣ್ಣನ ಕಾಳಜಿಯೇ ಮೈವೆತ್ತ ರೂಪ

**ಡಾ. ಜಿ.ಎಸ್. ಶಿವರುದ್ರಪ್ಪ**

**ಬೆಂ**ಗಳೂರು ತುಮಕೂರುಗಳ ನಡುವೆ ಸದಾ ಸಾವಿರ ಗಾಲಿಗಳು ಉರುಳುವ ಹೆದ್ದಾರಿಯಲ್ಲಿ ಕ್ಯಾತ್ಸಂದ್ರದ ಬಳಿ ಬಲಕ್ಕೆ ಹೊರಳಿದರೆ ಅನತಿದೂರದಲ್ಲಿಯೇ ನಾವು ಋಷ್ಯಾಶ್ರಮಸದೃಶವಾದ ತಪೋವನವೊಂದನ್ನು ಪ್ರವೇಶಿಸಿದ ಅನುಭವಕ್ಕೆ ಒಳಗಾಗುತ್ತೇವೆ. ಅತ್ತ ಇತ್ತ ಎತ್ತರವಾದ ಮರಗಳು, ಅದರಾಚೆ ಹರಡಿಕೊಂಡ ಹೊಲಗಳು, ಮುಂದೆ ಕಾಣುವ ವಿದ್ಯಾರ್ಥಿ ವಸತಿಗಳ ಸಮುಚ್ಚಯ ಹಾಗೂ ಪಾಠಶಾಲೆಗಳು, ಭಕ್ತಿ ಜನಾಕರ್ಷಕವಾದ ಗದ್ದುಗೆಗಳು, ದೇವಾಲಯಗಳು, ಮಠಗಳು, ದಾಸೋಹ ಮತ್ತು ಪ್ರಸಾದನಿಲಯಗಳು, ಅತಿಥಿಗೃಹಗಳು, ಮುಂದೆ ಎಂದಿನಿಂದಲೋ ತಪಸ್ಸಿಗೆ ಕುಂತಂತಿರುವ ಗುಡ್ಡ. ಆ ಗುಡ್ಡದ ಮೆಟ್ಟಿಲು ಸಾಲುಗಳನ್ನೇರಿ ಹೋದರೆ ಅದು ತಲುಪುವ ಸಿದ್ಧಲಿಂಗೇಶ್ವರ ದೇವಾಲಯದ ತಂಪು. ಅದರ ಎದುರಿನ ಗುಹೆಯೊಳಗೆ ಹಾಗೂ ಎಂದೂ ಅರಕೆಯಾಗದ 'ಸಿದ್ಧಗಂಗೆ'ಯ 'ತೀರ್ಥಜಲ' ಕುಂಡ. ಈ ದೇಗುಲದ ಪ್ರಕಾರದಿಂದ ಹೊರಬಂದು ಮೇಲೇರಿ ನಿಂತರೆ, ಒಂದೊಂದು ದಿಕ್ಕಿಗೆ ಒಂದೊಂದು ಆಕಾರದಲ್ಲಿ ದೃಗ್ಗೋಚರವಾಗುವ ಶಿವಗಂಗೆ ಬೆಟ್ಟದ ಧೀರ ನಿಲುವು. ಎಡಕ್ಕೆ ಎತ್ತರವಾದ ರಾಮದೇವರ ಬೆಟ್ಟ. ಹಿಂದಕ್ಕೆ ಏರಿಳಿದ ಶಿಖರ ಕಾನನ-ಕಂದರಗಳ ದೇವರಾಯನದುರ್ಗ ಮತ್ತು ನಾವು ನಿಂತ ನೆಲೆಯಲ್ಲೇ ಎತ್ತರವಾದ ಧ್ವಜಸ್ತಂಭವೊಂದರ ಮೇಲೆ ಸದಾ ಸಭಿಕರನ್ನು ಕೈಬೀಸಿ ಕರೆಯುವ ಕಾವಿಯ ಬಾವುಟ.

ಇಂಥ ತಪೋವನಸದೃಶವಾದ 'ಸಿದ್ಧಗಂಗೆ'ಯ ಈ ಪರಿಸರದಲ್ಲಿ ಅರ್ಧ ಶತಮಾನಕ್ಕೂ ಹಿಂದೆ, ಮೂರು ವರ್ಷಗಳ ಕಾಲ ನಾನೊಬ್ಬ ವಿದ್ಯಾರ್ಥಿಯಾಗಿ ಕಳೆದ ಕಾಲವನ್ನು ನೆನೆದುಕೊಂಡರೆ ಧನ್ಯತೆ ಹಾಗೂ ಕೃತಜ್ಞತೆಯ ಭಾವನೆಗಳಲ್ಲದೆ ಮತ್ತೇನೂ ಕಾಣವು. ಬಡತನ ಹಾಗೂ ಅನಕ್ಷರತೆಯಿಂದಾಗಿ ಅವಕಾಶಹೀನರಲ್ಲಿ ಒಬ್ಬನಾಗಿದ್ದ ನಾನು ನನ್ನಂಥ ಎಷ್ಟೋ ಜನ, ಈ ಹೊತ್ತು ತಲೆಯೆತ್ತಿಕೊಂಡು ದಿಟ್ಟತನದಿಂದ ಬದುಕಲು ಸಾಧ್ಯವಾಗಿರುವುದು ಅಂದು ನನಗೆ ಈ ಶ್ರೀಕ್ಷೇತ್ರ ಒದಗಿಸಿದ ಅಶನ-

---

(ಶ್ರೀಗಳ 104ನೇ ಜನ್ಮದಿನದಂದು ಬಿಡುಗಡೆಯಾದ 'ನಿರಂಜನಶ್ರೀ' ಗ್ರಂಥಕ್ಕೆ ಬರೆದಿದ್ದ ಲೇಖನ)

ವಸತಿಗಳ ಆಶ್ರಮದಿಂದಲೇ, ಅಂದು ಇಂದಿನ ಹಾಗೆ, ಒಂದೊಂದು ಜಾತಿ-ಮತಗಳಿಗೊಬ್ಬೊಬ್ಬ 'ಜಗದ್ಗುರು'ಗಳಿರಲಿಲ್ಲ. ಇಂದಿನ ಹಾಗೆ ಬಹುಸಂಖ್ಯೆ ಶಿಕ್ಷಣದ ವ್ಯಾಪಾರ ಸಂಸ್ಥೆಗಳೂ ಇರಲಿಲ್ಲ. ಬಹುತೇಕ ಸಾಮರಸ್ಯದಿಂದ ಬದುಕುತ್ತಿದ್ದ ಸಾಮಾಜಿಕ ಸಂದರ್ಭಗಳಿಂದಾಗಿ, 'ಜಾತ್ಯತೀತತೆ'ಯ ಘೋಷಣೆಗಳಾಗಲೀ, ಭಾವೈಕ್ಯದ ಮಂತ್ರ ಪಠಣಗಳಾಗಲೀ ಇರಲಿಲ್ಲ. ಸನಾತನ ಧರ್ಮವನ್ನು ಸಂರಕ್ಷಿಸಿಕೊಂಡು ಬರುವುದ ರಲ್ಲಿಯೇ ಬಹುಮಟ್ಟಿಗೆ ತೃಪ್ತವಾದ ಮೇಲ್ವರ್ಗದ ಮಠಗಳನ್ನು ಹೊರತುಪಡಿಸಿದರೆ, ನಿಜವಾಗಿಯೂ ಸಾಮಾಜಿಕ ಕಾಳಜಿಗಳಿಂದ ತುಡಿಯುತ್ತ ಬಹುಜನ ಹಿತವನ್ನು ಗುರಿಯಾಗಿಸಿಕೊಂಡು ಕೆಲವು ಮಠಗಳಿದ್ದದ್ದು ಶರಣ ಧರ್ಮದವರಲ್ಲೇ. ಅವುಗಳಲ್ಲೆಲ್ಲ ಸಿದ್ಧಗಂಗೆಯ ಮಠ ಮಾರ್ಗದರ್ಶಕ ಸ್ಥಾನದಲ್ಲಿತ್ತು.

**ಅಷ್ಟೊಂದು ಜನಕ್ಕೆ ದಾಸೋಹ ಹೇಗೆ?**

ನಾನು ಅನೇಕ ವೇಳೆ ಆಶ್ಚರ್ಯಪಟ್ಟಿದ್ದೇನೆ. ಇದೇನಿದು ಹಗಲು-ರಾತ್ರಿ ಬಂದು ಹೋಗುವ ಇಷ್ಟೊಂದು ಜನಕ್ಕೆ ಹೀಗೆ ಊಟದ ವ್ಯವಸ್ಥೆ ಮಾಡಲು ಈ ಮಠ ಪುರಾಣಕಾಲದ ಅಕ್ಷಯಪಾತ್ರೆಯೇ ಅಂತ ಯೋಚಿಸಿದ್ದಿದೆ. ಆದರೆ, ಈ ಮಠದ ಅಕ್ಷಯಪಾತ್ರೆ ಸಾರ್ವಜನಿಕರೇ ಅನ್ನುವುದು ಸೋಜಿಗದ ಸಂಗತಿಯೇನಲ್ಲ. ಈ ದಾಸೋಹವನ್ನು ಪ್ರಾರಂಭಿಸಿದ ಮೊದಲಲ್ಲಿ ಶ್ರೀ ಅಟವೀಸ್ವಾಮಿಗಳೂ, ಶ್ರೀ ಉದ್ದಾನ ಸ್ವಾಮಿಗಳೂ ಜೋಳಿಗೆ ಹಿಡಿದು ಸುತ್ತಮುತ್ತಲಿನ ಹಳ್ಳಿಗಳಿಂದ ಭಿಕ್ಷಾರೂಪದ ದವಸ ಧಾನ್ಯಗಳನ್ನು ಸಂಗ್ರಹಿಸಿ ತರುತ್ತಿರುವುದನ್ನು ಗಮನಿಸಿದ್ದೆ. ನಂತರ ಶ್ರೀ ಶಿವಕುಮಾರ ಸ್ವಾಮಿಗಳೂ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿದಾಗ ಮೊದಲು ಮಾಡಿದ ಕೆಲಸವೇ ಇದು. ಸರ್ವಜ್ಞ ಹೇಳಿದಂತೆ 'ತಿರಿವರಿಂ ಸಿರಿವಂತರಾರು?' ಇಲ್ಲಿ ನಡೆಯುವ ನಿತ್ಯ ದಾಸೋಹ ಹಾಗೂ ಶಿಕ್ಷಣ ಕಾರ್ಯಗಳನ್ನು ಕಂಡು, ಜನ ತಾವಾಗಿಯೇ ತಮ್ಮ ಕಾಣಿಕೆ ಎಂದೋ ಕೊಡುಗೆ ಎಂದೋ ಗಾಡಿಗಾಡಿಗಳಲ್ಲಿ ದವಸಧಾನ್ಯಗಳನ್ನು ತಂದು ಮಠದ ಉಗ್ರಾಣಕ್ಕೆ ಅರ್ಪಿಸುವುದನ್ನು ನೋಡಿದ್ದೇನೆ.

**ಶೂದ್ರರಿಗಾಗಿ ಶುರುವಾದ ಸಂಸ್ಕೃತ ಶಾಲೆ !**

ಮೊದಲ ಅಗತ್ಯ ಅನ್ನ ನಿಜ. ಆದರೆ ಹೊಟ್ಟೆಯ ಹಸಿವಿನ ಜೊತೆಗೆ ಮನಸ್ಸಿನ ಹಸಿವು ಇದೆಯಲ್ಲ. ಅದಕ್ಕೆ ಆಹಾರ ಎಂದರೆ ಶಿಕ್ಷಣವೇ. ಈ ಕಾರ್ಯವು ಪ್ರಾರಂಭವಾಗಿದ್ದು, ಉದ್ದಾನ ಸ್ವಾಮಿಗಳ ಕಾಲದಲ್ಲಿ. ಸ್ವಾರಸ್ಯದ ಸಂಗತಿ ಎಂದರೆ ಉದ್ದಾನ ಸ್ವಾಮಿಗಳು ಪ್ರಾರಂಭ ಮಾಡಿದ್ದು ಸಂಸ್ಕೃತ ಪಾಠಶಾಲೆಯನ್ನು. 1927ರಲ್ಲಿ ಅಧಿಕೃತವಾಗಿ ಪ್ರಾರಂಭವಾದ ಈ ಪಾಠಶಾಲೆಯಲ್ಲಿ ಬ್ರಾಹ್ಮಣ, ಲಿಂಗಾಯತ, ಗೌಡ, ಹರಿಜನ... ಹೀಗೆ ವಿವಿಧ ಕೋಮುಗಳಿಗೆ ಸೇರಿದ ಐವತ್ಮೂರು ವಿದ್ಯಾರ್ಥಿಗಳಿದ್ದರಂತೆ. ಇದೊಂದು 19ನೇ ಶತಮಾನದಲ್ಲಿ ಸಂಭವಿಸಿದ ಮಹತ್ವದ ಘಟನೆ. ಯಾಕೆಂದರೆ

ಇಂಡಿಯಾದಂಥ ದೇಶದ ಪಾರಂಪರಿಕವಾದ ಸಂಸ್ಕೃತ ಭಾಷೆಯ ಶಿಕ್ಷಣವೆನ್ನುವುದು ಶತಶತಮಾನಗಳ ಕಾಲ ಕೇವಲ ಮೇಲುವರ್ಗದವರ ಗುತ್ತಿಗೆಯಾಗಿ, ಶೂದ್ರ ವರ್ಗದವರ ನಾಲಗೆಯಲ್ಲಿ ಉಚ್ಚರಿಸುವುದಿರಲಿ ಕಿವಿಯಲ್ಲಿ ಕೇಳಬಾರದ 'ದೇವಭಾಷೆ'ಯಾಗಿತ್ತು. ಹತ್ತೊಂಬತ್ತನೆಯ ಶತಮಾನದ ವಸಾಹತುಶಾಹಿಯ ಸಂದರ್ಭದಲ್ಲಿ ಕನ್ನಡ ಅಥವಾ ಇಂಗ್ಲಿಷ್ ಶಿಕ್ಷಣ ತಾನಾಗಿಯೇ ಲಭ್ಯವಾಗಬಹುದಾಗಿದ್ದ ಪರಿಸ್ಥಿತಿಯಲ್ಲಿ ಉದ್ದಾನ ಸ್ವಾಮಿಗಳು ಸಂಸ್ಕೃತ ಪಾಠಶಾಲೆಯೊಂದನ್ನು ಶೂದ್ರ ಸಮುದಾಯದವರಿಗಾಗಿ ಪ್ರಾರಂಭಿಸಿದ್ದರ ಚಾರಿತ್ರಿಕ ಮಹತ್ವವನ್ನು ಪ್ರತ್ಯೇಕವಾಗಿಯೇ ನಾವು ಪರಿಭಾವಿಸಬೇಕು.

**ಶಿವಕುಮಾರ ಶ್ರೀಗಳ ಬಹುಮುಖಿ ಸೇವೆ**

ಅರ್ಧ ಶತಮಾನಕ್ಕೂ ಹಿಂದಿನ, ನಲವತ್ತರ ದಶಕದಲ್ಲಿ ನಾನು ಈ ಮಠದಲ್ಲಿದ್ದಾಗ, ಶಾಲೆ-ಕಾಲೇಜುಗಳಲ್ಲಿ ಓದುತ್ತಾ ಇಲ್ಲಿ ಆಶ್ರಯ ಪಡೆದವರ ಸಂಖ್ಯೆ ಸುಮಾರು ನಾಲ್ಕು ನೂರರಷ್ಟಿತ್ತು. ಬಹುಶಃ ಯಾವುದೇ ಒಂದು ಸಂಸ್ಥೆ ಇಷ್ಟು ಸಂಖ್ಯೆಯ ವಿದ್ಯಾರ್ಥಿಗಳಿಗೆ ಉಚಿತವಾದ ಅಶನ-ವಸತಿಗಳನ್ನು ಒದಗಿಸುತ್ತಿದ್ದುದು ಆ ಕಾಲಕ್ಕಂತೂ ಇರಲಿಲ್ಲ. ಹಾಗೆ ಆಶ್ರಯ ಪಡೆದವರು ಕೇವಲ ವೀರಶೈವರೇನಲ್ಲ. ಸಮಾಜದ ಶೂದ್ರ ಸಮುದಾಯದ ಬೇರೆ ಬೇರೆ ಕೋಮುಗಳವರೂ ಇದ್ದರು. ಅವರ ಜತೆಗೆ ಕೆಲವರು ಹರಿಜನರೂ ಇದ್ದರು. ಅಷ್ಟೇ ಅಲ್ಲ, ಮಡಿವಂತ ವರ್ಗದ ಬ್ರಾಹ್ಮಣ ವಿದ್ಯಾರ್ಥಿಗಳಿಗೂ ಇಲ್ಲಿ ಅವಕಾಶವಿತ್ತು. ನಮ್ಮೆಲ್ಲರ ವಸತಿಗಳಲ್ಲಿ ಯಾವ ತಾರತಮ್ಯವೂ ಇರಲಿಲ್ಲ. ನಾವೆಲ್ಲ ಬಡವರೆಂಬ, ನಾವೊಬ್ಬ ಮನುಷ್ಯರೆಂಬ, ಆ ಕಾರಣಕ್ಕೆ ನಾವೆಲ್ಲ ಒಂದೆಂಬ ಭಾವನೆಯೇ ಪ್ರಮುಖವಾಗಿತ್ತು. ದಿನವೂ ಸಂಜೆ ಏಳು ಗಂಟೆಗೆ ಸಾಮೂಹಿಕವಾಗಿ ಕೂತು ಪ್ರಾರ್ಥನೆ ಮಾಡುವ ಸಂದರ್ಭ ಕೂಡ ನಮ್ಮಲ್ಲಿ ಒಂದು ಆಧ್ಯಾತ್ಮಿಕವಾದ ಏಕತಾಭಾವನೆಯ ಸಂಕೇತವಾಗಿತ್ತು.

ನಾನೇ ನನ್ನ ಎಳೆಯ ದಿನಗಳಲ್ಲಿ ಕಂಡಂತೆ ಸಂಸ್ಕೃತ ಪಾಠಶಾಲೆಯ ಚಿಕ್ಕ ಮಕ್ಕಳಿಗೂ ಶಿವಕುಮಾರ ಸ್ವಾಮಿಗಳು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ದಿನವೂ ಬರುವ ಭಕ್ತಾದಿಗಳ ಯೋಗಕ್ಷೇಮವನ್ನು ವಿಚಾರಿಸುವುದೂ, ತೀರಾ ಸಾಮಾನ್ಯರಾದ ಗ್ರಾಮೀಣ ಜನರ ನಂಬಿಕೆಗಳನ್ನು ಆಘಾತಗೊಳಿಸದೇ ಅವರನ್ನು ಸಮಾಧಾನಗೊಳಿಸುವುದೂ, ದಿನವೂ ನಡೆಯುತ್ತಿದ್ದ ಮಠದ ವಿಸ್ತರಣ ಕಾರ್ಯಗಳನ್ನು ಪರಿಶೀಲಿಸುವತ್ತ ಕೆಲಸಗಾರರಿಗೆ ಸೂಚನೆ ಕೊಡುತ್ತಾ ಸಮಯ ಬಿದ್ದರೆ ತಾವೇ ಕೂಲಿಗಾರರ ಜೊತೆಗೆ ಹೆಗಲು ಕೊಟ್ಟು ಕೆಲಸ ಮಾಡುವುದೂ, ಇದ್ದಕ್ಕಿದ್ದ ಹಾಗೆ ಅಡುಗೆ ಮನೆ ಪ್ರವೇಶಿಸಿ ತಾವೇ ಮುದ್ದೆ ತಿರುಹುವುದು (ಭಾರಿ ಗಾತ್ರದ ಪಾತ್ರೆಗಳಲ್ಲಿ ಬೇಯುತ್ತಿದ್ದ

ಮುದ್ದೆಯನ್ನು ತಿರುಹುವುದು ಸುಲಭದ ಕೆಲಸವೇನಲ್ಲ.) ಊಟದ ಪಂಕ್ತಿಯ ನಡುವೆ ನಿಂತು ಮಕ್ಕಳು ಹಾಗೂ ಭಕ್ತರು ಊಟ ಮಾಡುವುದನ್ನು ಪ್ರೀತಿಯಿಂದ ವೀಕ್ಷಿಸುವುದು ಸೇರಿದಂತೆ ಇಂತಹ ಬಹುಸಂಖ್ಯೆಯ ಕಾರ್ಯಚಟುವಟಿಕೆಗಳನ್ನು ನಾನು ನೋಡುತ್ತಾ ಅಲ್ಲಿ ಪುಟಿಯುವ ಜೀವಕಾರುಣ್ಯಕ್ಕೆ ಬೆರಗಾಗಿದ್ದೇನೆ.

**ಸನ್ಯಾಸವೆಂದರೆ ವೈರಾಗ್ಯವಷ್ಟೇ ಅಲ್ಲ**

ಒಂದು ಕಾಲವಿತ್ತು. ವೈರಾಗ್ಯ ಎಂದರೆ ಸನ್ಯಾಸ ಎಂದರೆ ಸಂಸಾರವನ್ನು ತೊರೆದು ಸಮಾಜವನ್ನು ತೊರೆದು ಜನಸಂಗ ದೂರವಾದ ಕಾಡುಮೇಡುಗಳಲ್ಲೋ, ಯಾರು ಪ್ರವೇಶ ಮಾಡಲಾಗದ ಗಿರಿ-ದರಿಗಳ ಗುಹಾಂತರಗಳಲ್ಲೋ ಧ್ಯಾನ ತಪಸ್ಸುಗಳಲ್ಲಿ ನಿರತರಾಗಿ ಆಧ್ಯಾತ್ಮ ಸಾಧನೆಯಲ್ಲಿ ತೊಡಗುವುದು ಎಂದು. ಆದರೆ ಬುದ್ಧ ಬಹುಜನ ಹಿತಕ್ಕಾಗಿ ಬಹುಜನ ಸುಖಕ್ಕಾಗಿ, ತಮ್ಮನ್ನು ತಾವು ಸೇವಾಮನೋಭಾವದಿಂದ ತೊಡಗಿಸಿಕೊಳ್ಳುವ ಕ್ರಿಯೆಯಲ್ಲಿ ಸಾರ್ಥಕ್ಯ ಇದೆ ಎಂದ. ಸಂಸಾರಿಯೇ ಆಗಲಿ, ಸನ್ಯಾಸಿಯೇ ಆಗಲಿ, ಈ ಮರ್ತ್ಯದ ಸಾಮಾಜಿಕ ನೆಲೆಯೊಳಗೆ ನಿಂತೇ ಶಿವಯೋಗವನ್ನು ಸಾಧಿಸುತ್ತ, ಕಾಯಕ ಅಥವಾ ಶಿವಾರ್ಪಿತ ಮನೋಭಾವದ ದುಡಿಮೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತ ಸರ್ವಜನ ಹಿತದಲ್ಲಿ ನಿರತವಾಗಬೇಕೆಂಬುದೇ ಇದರ ತಿರುಳು. ಬುದ್ಧನ ಮಾನವ ಕಾರುಣ್ಯವನ್ನೂ, ಬಸವನ ತೀವ್ರ ಸಾಮಾಜಿಕ ಕಾಳಜಿಗಳನ್ನೂ ಒಟ್ಟಿಗೇ ಕಾಣಬಹುದಾದದ್ದು ಸಿದ್ಧಗಂಗೆಯಂಥ ಅಪರೂಪದ ಕ್ಷೇತ್ರಗಳಲ್ಲಿ ಹಾಗೂ ಈ ಮನೋಧರ್ಮದ ಪ್ರತಿನಿಧಿಯಂತಿರುವ ಶಿವಕುಮಾರ ಸ್ವಾಮಿಗಳಂಥವರ ವ್ಯಕ್ತಿತ್ವದಲ್ಲಿ ಮಾತ್ರ.

---

## ಶ್ರೀಗಳ ನಾಡಲ್ಲಿ ಜನಿಸಿದ್ದು ಅದೃಷ್ಟ

ನಮ್ಮೆಲ್ಲರ ಆರಾಧ್ಯ ದೈವ ಶ್ರೀ ಶಿವಕುಮಾರ ಸ್ವಾಮೀಜಿಗಳು ಈ ಜಗತ್ತು ಕಂಡ ಜ್ಞಾನ ಭಂಡಾರ. ಶ್ರೀಗಳು ಜನಿಸಿದ ಈ ಪುಣ್ಯಭೂಮಿಯಲ್ಲಿ ನಾವೆಲ್ಲ ಜನಿಸಿರುವುದೇ ನಮ್ಮ ಅದೃಷ್ಟ. ಅವರ ಅಗಲಿಕೆಯಿಂದ ಮನಸ್ಸಿಗೆ ತುಂಬ ನೋವುಂಟಾಗಿದೆ.

**ಶ್ರೀ ಎಚ್.ಡಿ. ದೇವೇಗೌಡ**
ಮಾಜಿ ಪ್ರಧಾನಮಂತ್ರಿಗಳು

# ಮಹಾಮಾನವತಾವಾದಿ ಶ್ರೀ ಶಿವಕುಮಾರ ಸ್ವಾಮೀಜಿ

**ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ**

**ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ**
**ಕಾಯಕವೆ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ**
**ಕಾವಿಯುಡುಗೆಯನುಟ್ಟು ನಭವೇ ಕಿರಣಹಸ್ತವ ಚಾಚಿದೆ**
**ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ**
**- ಜಿ.ಎಸ್. ಶಿವರುದ್ರಪ್ಪ**

ಎಲ್ಲ ಕಾಲ ದೇಶಗಳಲ್ಲಿಯೂ ರಾಜಕೀಯ ಹಾಗೂ ಧರ್ಮ ಅತ್ಯಂತ ಪ್ರಭಾವಿ ಶಕ್ತಿಗಳು, ಅಧಿಕಾರ ಕೇಂದ್ರಗಳು. ಹೀಗಾಗಿಯೇ ಆ ಪ್ರಭಾವಲಯದಲ್ಲಿ ಹೋದವರಿಗೆ ಅಸಾಮಾನ್ಯ ಪ್ರಾಧಾನ್ಯ ಸಹಜವಾಗಿಯೇ ದೊರಕಿಬಿಡುತ್ತದೆ. ತಮಗೆ ಸಿಕ್ಕ ಮನ್ನಣೆಯನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯವಿಲ್ಲದ ಅನೇಕರು ಲೋಲುಪತೆಗೆ ಒಳಗಾಗಿ ತಾವೂ ಅಪಹಾಸ್ಯಕ್ಕೆ ಗುರಿಯಾಗುವುದಲ್ಲದೆ ಆ ಸ್ಥಾನವನ್ನೂ ಅಪವಿತ್ರಗೊಳಿಸಿಬಿಡುತ್ತಾರೆ. ಅಂಥವರು ಅನೇಕ. ಆದರೆ ಕೆಲವರು ಮಾತ್ರ ತಮಗೆ ಸಿಕ್ಕ ಅವಕಾಶವನ್ನು ಸಾರ್ಥಕಪಡಿಸಿಕೊಂಡು ಮಹಾನುಭಾವರೆನ್ನಿಸಿಕೊಳ್ಳುತ್ತಾರೆ. ಲೋಕಕಲ್ಯಾಣದಂಥ ಪವಿತ್ರಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಅಂತಹ ಪುರುಷೋತ್ತಮರಲ್ಲೊಬ್ಬರು ಶಿವಕುಮಾರಸ್ವಾಮಿಗಳು.

ಗೋಪಾಲಕೃಷ್ಣ ಅಡಿಗರು ಹೇಳುತ್ತಾರೆ :

ನನ್ನ ಹಾಗೆ ಅವನು ಕೂಡ ಉಣ್ಣುತಿದ್ದ,
ಚಂದ್ರನನ್ನು ತಾ ಎಂದು ತಾರುಮಾರು ತೊದಲುತಿದ್ದ
ಹೀಗೆ ಇರಲು ದೇವತ್ವದ ತರಿಸಲೀಟಿತುದಿಯನೇರಿ ಅವನ ಮನ
ಮುಗಿಲ ಚುಚ್ಚಿ ಮುಂದುವರಿದ ಆ ಮಹಾಪ್ರತೀತಿಯ
ಕಣ್ಣಾರೆ ಕಂಡೆನಯ್ಯ ಹೊಗಳಲೆನಲು ಆಡಲಿಲ್ಲ ಈ ನನ್ನ ನಾಲಗೆ
ಉಳಿದೆ ನಾನು ಆಗಲೂ ಈಗ ಇಲ್ಲಿ ಕೊಳೆವೊಲು
... ನಾನು ಅವನು ಒಂದೆ ಲೋಹ
ನಾನು ಕರಿಕಬ್ಬಿಣ
ಯಾವ ರಸವು ಸೋಂಕಿತವನ?

ಯಾವ ಬೆಂಕಿ ತಾಕಿತವನ
ಸಾಯುವಾಗ ಎಂಥ ಗಟ್ಟಿ ಚಿನ್ನವಾಗಿ ಸಾಗಿದ
ನಾನು ಮಾತ್ರ ಆಗ ಹೇಗೋ ಹಾಗೆಯೇ ಈಗಲೂ

ಸಾಮಾನ್ಯರಿಗೂ ಸಾಧಕರಿಗೂ ಇರುವ ವ್ಯತ್ಯಾಸವೇ ಇದು. ಎಲ್ಲರಂತೆಯೇ ಇದ್ದು ಸತತ ಶ್ರದ್ಧೆ ಸಾಧನೆಯಿಂದ ಕೆಲವರು ಎತ್ತರಕ್ಕೇರಿಬಿಡುತ್ತಾರೆ. ಅಂತಹವರನ್ನೇ ನಾವು ಮಹಾತ್ಮರೆನ್ನುತ್ತೇವೆ. ಹಲವಾರು ಜನ ಹಾಗೇ ಉಳಿದುಬಿಡುತ್ತಾರೆ.

ಭಾರತೀಯ ಮನಸ್ಸು ಇತಿಹಾಸವನ್ನು ಬಹಳ ಬೇಗ ಪುರಾಣವಾಗಿಸಿಬಿಡುತ್ತದೆ. ಹಾಗೆ ಮಾಡುವಾಗ ಮನುಷ್ಯ ಸಾಧ್ಯತೆಗಳು, ಪ್ರಯತ್ನಗಳು ಗೌಣವಾಗಿಬಿಡುವ, ದೈವತ್ವಕ್ಕೇರಿಸುವುದರ ಮೂಲಕ ಅವರನ್ನು ನಮ್ಮಿಂದ ದೂರವಿಡುವ ಅಪಾಯವೂ ಇದೆ. ಎಲ್ಲ ಜೀವಿಗಳ ಸಹಜ ಪರಿಸರದಲ್ಲಿ ಬದುಕುತ್ತಲೇ ಅವರಿಗಿಂತ ಭಿನ್ನವಾಗಿ ಏನೆಲ್ಲ ಸಾಧಿಸಬಹುದು ಎಂಬುದಕ್ಕೆ ಮಹಾತ್ಮರ ಬದುಕು ನಿದರ್ಶನವಾಗಬೇಕು. ಹೊಸ ಜನಾಂಗಕ್ಕೆ ಆದರ್ಶವಾಗಬೇಕು. ಶಿವಕುಮಾರಸ್ವಾಮಿಯವರ ಬದುಕು ಆ ಬಗೆಯದು.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ಪಟೇಲ್ ಹೊನ್ನಪ್ಪಗೌಡ ಹಾಗೂ ಗಂಗಮ್ಮ ದಂಪತಿಗೆ 13ನೆಯ ಮಗನಾಗಿ 1908 ಏಪ್ರಿಲ್ 1 ರಂದು ಜನಿಸಿದ ಶಿವಣ್ಣನನ್ನು ಉನ್ನತ ಅಧಿಕಾರಿಯಾಗಿ ನೋಡಬೇಕೆಂಬುದು ಅವರ ತಂದೆಯ ಸಹಜ ಬಯಕೆಯಾಗಿತ್ತು. ಆದರೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಓದುತ್ತಿದ್ದ ಶಿವಣ್ಣನ ಬದುಕಿನಲ್ಲಿ ನಡೆದ ಒಂದು ಘಟನೆ ಅವರ ಬದುಕಿಗೆ ಮಾತ್ರವಲ್ಲ, ನಾಡಿನ ಚರಿತ್ರೆಯಲ್ಲಿಯೇ ಹೊಸ ಅಧ್ಯಾಯಕ್ಕೆ ನಾಂದಿಯಾಯಿತು. 1930ನೇ ಇಸವಿಯಲ್ಲಿ ಸಿದ್ಧಗಂಗಾ ಮಠದ ಕಿರಿಯ ಸ್ವಾಮೀಜಿಗಳಾಗಿದ್ದ ಮರುಳಾರಾಧ್ಯರು ಅಕಾಲಿಕವಾಗಿ ಶಿವೈಕ್ಯರಾದರು. ಅವರ ಒಡನಾಟದಲ್ಲಿದ್ದ ಶಿವಣ್ಣ ಅಂತ್ಯಕ್ರಿಯೆಗೆಂದು ತುಮಕೂರಿಗೆ ಬಂದಿದ್ದರು. ಶಿವಣ್ಣನ ಬಗ್ಗೆ ಚೆನ್ನಾಗಿ ಗೊತ್ತಿದ್ದ ಹಿರಿಯ ಶ್ರೀಗಳಾದ ಉದ್ದಾನ ಶಿವಯೋಗಿಗಳು ಮರುಳಾರಾಧ್ಯರ ಅಂತ್ಯಕ್ರಿಯೆ ಮುಗಿದ ಬಳಿಕ ಎಲ್ಲರ ಸಮ್ಮುಖದಲ್ಲಿ ಶಿವಣ್ಣನನ್ನೇ ಮಠದ ಉತ್ತರಾಧಿಕಾರಿ ಎಂದು ಘೋಷಿಸಿಬಿಟ್ಟರು. ಅಂತ್ಯಕ್ರಿಯೆಗೆ ಸಾಮಾನ್ಯನಂತೆ ಬಂದಿದ್ದ ಶಿವಣ್ಣ ಹಿಂತಿರುಗುವ ವೇಳೆಗೆ 'ಶಿವಕುಮಾರಸ್ವಾಮಿ'ಯಾಗಿ ಕಾವಿಧಾರಿಯಾಗಿದ್ದರು. ಕಾವಿ ತೊಟ್ಟೇ ತರಗತಿಗೆ ಹಾಜರಾಗಿ ಪದವಿ ಮುಗಿಸಿದರು. ಉದ್ದಾನ ಶ್ರೀಗಳು 1941 ಜನವರಿ 11 ರಂದು ಶಿವೈಕ್ಯರಾದಾಗ ಶಿವಕುಮಾರಸ್ವಾಮಿಗಳು ಮಠದ ಅಧಿಕಾರ ವಹಿಸಿಕೊಂಡರು. ಅಲ್ಲಿಂದ ಸುಮಾರು ಏಳು ದಶಕಗಳ ಕಾಲ

ಸ್ವಾಮೀಜಿಯವರು ಮಾಡಿದ ಸಮಾಜಮುಖಿ ಕಾರ್ಯ ನಾಡಿನೆಲ್ಲ ಮಠಾಧೀಶರಿಗೂ ಒಂದು ಮಾದರಿಯಾಗಿದೆ.

14ನೇ ಶತಮಾನದಲ್ಲಿ ಗೋಸಲ ಸಿದ್ದೇಶ್ವರರು ಧರ್ಮಪರ್ಯಟನ ಮಾಡುವಾಗ ಇಲ್ಲಿಗೆ ಬಂದು ತಪೋನುಷ್ಠಾನ ಮಾಡಿ ಮಠ ಸ್ಥಾಪಿಸಿದರೆಂಬುದು ಇತಿಹಾಸ. ಇಲ್ಲಿನ ಗವಿಗಳಲ್ಲಿ ತಪಸ್ಸು ಮಾಡುತ್ತಿದ್ದ ವಿರಕ್ತರೊಬ್ಬರಿಗೆ ಬಾಯಾರಿಕೆಯಾದಾಗ ಗುರುಗಳು ತಮ್ಮ ಕಾಲಿನಿಂದ ಬಂಡೆಗಪ್ಪಳಿಸಿದಾಗ ಬಿರುಕುಮೂಡಿ ಅಲ್ಲಿಂದ ನೀರು ಉಕ್ಕಿತು ಎಂಬುದು ಪ್ರತೀತಿ. ಸಿದ್ಧರಿಂದ ಗಂಗೆ ಉದ್ಭವವಾದ್ದರಿಂದ ಮುಂದೆ ಇದು 'ಸಿದ್ಧಗಂಗೆ'ಯಾಯಿತು. ಈಗಲೂ ಬೆಟ್ಟದ ಮೇಲಿನ ಜಲೋದ್ಭವ ಕುಂಡ ಭಕ್ತರಿಗೆ ಪವಿತ್ರತಾಣ. 15ನೇ ಶತಮಾನದಲ್ಲಿ ಯಡಿಯೂರು ಸಿದ್ಧಲಿಂಗೇಶ್ವರರು ಇಲ್ಲಿ ತಪಸ್ಸು ಮಾಡಿದರೆಂಬ ಐತಿಹ್ಯವಿದೆ. 19ನೇ ಶತಮಾನದಲ್ಲಿ ಅಟವೀಸ್ವಾಮಿಗಳು ಕ್ಷೇತ್ರಕ್ಕೆ ಬರುವ ಭಕ್ತರಿಗೆ ಅನ್ನದಾಸೋಹ ಆರಂಭಿಸಿದರು. ಅಂದು ಹೊತ್ತಿಸಿದ ಒಲೆ ಇಂದಿಗೂ ಆರಿಲ್ಲ. ತಮ್ಮ ಗುರುಗಳಾದ ಉದ್ದಾನಸ್ವಾಮಿಗಳು 'ಮಠಕ್ಕೆ ಬಂದವರು ಹಸಿದು ಹೋಗಬಾರದು' ಎಂದು ಹೇಳಿದ ಮಾತುಗಳನ್ನು ಶಿವಕುಮಾರಸ್ವಾಮಿಗಳು ಬದುಕಿನುದ್ದಕ್ಕೂ ಚಾಚೂ ತಪ್ಪದೆ ಪಾಲಿಸಿದರು. ದಾಸೋಹ ಪ್ರಾರಂಭಿಸಿದ ಆರಂಭದಲ್ಲಿ ಅಟವೀಸ್ವಾಮಿಗಳು, ಉದ್ದಾನಸ್ವಾಮಿಗಳು ಜೋಳಿಗೆ ಹಿಡಿದು ಸುತ್ತಲ ಹಳ್ಳಿಗಳಿಂದ ಭಿಕ್ಷಾರೂಪದಲ್ಲಿ ದವಸಧಾನ್ಯ ಸಂಗ್ರಹಿಸಿ ತರುತ್ತಿದ್ದರು. ಶಿವಕುಮಾರಸ್ವಾಮಿಗಳೂ ಈ ಪರಂಪರೆಯನ್ನು ಮುಂದುವರಿಸಿದರು.

ವೈರಾಗ್ಯ ಅಥವಾ ಸಂನ್ಯಾಸ ಎಂದರೆ ಕಾಡಿನಲ್ಲಿ ಕುಳಿತು ಏಕಾಂತದಲ್ಲಿ ತಪಸ್ಸು ಮಾಡುವುದು ಎಂಬುದು ರೂಢಿಯ ಪರಿಕಲ್ಪನೆ. ಬಸವಣ್ಣ ಇದಕ್ಕೆ ಹೊಸ ಅರ್ಥ ನೀಡಿ 'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು' ಎಂದು ಹೇಳುವ ಮೂಲಕ ಧರ್ಮಕ್ಕೆ ಸಾಮಾಜಿಕ ಆಯಾಮ ನೀಡಿದ ಮಹಾಮಹಿಮ. ಶಿವಕುಮಾರಸ್ವಾಮಿಗಳು ಬಸವಣ್ಣನ ಮಾರ್ಗ ಅನುಸರಿಸಿದ ಸಾಮಾಜಿಕ ಬದ್ಧತೆಯಿದ್ದ ಸಂತರು.

ಶಿವಕುಮಾರಸ್ವಾಮಿಗಳು ನನಗೆ ಬಹಳ ಮಹತ್ವದವರೆನ್ನಿಸಿದ್ದು ಅವರು ಮಕ್ಕಳ ಬಗ್ಗೆ ವಹಿಸಿದ ಕಾಳಜಿಯಿಂದ. ನನಗೆ ತಿಳಿದಂತೆ ನಮ್ಮ ನಾಡಿನಲ್ಲಿ ಮಕ್ಕಳ ಬಗ್ಗೆ ಹೀಗೆ ಕಾಳಜಿಯಿಟ್ಟು ಬದುಕಿನುದ್ದಕ್ಕೂ ಶ್ರಮಿಸಿ, ಅವರ ಬದುಕಿಗೆ ಭರವಸೆಯ ಬೆಳಕು ಕಲ್ಪಿಸಿದ ಮತ್ತೊಬ್ಬರು ವಿರಳ. ಸ್ವಾಮೀಜಿ ಮಠದ ಅಧಿಕಾರ ವಹಿಸಿಕೊಂಡಾಗ ಮಠದ ಅಂಗಳದಲ್ಲಿ ಪುಟ್ಟದೊಂದು ವಿದ್ಯಾರ್ಥಿನಿಲಯವಿದ್ದು ಸಂಸ್ಕೃತ ಕಲಿಯುವ 70 ವಿದ್ಯಾರ್ಥಿಗಳಿದ್ದರು. ಈಗ ಸುಮಾರು 10 ಸಾವಿರ ವಿದ್ಯಾರ್ಥಿಗಳಿಗೆ ಸಿದ್ಧಗಂಗಾ ಮಠ ಆಶ್ರಯ ನೀಡಿದೆಯೆಂಬುದು ಶಿವಕುಮಾರ ಸ್ವಾಮಿಗಳ ಕರ್ತೃತ್ವ ಶಕ್ತಿ, ಮಕ್ಕಳ ಬಗೆಗಿನ ಅವರ ಕಾಳಜಿ ಹಾಗೂ ಸಾಮಾಜಿಕ ಬದ್ಧತೆಯನ್ನು ಸೂಚಿಸುತ್ತದೆ. ಗ್ರಾಮೀಣ ಭಾಗದ

ಮಕ್ಕಳಿಗೆ ಶಿಕ್ಷಣದ ಅಗತ್ಯ ಅರಿತ ಸ್ವಾಮೀಜಿ ಬದುಕಿನುದ್ದಕ್ಕೂ ಅದಕ್ಕಾಗಿಯೇ ನಿರಂತರ ಶ್ರಮಿಸಿದರು. ಇಂದು ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಮಾನ ಪಡೆದ ಅನೇಕರಿಗೆ ಆಶ್ರಯ ನೀಡಿದ್ದು ಸಿದ್ಧಗಂಗಾ ಮಠ. ಇಲ್ಲಿ ಶಿಕ್ಷಣ ಪಡೆದ ಅನೇಕ ಬಡಕುಟುಂಬಗಳು ಬದುಕನ್ನು ಕಟ್ಟಿಕೊಂಡಿವೆ. ಜಾತಿ-ಮತ ಭೇದವಿಲ್ಲದೆ ಎಲ್ಲ ಮಕ್ಕಳಿಗೂ ಅವಕಾಶ ಕಲ್ಪಿಸಿದ ಶ್ರೀಗಳು, ಸಾಕಲಾಗದೆ ತಂದೆತಾಯಂದಿರು ಐದಾರು ವರ್ಷದ ಮಕ್ಕಳನ್ನು ಮಠದಲ್ಲಿ ಬಿಟ್ಟುಹೋಗುತ್ತಿದ್ದಾಗ ಆ ಮಕ್ಕಳಿಗೆ 'ತಾಯಿವಾತ್ಸಲ್ಯ' ತೋರಿ ಸಲಹಿದ್ದಾರೆ. ದೇಶ ಕಟ್ಟುವುದೆಂದರೆ, ಸಮಸಮಾಜ ನಿರ್ಮಾಣವೆಂದರೆ ಇದೇ ಅಲ್ಲವೇ?

ಶಿವಕುಮಾರ ಸ್ವಾಮಿಗಳು ಮಠದ ಮಕ್ಕಳಿಗೆ ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷೆಗಳನ್ನು ಸ್ವತಃ ಪಾಠಮಾಡಿ ಕಲಿಸುತ್ತಿದ್ದರು. ಇದು ಅವರ ಪ್ರಗತಿಪರ ಮನೋಭಾವವನ್ನು ತೋರಿಸುತ್ತದೆ. ಸಂಸ್ಕೃತ ನಮ್ಮ ಪರಂಪರೆಯ ಜ್ಞಾನವನ್ನು ಒಳಗೊಂಡಿರುವ ಭಾಷೆ. ಇಂಗ್ಲಿಷ್ ಸಮಕಾಲೀನ ಬದುಕಿನ ಅಗತ್ಯ. ಇವೆರಡರ ಜ್ಞಾನವೂ ನಮ್ಮ ಮಕ್ಕಳಿಗೆ ಅತ್ಯಗತ್ಯವೆಂಬುದನ್ನು ಸ್ವಾಮೀಜಿ ಮನಗಂಡಿದ್ದರು. ಪರಂಪರೆ ಮ್ತು ಆಧುನಿಕತೆ ಇವೆರಡೂ ಒಂದು ಹದದಲ್ಲಿ ಸೇರಿದಾಗ ಬದುಕು ಹಸನಾಗುತ್ತದೆ ಎಂಬುದನ್ನು ಅವರು ಬಲ್ಲವರಾಗಿದ್ದರು. ಪರಂಪರೆಯನ್ನು ನಿರಾಕರಿಸದೆ ಆಧುನಿಕತೆಯನ್ನು ಒಳಗೊಳ್ಳುವುದು ಹೇಗೆಂಬುದು ಶ್ರೀಗಳ ನಿರಂತರ ಹುಡುಕಾಟವಾಗಿತ್ತು.

ಒಂದು ಕಾಲಕ್ಕೆ ಶಿಕ್ಷಣಕ್ಷೇತ್ರ ಸೇವಾವಲಯವಾಗಿತ್ತು. ಗುರುಕುಲದ ಪರಿಕಲ್ಪನೆಗೆ ಭಾರತೀಯ ಪರಂಪರೆಯಲ್ಲಿ ಪ್ರಮುಖ ಸ್ಥಾನವಿತ್ತು. ಬ್ರಿಟಿಷರು ನಮ್ಮ ಪರಂಪರೆಯ ಬದುಕಿಗೆ ಪ್ರವೇಶಮಾಡಿದ್ದು ಶಿಕ್ಷಣದ ಮೂಲಕವೇ! ವಸಾಹತುಶಾಹಿ ಸಂದರ್ಭದಲ್ಲಿ ಪಾಶ್ಚಾತ್ಯ ಸಂಸ್ಕೃತಿ ಶಿಕ್ಷಣದ ಮುಖಾಂತರ ಒಳಹೊಕ್ಕು ನಮ್ಮ ಸಾಮಾಜಿಕ ಬದುಕಿನ ರಚನೆಯ ವಿನ್ಯಾಸವನ್ನೇ ಬದಲಿಸಿದ್ದು ಈಗ ಇತಿಹಾಸ. ನಮ್ಮ ಕಾಲದ ದುರಂತವ್ಯಂಗ್ಯವೆಂದರೆ ಶಿಕ್ಷಣಕ್ಷೇತ್ರ 'ಉದ್ಯಮ'ವಾಗಿ ರೂಪಾಂತರಹೊಂದಿದ್ದು. ಇದರಲ್ಲಿ ನಮ್ಮ ಧಾರ್ಮಿಕ, ರಾಜಕೀಯ ನೇತಾರರ ಪಾಲೂ ಬಹಳಷ್ಟಿದೆ. ಶಿಕ್ಷಣ ಉಳ್ಳವರ ಸ್ವತ್ತಾಗುವಂತೆ ಮಾಡುವಲ್ಲಿ ಇವರ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಇಂತಹ ಸಂದರ್ಭದಲ್ಲಿ ಶಿಕ್ಷಣದ ಮಹತ್ವವನ್ನು ಮನಗಂಡು ಅದನ್ನು 'ಉದ್ಯಮ'ವಾಗದಂತೆ ಸೇವಾಕ್ಷೇತ್ರವನ್ನಾಗಿಯೇ ಕಾಪಾಡಿದ್ದು ಶಿವಕುಮಾರಸ್ವಾಮಿಗಳ ಸಾಧನೆ. ಜತೆಗೆ ಸಮಾನಶಿಕ್ಷಣ ಇಂದಿನ ಅಗತ್ಯ. ಈ ಪರಿಕಲ್ಪನೆಯೂ ಸಾಕಾರವಾಗಿರುವುದು ಸಿದ್ಧಗಂಗಾ ಮಠದಲ್ಲಿ ಎಂಬುದು ಅತ್ಯಂತ ಮಹತ್ವದ ಸಂಗತಿ. ಸರ್ಕಾರ ಮಾಡಬೇಕಾದ ಕೆಲಸವನ್ನು ಸ್ವಾಮೀಜಿ ನಿರಪೇಕ್ಷ ಮನೋಭಾವದಿಂದ ಯಾವ ಪ್ರಚಾರದ ಹಂಗಿಲ್ಲದೆ ಸಾಧಿಸಿದ್ದು ನಮ್ಮ ಕಾಲದ ವಿಸ್ಮಯ.

ಸುಮಾರು 10 ಸಾವಿರ ಮಕ್ಕಳನ್ನು ಸಲಹುತ್ತಿದ್ದ ಸ್ವಾಮೀಜಿಯ ಹಿಂದಿನ ಶಕ್ತಿ ಯಾವುದು? ಮಠದ ಆಶ್ರಯದಲ್ಲಿರುವ ಬಹುಪಾಲು ಮಕ್ಕಳು ಗ್ರಾಮೀಣ ಭಾಗದಿಂದ ಬಂದವರು. ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸುತ್ತಿರುವ ಗುರುಗಳಿಗೆ ತಮ್ಮ ಕೈಲಾದ ನೆರವು ನೀಡಬಾರದೇ? ನಮ್ಮ ರೈತಾಪಿ ಜನರಲ್ಲಿದ್ದ ಈ ಉಪಕಾರಸ್ಮರಣೆಯ ಮನೋಭಾವ ಸ್ವಾಮಿಗಳ ಶ್ರೀರಕ್ಷೆಯಾಗಿತ್ತು. ರೈತಾಪಿ ಬಂಧುಗಳು ಮಠಕ್ಕೆ ಸೇವಾರೂಪದಲ್ಲಿ ದವಸಧಾನ್ಯವನ್ನು ಧಾರಾಳವಾಗಿ ತಂದು ನೀಡುತ್ತಿದ್ದರು. ಗ್ರಾಮೀಣ ಪ್ರದೇಶದ ಸಾಮಾನ್ಯ ಜನರಲ್ಲಿ ಇನ್ನೂ ಸಹಬಾಳ್ವೆಯ ಪರಿಕಲ್ಪನೆ ಸಂಪೂರ್ಣ ನಾಶವಾಗಿಲ್ಲ. ಪ್ರತಿನಿತ್ಯ ಸುಮಾರು 30 ಕ್ವಿಂಟಲ್ ಅಕ್ಕಿ, 15 ಕ್ವಿಂಟಲ್ ರಾಗಿಹಿಟ್ಟು, 5 ಕ್ವಿಂಟಲ್ ರವೆ, 3 ಕ್ವಿಂಟಲ್ ತೊಗರಿಬೇಳೆ ಜತೆಗೆ ಇತರ ಪರಿಕರಗಳು ಮಠದಲ್ಲಿ ನಡೆಯುವ ಅನ್ನದಾಸೋಹಕ್ಕೆ ಅಗತ್ಯವಿದೆ ಎಂಬುದು ಒಂದು ಅಂದಾಜು. ಇವೆಲ್ಲ ಸಹಕಾರ ತತ್ತ್ವದಿಂದಲ್ಲದೆ ಸಾಧ್ಯವೆ? ಸ್ವಾಮೀಜಿಯವರು ಈ ಸಹಕಾರ ಮನೋಭಾವವನ್ನು ಜನರಲ್ಲಿ ಬಿತ್ತಿ ಬೆಳೆಯುತ್ತಿದ್ದರೆಂದೇ ನಮ್ಮ ಕಾಲದ ಮಹಾತ್ಮರು. ಅಧಿಕಾರದಿಂದಾಗಲೀ, ಸ್ಥಾನಬಲದಿಂದಾಗಲೀ, ಹಣದಿಂದಾಗಲೀ, ಜನರ ವಿಶ್ವಾಸ ಸಂಪಾದಿಸುವುದು ಸಾಧ್ಯವಿಲ್ಲ. ನಮ್ಮ ಕಾಲದಲ್ಲಿ ವಿಶ್ವಾಸಾರ್ಹತೆಯೇ ಬಹು ದೊಡ್ಡ ಸವಾಲಾಗಿದೆ. ಇಂತಹ ಸಂದರ್ಭದಲ್ಲಿ ಶಿವಕುಮಾರಸ್ವಾಮಿಗಳು ಸಂಪಾದಿಸಿದ್ದ ವಿಶ್ವಾಸಾರ್ಹತೆ ಅವರ ಬಹುದೊಡ್ಡ ಸಾಧನೆ. ಸ್ವಾಮೀಜಿಯವರು ಶ್ರಮಸಂಸ್ಕೃತಿಯಲ್ಲಿ ನಂಬಿಕೆಯಿದ್ದವರು. ಅವರ ಬದುಕನ್ನು ಗಮನಿಸಿದರೆ ಕಾವಿಯುಡುಗೆಯ ನಂತರವೂ ಅವರು ಎಲ್ಲ ಕೆಲಸಗಳನ್ನು ಸ್ವತಃ ಮಾಡುತ್ತಿದ್ದರು. ಅಲ್ಲಿಯ ಮಕ್ಕಳಿಗೂ ಶ್ರಮಸಂಸ್ಕೃತಿಯನ್ನು ಅಭ್ಯಾಸ ಮಾಡಿಸುತ್ತಿದ್ದರು. ಅವರ ದಿನಚರಿಯನ್ನು ಗಮನಿಸಿದರೆ ಅಚ್ಚರಿಯಾಗುತ್ತದೆ. ಅದನ್ನು ಎಂದೂ ಅವರು ತಪ್ಪಿಸಿದವರಲ್ಲ. ಇಂತಹ ನಿಷ್ಠೆಯೇ ಅವರ ಶಕ್ತಿಯಾಗಿತ್ತು. ಅತ್ಯಂತ ಪ್ರಭಾವಿ ಶಕ್ತಿಯಾದ ಧರ್ಮ ತನ್ನ ವಿಶ್ವಾಸಾರ್ಹತೆ ಯನ್ನು ಕಳೆದುಕೊಳ್ಳುತ್ತಿರುವ ನಮ್ಮ ಸಂದರ್ಭದಲ್ಲಿ ಶಿವಕುಮಾರಸ್ವಾಮೀಜಿಯಂಥ ವರು ಧರ್ಮದ ವಿಶ್ವಾಸಾರ್ಹತೆಯನ್ನು ಕಾಪಾಡುತ್ತಿದ್ದರೆಂಬುದು ಗಮನಿಸಬೇಕಾದ ಮಹತ್ವದ ಸಂಗತಿ. 'ಧರ್ಮೋರಕ್ಷತಿ ರಕ್ಷಿತಃ' **(ಕೃಪೆ: ವಿಜಯವಾಣಿ)**

□

# ಕಾರುಣ್ಯದ ನಿಧಿ, ಕಲ್ಯಾಣದ ಪ್ರತಿರೂಪ

ಕುಂ. ವೀರಭದ್ರಪ್ಪ

ಹನ್ನೆರಡನೇ ಶತಮಾನದ ಶರಣರ ಕನಸನ್ನು ನಾಡಿನಲ್ಲಿರುವ ಬಹುಪಾಲು ವಿರಕ್ತಮಠಗಳು ನನಸು ಮಾಡುತ್ತಿವೆ. ಅವುಗಳಲ್ಲಿ ಶ್ರೀ ಸಿದ್ಧಗಂಗಾ ಮಠ ಅಗ್ರಗಣ್ಯ ಎನಿಸಿದೆ. ಕಳೆದ ಎರಡು ಶತಮಾನಗಳ ನಿರಂತರ ತ್ರಿವಿಧ ದಾಸೋಹದ ಫಲಾನುಭವಿಗಳು ನಾಡಿನಾದ್ಯಂತ ಚದುರಿದ್ದಾರೆ. ಮಠ ಹಾಗೂ ಪರಮಪೂಜ್ಯ ಶಿವಕುಮಾರ ಸ್ವಾಮೀಜಿಯವರು ಸಮಾಜದ ಪ್ರಾಣವಾಯು ಆಗಿದ್ದಾರೆ. ಮಠದ ವಿದ್ಯಾರ್ಥಿಗಳಲ್ಲಿ ಹಲವರು ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ.

ನಾಡಿನ ಬಹುಪಾಲು ಪ್ರಾಥಮಿಕ ಶಾಲಾ ಶಿಕ್ಷಕರು ಮಠದ ಕೊಡುಗೆ. ಅವರಲ್ಲಿ ಮಹತ್ವದ ಸಂಶೋಧಕರಿರುವಂತೆ ಸರ್ಕಾರದ ವರಿಷ್ಠಾಧಿಕಾರಿಗಳು ಇರುವರು. ಮಾತೃರೂಪಿ ಶ್ರೀಮಠ ಬಡ ವಿದ್ಯಾರ್ಥಿಗಳನ್ನು ಪಾಲಿಸಿ ಪೋಷಿಸುವ ತೊಟ್ಟಿಲು. ವರ್ಷದಿಂದ ವರ್ಷಕ್ಕೆ ಇಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗುತ್ತ ಸಾಗಿದೆ. ಈ ಸಾಲಿನಲ್ಲಿ ಶ್ರೀಮಠದಲ್ಲಿ ಆಶ್ರಯ ಪಡೆದಿರುವ ವಿದ್ಯಾರ್ಥಿಗಳು ಹತ್ತು ಸಹಸ್ರ ಸಂಖ್ಯೆಗೆ ಸನಿಹದಲ್ಲಿದ್ದಾರೆ.

ಸಿದ್ಧಗಂಗಾ ಮಠ! ಅದು ಶರಣರ ಕಲ್ಯಾಣದ ಪ್ರತಿರೂಪ. ಅದು ನಾಡಿನ ಹೆಮ್ಮೆ. ಕಳೆದೆರಡು ನೂರು ವರ್ಷಗಳಿಂದ ಅಡುಗೆಮನೆಯಲ್ಲಿನ ಒಲೆಯ ಬೆಳಕು ನಂದಾದೀವಿಗೆಯಾಗಿದೆ. ಪ್ರಸಾದದ ಪರಿಮಳ ನಾಡೊಂದೇ ಅಲ್ಲದೆ ದೇಶದಾದ್ಯಂತ ಹರಡಿದೆ. ಪ್ರತಿವರ್ಷ ಈ ತ್ರಿವಿಧ ದಾಸೋಹ ಸಾನ್ನಿಧ್ಯದ ಕಮ್ಮಟ ಸಹಸ್ರಾರು ಮಕ್ಕಳ ಭವಿಷ್ಯ ರೂಪಿಸುತ್ತಿದೆ. ಅವರನ್ನು ಅತ್ಯುತ್ತಮ ಪ್ರಜೆಗಳನ್ನಾಗಿಸುತ್ತಿದೆ.

ಮಠದ ಸಹಸ್ರ ಸಹಸ್ರ ಹಳೆ ವಿದ್ಯಾರ್ಥಿಗಳು ಜಗತ್ತಿನ ನಾನಾ ಕಡೆ ಚದುರಿರುವರು. ಅಂಥ ಹಳೇ ವಿದ್ಯಾರ್ಥಿಗಳಲ್ಲಿ ನಾನು ಸಹ ಒಬ್ಬ. ಇದು ನನಗೆ ಅಭಿಮಾನದ ಸಂಗತಿ. ಎಪ್ಪತ್ತರ ದಶಕದಲ್ಲಿ ಜಗತ್ತು ಈಗಿನಷ್ಟು ಕುಬ್ಜವಾಗಿರಲಿಲ್ಲ. ಜಿಲ್ಲಾ ಕೇಂದ್ರಗಳ ನಡುವೆ ಅಗಾಧ ಅಂತರವಿತ್ತು. ಇನ್ನು ತುಮಕೂರು ಜಿಲ್ಲೆ ಹಲವು ಯೋಜನೆಗಳಿಂದ ದೂರವಿರುವಂತೆ ಭಾಸವಾಗುತ್ತಿತ್ತು. ಹ್ಹಾಂ! ಅಂದಹಾಗೆ ಪ್ರಥಮ ಪಂಚವಾರ್ಷಿಕ ಯೋಜನೆ ಅವಧಿ ರಾಹುಗ್ರಸ್ತವಾಗಿತ್ತು. ಕ್ಷಾಮ ಸಾಂಕ್ರಾಮಿಕ ವ್ಯಾಧಿಗಳಿವೆಲ್ಲಕ್ಕಿಂತ

ಆಪತ್ಕಾಲೀನ ಪರಿಸ್ಥಿತಿ! ಇಂಥ ಹಲವು ಅನಿಷ್ಟಗಳೊಂದಿಗೆ ಮುಖಾಮುಖಿ ಯಾದವರೆಂದರೆ ಆ ಸಂಕ್ರಮಣ ಕಾಲದಲ್ಲಿ ಜನಿಸಿದ ನನ್ನಂಥವರು. ಬದುಕಿನ ಎರಡು ಮುಖಗಳೆಂದರೆ ಹಸಿವು ಮತ್ತು ಅಕ್ಷರ. ಸವಾಲು, ಸಾಹಸ, ಹುಂಬುತನವನ್ನು ಪರಿಚಯಿಸಿದ ಕಾಲಘಟ್ಟ ಅದು. ಅಲೆಮಾರಿಗಳಾಗಿದ್ದ, ನಿಶ್ಚಿತ ಕಟ್ಟಡಗಳಿಲ್ಲದ, ಡೋಲಾಯಮಾನ ಬದುಕಿನ ಶಿಕ್ಷಕರಿದ್ದ ಶಾಲೆಗಳಲ್ಲಿ ಕಲಿಸುವ ಕಲಿಯುವ ಉತ್ಸಾಹಕ್ಕೆ ಬರವಿರಲಿಲ್ಲ. ವಿಶ್ವವಿದ್ಯಾಲಯಗಳಂತೆ ಶೋಭಿಸುತ್ತಿದ್ದ ಪ್ರೌಢಶಾಲೆಗಳ ಮೆಟ್ಟಿಲು ಹತ್ತಿಳಿಯುವುದು ನನ್ನಂಥ ಕುಂಭಸಂಭವರಿಗೆ ಸುಲಭದ ಸಂಗತಿಯಾಗಿರಲಿಲ್ಲ. ಅದೂ ಆತಂಕದ ದಿವಸಗಳಲ್ಲಿ. ಮುಂದೆ ಒಂದೆರಡು ವರ್ಷಗಳ ಕಾಲ ತಾಪತ್ರಯವನ್ನು ಕಷ್ಟಕೋಟಲೆಗಳನ್ನು ಆಮೂಲಾಗ್ರ ಅನುಭವಿಸಿ ಅನುಭಾವಿಯಾದೆ.

ಶಿಕ್ಷಕೋಪಾಸಕನಾಗುವುದು ನನ್ನ ಅದಮ್ಯ ಬಯಕೆ. ಶಿಕ್ಷಣ ಮತ್ತು ಪ್ರಸಾದ ಇವೆರಡರ ದಾಸೋಹಕ್ಕೆ ಮಠ ಹೆಸರಾಗಿತ್ತು. ಅಲ್ಲಿ ಸೀಟು ದೊರಕುವುದು ಸುಲಭದ ಸಂಗತಿಯಾಗಿರಲಿಲ್ಲ. 'ಹೋಗು, ಆದರೆ ಪುನಃ ಬರಬೇಡ' ಎಂದು ಹೇಳಿ ಅಪ್ಪ ಬಸ್ಸಿಗೆ ಹತ್ತಿಸಿದ. ಮಠ ಸೇರಿಕೊಂಡೆ. ಆದರೆ ನನ್ನ ಜೀರ್ಣಾಂಗ ವ್ಯವಸ್ಥೆಗೂ ರಾಗಿಮುದ್ದೆಗೂ ಕೆಲಕಾಲ ಜುಗಲ್‌ಬಂದಿ ನಡೆಯಿತು. ಇವೆರಡರ ನಡುವೆ ರಾಜಿ ಕುದುರಿದರು ನನಗೆ ಸೀಟು ದೊರಕಲಿಲ್ಲ. ಮಗ್ಗಿ ಬಾರದ ಕಾರಣಕ್ಕೆ ಪುನಃ ನನಗೆ ಸೀಟು ನಿರಾಕರಿಸಲಾಯಿತು. ಶ್ರೀಗಳು ಸಾಹಿತ್ಯಪ್ರೇಮಿಗಳು ಎಂದು ಪತ್ತೆಹಚ್ಚಿದ್ದೆ. ಕೊನೆಗೆ ಭಾಮಿನಿಷಟ್ಪದಿ ನನ್ನ ಭವಿಷ್ಯದ ಮೇಲೆ ಬೆಳಕು ಚೆಲ್ಲಿತು. ಅದರಲ್ಲಿದ್ದ ಪದ್ಯಗಳನ್ನು ವಾಚಿಸಿದ ರೀತಿ ಶ್ರೀಗಳಿಗೆ ಹಿಡಿಸಿತು.

ಕಲಿಸುವ ಉತ್ಸಾಹಕ್ಕೆ ಅಲ್ಲಿನ ಸಾತ್ವಿಕ ಪರಿಸರ ಕಾರಣ. ವಿದ್ಯಾರ್ಥಿಗಳ ಆಕಳಿಕೆ ಸದ್ದು ಆರಂಭಗೊಳ್ಳುವುದು ಸೂರ್ಯೋದಯಕ್ಕೂ ಪೂರ್ವದಲ್ಲಿ. ಆಕಳಿಕೆ ಲಗುಬಗೆ ಓಡಾಟ, ಬಾವಿ ಬಳಿ ತಣ್ಣೀರ ಸ್ನಾನ, ಅಲ್ಲಿ ತ್ರಿಪುಂಡ್ರಧಾರಣ ಅನರ್ಘ್ಯ ಆಭರಣ. ಅರೆಮೈಯನ್ನು ಮರೆಮಾಚುವ ಕೆಂಪು ವಸ್ತ್ರ, ವಿಶೇಷ ತರಗತಿಗಳಿರುವ ಕಡೆ ಓಡುವವರೆಷ್ಟೋ, ಅಲ್ಲಲ್ಲಿ ಕುಳಿತು ಅಧ್ಯಯನ ಮಾಡುವವರೆಷ್ಟೋ, ವ್ಯಾಸಂಗ ಮಾಡುವವರಂತೆ ಅಭಿನಯಿಸುವವರೆಷ್ಟೋ! ದೇವಸ್ಥಾನವಿರುವ ಬೆಟ್ಟವನ್ನು ಸಕಾರಣವಾಗಿ ಹತ್ತಿ ಇಳಿಯುವವರೆಷ್ಟೋ! ಅಲ್ಲಲ್ಲಿ ನಿಂತು ಸಂಸ್ಕೃತ ಶ್ಲೋಕಗಳ ನಿನಾದವನ್ನು ತನ್ಮಯತೆಯಿಂದ ಆಲಿಸಿ ಮೈಮರೆಯುವವರೆಷ್ಟೋ! ನನ್ನ ಮನಸ್ಸು ಕನವರಿಸುತ್ತಿದ್ದುದು ಇದನ್ನೆ ಅಲ್ಲವೆ! ನನ್ನ ವ್ಯಕ್ತಿತ್ವದಲ್ಲಿ ನಿಗೂಢವಾಗಿ ಅವಿತಿದ್ದ ಪ್ರತಿಭೆಯ ವಿವಿಧ ಮುಖಗಳು ಮೊಳೆಯಲು ಟಿಸಿಲು ಚಾಚಲು ಮಠದಲ್ಲಿನ ಪವಿತ್ರ ವಾತಾವರಣ ಪೋಷಕಾಂಶಗಳನ್ನು ಒದಗಿಸುತ್ತದೆ. ನನ್ನನ್ನೇ ಉದಾಹರಿಸುವುದಾದರೆ ಅಲ್ಲಲ್ಲಿ ಹಸಿ ಇದ್ದು ಕೊನರಲು ಸಾಧ್ಯವಿಲ್ಲದಂಥ ಕೊರಡಿನಂತಿದ್ದೆ.

ಪರಿಸರಕ್ಕೆ ಹೊಂದಿಕೊಂಡ ಕ್ಷಣದಿಂದ ಮಠದ ವಿದ್ವತ್ ಪರಿಸರ ನನ್ನನ್ನು

ಪರವಶಗೊಳಿಸಲಾರಂಭಿಸಿತು. ನನಗರಿವಿಲ್ಲದ ರೀತಿಯಲ್ಲಿ ಸಂಸ್ಕೃತ ಶ್ಲೋಕಗಳನ್ನು ಗುನುಗಲಾರಂಭಿಸಿದೆ. ಅಲ್ಲೆಲ್ಲಾ ಹಬ್ಬದೋಪಾದಿಯಲ್ಲಿ ಗೋಚರಿಸುತ್ತಿದ್ದ ಕನ್ನಡ-ಸಂಸ್ಕೃತ ಭಾಷಾಪ್ರವೀಣರನ್ನು ಪರಿಚಯಿಸಿಕೊಳ್ಳಲು ಹಾತೊರೆಯಲಾರಂಭಿಸಿದೆ. ಅವರ ಚಿತ್ತ ಸೂರೆಗೊಳ್ಳಲು ಕವಿತೆ ಕತೆಗಳ ಆಸರೆ ಪಡೆದೆ. ಪ್ರಸಾದ ಉಚಿತ ಸರಿ; ಆದರೆ ಉಳಿದ ವ್ಯಂಜಕಗಳು ಸಹ ಮುಖ್ಯವಲ್ಲವೆ! ಅದಕ್ಕೆಂದೇ ಬಿ.ಇಡಿ ವಿದ್ಯಾರ್ಥಿಗಳ ಪಾಠೋಪಕರಣಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಬರೆದುಕೊಡುತ್ತಿದ್ದೆ. ಇದಕ್ಕೆ ಇಂತಿಷ್ಟು ಸಂಭಾವನೆ ಲಭಿಸುತ್ತಿತ್ತು.

ಮಠವು ಪಠ್ಯಕ್ಕೆ ನೀಡಿದಷ್ಟೆ ಮಹತ್ವವನ್ನು ಪಠ್ಯೇತರ ಚಟುವಟಿಕೆಗಳಿಗೂ ನೀಡಿತ್ತು. ವಿದ್ಯಾರ್ಥಿಗಳು ಬಿಡುವಿನ ವೇಳೆಯನ್ನು ಸೃಜನಶೀಲವಾಗಿ ಬಳಸಿಕೊಳ್ಳುವುದು ಮುಖ್ಯವಲ್ಲವೆ? ಅದಕ್ಕೆಂದೇ ಅವರನ್ನು ಅಡುಗೆಮನೆಯ ಹಾಗೂ ಹೊಲದ ಕೆಲಸ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಲಾಗುತ್ತಿತ್ತು. ಡಿಗ್ನಿಟಿ ಆಫ್ ಲೇಬರ್! ಸಮಾಜದ ಸ್ವಾಸ್ಥ್ಯಕ್ಕೆ ಇದು ಅಗತ್ಯ.

ನಾನಿದ್ದ ವೇಳೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಜಿ.ಎಸ್. ಶಿವರುದ್ರಪ್ಪ, ಚಿದಾನಂದಮೂರ್ತಿ, ಜವರೇಗೌಡ ಸೇರಿದಂತೆ ಹಲವರು ಭಾಗವಹಿಸಿದರು. ಸೃಜನಶೀಲ ಮನಸ್ಸುಗಳಿಗೆ ಮಠವು ವಾತ್ಸಲ್ಯದ ತೊಟ್ಟಿಲಾಗಿತ್ತು. ಶಕುಂತಲಾದೇವಿ, ವಾಟಾಳ್ ನಾಗರಾಜ್, ರಾಜಶೇಖರ ಕರ್ಕಿಯಂಥವರು ವಾರಕ್ಕೊಬ್ಬರಾದರೂ ಮಠ ಸಂದರ್ಶಿಸುತ್ತಿದ್ದರಲ್ಲದೆ ವಿದ್ಯಾರ್ಥಿಗಳ ಸಮಕ್ಷಮ ಪ್ರತಿಭೆಯನ್ನು ಅನಾವರಣಗೊಳಿಸಿ ದಿಗ್ಭ್ರಮೆಗೊಳಿಸುತ್ತಿದ್ದರು. ದೈನಂದಿನ ಸಾಮೂಹಿಕ ಪ್ರಾರ್ಥನೆಯೂ ಸದಾ ಸ್ಮರಣೀಯ. ಶರಣ ಸಂಪ್ರದಾಯದ ಸಮವಸ್ತ್ರ ಧರಿಸಿ ಸಹಸ್ರಾರು ವಿದ್ಯಾರ್ಥಿಗಳ ಪ್ರಾರ್ಥನಾ ಸಮಾವೇಶ ನೋಡುವ ಸೊಗಸಿಗೆ ಪರ್ಯಾಯವಿಲ್ಲ. ಸಾಕ್ಷಾತ್ ಶ್ರೀಗಳು ಉಪಸ್ಥಿತರಿರುತ್ತಿದ್ದರಲ್ಲದೆ ಪ್ರತಿದಿವಸ ಒಂದಲ್ಲಾ ಒಂದು ಕಥೆಯನ್ನು ಪ್ರವಚಿಸುತ್ತಿದ್ದರು. ಅವರು ಹೇಳಿದ ನೂರಾರು ಕಥೆಗಳು ನನ್ನ ಸೃಜನಶೀಲತೆಯನ್ನು ಉದ್ದೀಪಿಸಿವೆ. ಶಿಕ್ಷಕನಾಗಿ ಮಕ್ಕಳ ಕಲ್ಪನಾಪ್ರತಿಭೆ ಅರಳಿಸಲು ಆ ಕಥೆಗಳು ನೆರವಾಗಿವೆ.

ಪೂಜ್ಯ ಶ್ರೀಗಳು ಹಗಲಿರುಳುಗಳ ನಡುವೆ ಗೆರೆ ಎಳೆದಿರಲಿಲ್ಲ. ಅತ್ಯಂತ ಕಡಿಮೆ ಆಹಾರ ಸೇವಿಸುತ್ತಿದ್ದ ಅವರು ಅಷ್ಟೇ ಪ್ರಮಾಣದಲ್ಲಿ ಯೋಗನಿದ್ದೆ ಮಾಡುತ್ತಿದ್ದರು. ಪ್ರತಿದಿವಸ ನಾಲ್ಕೈದರ ವೇಳೆ ಮಠದ ಆವರಣದಲ್ಲಿ ಏಕಾಂಗಿಯಾಗಿ ಸಂಚರಿಸುತ್ತಿದ್ದರು. ಅವರ ಪಾದುಕೆ ಸದ್ದು ಡಮರುಗದ ನಾದಕ್ಕಿಂತ ಮಿಗಿಲಿರುತ್ತಿತ್ತು. ಆ ಪಾಂಚಜನ್ಯ ಸದೃಶ ವಿದ್ಯಾರ್ಥಿಗಳು ಎದ್ದು ಓದುವ ಅನಿವಾರ್ಯತೆ ಇತ್ತು. ಶ್ರೀಗಳು ಮಾತೃಹೃದಯಿಗಳು; ಜ್ವರಪೀಡಿತ ವಿದ್ಯಾರ್ಥಿಗಳ ಆರೋಗ್ಯವನ್ನು ಖುದ್ದು ಪರಾಂಬರಿಸುತ್ತಿದ್ದರು. ಎಷ್ಟೋ ವಿದ್ಯಾರ್ಥಿಗಳ ಮರುಪ್ರಯಾಣಕ್ಕೆ ಹಣ ಸಹ ನೀಡುತ್ತಿದ್ದರು. **(ಕೃಪೆ: ಪ್ರಜಾವಾಣಿ)**

# ಅನ್ನ ಮತ್ತು ಅಕ್ಷರ ದಾಸೋಹಗಳ ಮಹಾಯೋಗಿ

ಡಾ. ಮಲ್ಲೇಪುರಂ ಜಿ. ವೆಂಕಟೇಶ

ನಲ್ವತ್ತೈದು ವರ್ಷಗಳ ಹಿಂದೆ. ಆಗ 'ಕನ್ನಡಪಂಡಿತ್' ಮಾಡಬೇಕೆಂಬ ಅಪೇಕ್ಷೆ ನನ್ನದಾಗಿತ್ತು. ಆಗ 'ಕನ್ನಡಪಂಡಿತ್' ಪದವಿ ಶಾಲೆಗಳು ಸಿದ್ಧಗಂಗಾ ಮಠ ಮತ್ತು ಮೈಸೂರಿನಲ್ಲಿ ಮಾತ್ರ ಇದ್ದವು. ನಾನು ಮೈಸೂರಿನಲ್ಲಿದ್ದು ಓದುವುದು ಕಷ್ಟಸಾಧ್ಯವೆಂದು ತಿಳಿದು ಸಿದ್ಧಗಂಗಾ ಮಠಕ್ಕೆ ಹೋಗುವುದೆಂದು ನಿಶ್ಚಯಿಸಿದೆ. ಆಗ ಅಲ್ಲಿ 'ಕನ್ನಡಪಂಡಿತ್' ಮಾಡುತ್ತಿದ್ದ ಶಾಂತಕುಮಾರ್ ಎನ್ನುವವರ ಪರಿಚಯ ನನ್ನೊಬ್ಬ ಗೆಳೆಯನಿಂದ ಆಗಿತ್ತು. ಆ ನೆಪದಲ್ಲಿ ಒಂದೆರಡು ಬಾರಿ ಶ್ರೀಕ್ಷೇತ್ರಕ್ಕೂ ಹೋಗಿದ್ದೆ.

ವಿಶಾಲವಾದ ಆವರಣ, ದೊಡ್ಡಬೆಟ್ಟದ ಬುಡದಲ್ಲಿ ಸಂಸ್ಕೃತ ಕಾಲೇಜು, ಅಕ್ಕಪಕ್ಕ ಹಿರಿಯ ಸ್ವಾಮಿಗಳ ಗದ್ದುಗೆಗಳು, ಬೆಳೆದು ನಿಂತಿದ್ದ ಅರಳಿಮರ, ಮಠದ ಸುತ್ತ ರಾಗಿಹೊಲಗಳು. ಪೂರ್ವದಿಕ್ಕಿಗೆ ಒಂದು ದೊಡ್ಡ ಆಲದಮರ ಇತ್ತು. ಸರಳತೆಯೇ ಭವ್ಯತೆಯ ಸಂಗಮವಾಗಿ ಮೈದಾಳಿತ್ತು. ಇದು ನನ್ನನ್ನು ತುಂಬಾ ಆಕರ್ಷಿಸಿತು. ಪ್ರತಿ ವಿದ್ಯಾರ್ಥಿಯೂ ಕಾವಿವಸ್ತ್ರ ಹೊದ್ದು ಅಲ್ಲಲ್ಲಿ ಓಡಾಡುತ್ತಿದ್ದರು. ಪ್ರತಿಯೊಬ್ಬರ ಹಣೆಯಲ್ಲೂ ವಿಭೂತಿ ವಿರಾಜಿಸುತ್ತಿತ್ತು. ಏಳು ವರ್ಷದ ಹುಡುಗರಿಂದ ಹಿಡಿದು, ಇಪ್ಪತ್ತನಾಲ್ಕು ವರ್ಷದವರೆಗಿನವರೆಲ್ಲರೂ ಪಂಚೆಯುಟ್ಟು ಓಡಾಡುತ್ತಿದ್ದುದೇ ಒಂದು ಸೊಗಸಾಗಿ ಕಾಣುತ್ತಿತ್ತು. ಮಠದ ಆವರಣದಲ್ಲೂ ಹೊರಗೂ ವಿದ್ಯಾರ್ಥಿಗಳು ಪುಸ್ತಕ ಹಿಡಿದೇ ಓಡಾಡುತ್ತಿದ್ದರು.

ಇದು 1970ರಲ್ಲಿ ನನಗೆ ಕಂಡ ದೃಶ್ಯ. ಈ ದೃಶ್ಯವು ನನ್ನ ಮನಸ್ಸಿನಿಂದ ಈವರೆಗೂ ಮರೆಯಾಗಿಲ್ಲ. ಶ್ರೀ ಸಿದ್ಧಗಂಗಾ ಮಠಕ್ಕೆ 1971ರಲ್ಲಿ ಕನ್ನಡಪಂಡಿತ್‌ಗೆ ಸೇರಿಕೊಂಡೆ. ನಾನು ಸ್ವಾಮಿಗಳ ಬಳಿ ಹೋಗುವ ಮೊದಲು ಕನ್ನಡಪಂಡಿತ್ ತರಗತಿಗೆ ಪಾಠ ಮಾಡುತ್ತಿದ್ದ ಪಂಡಿತ್ ಡಿ. ರಂಗರಾಜು ಅವರನ್ನು ಮೊದಲೇ ಕಂಡಿದ್ದೆ. ಅವರು ಸ್ವಾಮಿಗಳ ಬಳಿ ನನ್ನನ್ನು ಕರೆದುಕೊಂಡು ಹೋಗಿ, ಕನ್ನಡಪಂಡಿತ್ ತರಗತಿಗೆ ಪ್ರವೇಶಕೊಡಿಸುವ ಮಾತನಾಡಿದರು. ಆಗಲೇ ಸ್ವಾಮಿಗಳನ್ನು ನಾನು ಮೊದಲು ಕಂಡದ್ದು. ನನ್ನನ್ನು ನೋಡಿ ಒಂದು ಕ್ಷಣ ನಸುನಕ್ಕು, ಗಂಗರಾಜು ಅವರ ಮುಖ ನೋಡಿ ಆಗಲಿ ಎಂದರು. ನನಗೆ ಸ್ವರ್ಗವೇ ಸಿಕ್ಕಷ್ಟು ಸಂತೋಷ. ಆಕಾಶದಲ್ಲಿ ವಿಹಾರ ಮಾಡಿದ

ಭಾವ ಮನಸ್ಸೆಲ್ಲಾ ತುಂಬಿತು. ಸ್ವಾಮಿಗಳಿಗೆ ನಮಸ್ಕಾರ ಮಾಡಿ ಹೊರಬಂದೆ.

ಸ್ವಾಮಿಗಳನ್ನು ನಾನು ಪ್ರತಿನಿತ್ಯ ನೋಡುತ್ತಿದ್ದೆ. ಅವರು ಬರುತ್ತಿದ್ದರೆ ಜಡವು ಜಂಗಮವಾಗಿ ಮಾರ್ಪಾಡು ಆಗುತ್ತಿತ್ತು. ಅವರು ದಾಪುಗಾಲು ಇಡುತ್ತ ಓಡಾಡು ತ್ತಿದ್ದರೆ, ಹೆಳವನೂ ಓಡಾಡಬೇಕೆಂದೆನಿಸುತ್ತಿತ್ತು. ಚೈತನ್ಯದ ಮಂಗಳಮೂರ್ತಿಯೇ ನಮ್ಮ ಮುಂದೆ ಓಡಾಡುತ್ತಿದೆಯೆಂಬ ಭಾವ ಬಹುಕಾಲ ನನ್ನ ಮನಸ್ಸನ್ನು ಆವರಿಸಿತ್ತು. ಎರಡು ವರ್ಷ ಮಾತ್ರ ಮಠದಲ್ಲಿದ್ದೆ. ಅನಂತರ ಕ್ಯಾತ್ಸಂದ್ರದಲ್ಲಿ ಸಣ್ಣ ಕೊಠಡಿಯನ್ನು ಬಾಡಿಗೆಗೆ ಹಿಡಿದೆ. ಕನ್ನಡಪಂಡಿತ್ ಮುಗಿಸಿದ ಮೇಲೆ ಶ್ರೀಮಠದ ಸಂಪರ್ಕ ನನಗೆ ಕಡಿಮೆಯಾಯಿತು.

ನಾನು ಮಠದಲ್ಲಿ ಮೊದಲೆರಡು ವರ್ಷ ಇದ್ದೆನಷ್ಟೆ. ನಾನು ಮಠಕ್ಕೆ ಸೇರಿದ ಮೊದಲ ದಿನ ತಟ್ಟೆ ಹಿಡಿದುಕೊಂಡು ಊಟ ಕೊಡುತ್ತಿದ್ದ ವಿಶಾಲವಾದ ಸಭಾಂಗಣಕ್ಕೆ ಹೋದೆ. ವಿದ್ಯಾರ್ಥಿಗಳು ತಂಡೋಪತಂಡವಾಗಿ ಕೈಯಲ್ಲಿ ಊಟದ ತಟ್ಟೆ ಹಿಡಿದುಕೊಂಡು ಹೋಗುತ್ತಿದ್ದರು. ನನಗೆ ಇದು ತುಂಬಾ ಅಪರಿಚಿತವಾಗಿತ್ತು. ಊಟಕ್ಕೆ ಎಲ್ಲ ವಿದ್ಯಾರ್ಥಿಗಳು ಸಾಲುಸಾಲಾಗಿ ಕುಳಿತಿದ್ದರು. ಬಡಿಸುವುದಕ್ಕೆ ಮಠದ ಹಿರಿಯ ವಿದ್ಯಾರ್ಥಿಗಳು ರಾಗಿಮುದ್ದೆ ಹೊತ್ತು ತಂದರು. ಅವರ ಹಿಂದೆ ಸಾಂಬಾರನ್ನು ಬಕೆಟ್‌ನಲ್ಲಿ ಹಿಡಿದು ಬಂದರು. ಅವರು ತಟ್ಟೆಗೆ ಮುದ್ದೆಹಾಕಿ, ಎರಡೆರಡು ಸೌಟು ಸಾಂಬಾರನ್ನು ಹಾಕಿದರು. ನಾನು ಮೊಟ್ಟಮೊದಲ ಬಾರಿಗೆ ಮಠದ ಊಟ ಮಾಡಿದ್ದು ಆಗಲೇ.

ಶ್ರೀಕ್ಷೇತ್ರದಲ್ಲಿ ಪ್ರತಿನಿತ್ಯ ಕನಿಷ್ಠಪಕ್ಷ ಆರುನೂರರಿಂದ ಎಂಟುನೂರು ಜನ ಊಟ ಮಾಡುತ್ತಿದ್ದರು. ಇದು ನಲವತ್ತೈದು ವರ್ಷಗಳ ಹಿಂದಿನ ಮಾತು! ಆಗ ಶ್ರೀಕ್ಷೇತ್ರ ಇನ್ನೂ ಪ್ರವರ್ಧಮಾನಕ್ಕೆ ಬರುತ್ತಿತ್ತು. ತುಮಕೂರು ಜಿಲ್ಲೆಯ ಗ್ರಾಮೀಣ ಭಾಗಗಳಿಂದ ಅನೇಕ ರೈತರು ತಾವು ಬೆಳೆದ ರಾಗಿ, ಅಕ್ಕಿ, ಕಾಳು, ತರಕಾರಿ ಮುಂತಾದವುಗಳನ್ನು ಸ್ವಇಚ್ಛೆಯಿಂದ ತಂದುಕೊಡುತ್ತಿದ್ದರು. ನಾನು ಮಠದ ಆವರಣದಲ್ಲಿ ತಿರುಗಾಡುತ್ತಿರು ವಾಗ ರೈತರು, ಭಕ್ತರು ಬಂದು ಯಥಾಶಕ್ತಿ ತಮ್ಮ ಕಾಣಿಕೆ ಒಪ್ಪಿಸುತ್ತಿದ್ದುದನ್ನು ಕಾಣುತ್ತಿದ್ದೆ. ಶ್ರೀಕ್ಷೇತ್ರಕ್ಕೆ ಹಣ ಒದಗಿಬರುತ್ತಿದ್ದದ್ದು ಕಡಿಮೆಯೆಂದೇ ಹೇಳಬೇಕು. ಆದರೆ, ದವಸ-ಧಾನ್ಯ ಮಾತ್ರ ಹೆಚ್ಚಾಗಿ ಬರುತ್ತಿತ್ತು. ಹೀಗೆ ಬಂದ ದವಸ-ಧಾನ್ಯಾದಿಗಳನ್ನು ಒಂದೆಡೆ ಸಂರಕ್ಷಿಸುವ ಕೆಲಸ ಮತ್ತು ಬಂದ ದಾಸ್ತಾನನ್ನು ಲೆಡ್ಜರ್‌ನಲ್ಲಿ ಬರೆದುಕೊಂಡು ಚೀಟಿ ಕೊಡುವ ಪರಿಪಾಠವೂ ಇರುತ್ತಿತ್ತು. ಭಕ್ತಾದಿಗಳಿಂದ ಬಂದ ಪ್ರತಿ ವಸ್ತುವಿಗೂ ಮಠದ ಪಾರುಪತ್ಯಗಾರರು ಲೆಕ್ಕ ಇಡುತ್ತಿದ್ದರು. ರಾಗಿಯನ್ನು ಮಿಲ್ಲಿಗೆ ಹಾಕುವ ಮೊದಲು ಹತ್ತಾರು ಹೆಂಗಸರು ಅದನ್ನು ಕೇರಿ ಶುದ್ಧಿಗೊಳಿಸುತ್ತಿದ್ದರು. ಮಠದ ಆವರಣದಲ್ಲಿಯೇ ರಾಗಿಮಿಷನ್ ಇತ್ತು. ಅಲ್ಲಿ ಹಿಟ್ಟು ಮಾಡಿಕೊಡುತ್ತಿದ್ದರು.

ಪೂಜ್ಯ ಶ್ರೀಗಳು ಪ್ರತಿನಿತ್ಯ ಆರೇಳು ಸಲವಾದರೂ ಅಡುಗೆ ಮನೆಗೆ ಹೋಗಿ ತಪಶೀಲು ನಡೆಸುತ್ತಿದ್ದದ್ದುಂಟು. ಅಲ್ಲಿ ಮುದ್ದೆ ತೊಳೆಸುತ್ತಿದ್ದವರನ್ನು ಕಂಡು ಕಿರುನಗೆ ಬೀರಿದರೆ ಸಾಕು, ಅಡುಗೆ ಕೆಲಸ ಮಾಡುತ್ತಿದ್ದವರ ಉತ್ಸಾಹ ಹೆಚ್ಚಾಗುತ್ತಿತ್ತು. ರಾಗಿಮುದ್ದೆ ಮಾಡುವುದೂ ಅದನ್ನು ತೊಳೆಸಿ, ತಿರುಗಿ, ಮುದ್ದೆ ಕಟ್ಟುವುದು ಸುಲಭದ ಕೆಲಸವಲ್ಲ. ಆ ಕಾಲಕ್ಕೆ ಕನಿಷ್ಠ ಹೊರಗಿನ ಭಕ್ತರ ಸಂಖ್ಯೆಯೇ ಕೆಲವೊಮ್ಮೆ ಐದುನೂರು ದಾಟುತ್ತಿತ್ತು. ಆದರೆ, ಶ್ರೀಕ್ಷೇತ್ರಕ್ಕೆ ಬಂದ ಪ್ರತಿಯೊಬ್ಬರೂ ಊಟಮಾಡಿಯೇ ಹೋಗುತ್ತಿದ್ದರು. ಅದು 'ಊಟ' ಎನಿಸದೆ, 'ಪ್ರಸಾದ' ಎಂದು ಜನ ಭಾವಿಸುತ್ತಿದ್ದರು. ನಿಜಕ್ಕೂ ಅದು ಪ್ರಸಾದವೇ. ಶ್ರೀಮಠದ ಅಡುಗೆ ಮನೆಯ ಬೆಂಕಿ ಎಂದೂ ಆರುತ್ತಿರ ಲಿಲ್ಲ. ಒಮ್ಮೊಮ್ಮೆ ಸ್ವಾಮಿಗಳು ಸಾರನ್ನು ಸೌಟಿನಲ್ಲಿ ಹಿಡಿದು ಪರಿಶೀಲಿಸುತ್ತಿದ್ದು ದುಂಟು. ಅವರು ಊಟ ಮಾಡುತ್ತಿದ್ದ ಸಭಾಂಗಣಕ್ಕೂ ಬರುತ್ತಿದ್ದರು. ಅವರು ಬರುವ ಹೆಜ್ಜೆಯ ಸಪ್ಪಳಕ್ಕೆ ಸಭಾಂಗಣವು ಮೌನದಲ್ಲಿ ಅದ್ದಿಹೋಗುತ್ತಿತ್ತು! ಪ್ರತಿ ಸಾಲಿನ ಮುಂದೆ ನಿಂತು 'ಪ್ರಸಾದ' ಬಡಿಸುತ್ತಿದ್ದುದನ್ನು ನೋಡುತ್ತಿದ್ದರು. ಇದು ಪ್ರತಿನಿತ್ಯದ ಕಾಯಕಯೋಗಿಯ ಮಹಾಕಾಯಕವೇ ಆಗಿರುತ್ತಿತ್ತು! **(ಕೃಪೆ: ಪ್ರಜಾವಾಣಿ)**

---

ಧರ್ಮ ಇರುವುದು ವಿಚಾರ ಮಂಡಿಸುವುದಕ್ಕಲ್ಲ. ಆಚರಣೆ ಮಾಡಿ ನಡೆಯುವುದಕ್ಕೆ ಎಂಬುದನ್ನು ತೋರಿಸಿಕೊಟ್ಟ ಅಪರೂಪದ ವ್ಯಕ್ತಿತ್ವ ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳದ್ದಾಗಿತ್ತು. ದೊಡ್ಡವರು ನಡೆದು ತೋರಿದ ಮಾರ್ಗವೇ ಧರ್ಮ ಎಂದು ಕರೆಯುತ್ತೇವೆ. ಸಿದ್ಧಗಂಗೆಯ ಶ್ರೀಗಳು ಬದುಕಿದ ದಾರಿಯೇ ಈ ಸಮಾಜಕ್ಕೆ ಧರ್ಮ ಮಾರ್ಗವಾಗಿದೆ. ಅಂತಹ ಪುಣ್ಯಾತ್ಮರನ್ನು ಕಳೆದುಕೊಂಡಿರುವ ದೇಶಕ್ಕೆ ತುಂಬಲಾರದ ಕೊರತೆ ಎದುರಾಗಿದೆ.

**ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಮಹಾಸ್ವಾಮಿಗಳು**
ಶ್ರೀಶೈಲ

# ಸರಳತೆಯ ಕಾಯಕಯೋಗಿ

ಡಿ.ಎಂ. ಕುರ್ಕೆ ಪ್ರಶಾಂತ್

**ಬ**ದುಕಿನಲ್ಲಿ ತೀರಾ ಸರಳವಾಗಿದ್ದ ಸ್ವಾಮೀಜಿ, ಆಹಾರದ ವಿಚಾರದಲ್ಲಿಯೂ ಸರಳತೆ ರೂಢಿಸಿಕೊಂಡಿದ್ದರು. ಕಾಯಕತತ್ವವನ್ನು ಅಡಿಗಡಿಗೂ ಅನುಸರಿಸಿದ್ದರು. ಕಾಯಕಯೋಗ ಮತ್ತು ಆಹಾರದಲ್ಲಿ ಸರಳತೆ ಅವರ ವ್ಯಕ್ತಿತ್ವವನ್ನು ಹೊಳೆಯುವಂತೆ ಮಾಡಿತು. ಭಕ್ತರ ದೃಷ್ಟಿಯಲ್ಲಿ ಪವಾಡಪುರುಷರಾದರು.

ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ದಿನಚರಿ ಅಳವಡಿಸಿಕೊಂಡರೆ ಅದನ್ನು ದೀರ್ಘ ಅವಧಿಯವರೆಗೆ ಪಾಲಿಸುವುದು ಕಷ್ಟ. ಆದರೆ ಸ್ವಾಮೀಜಿ ತಾವು ಅಳವಡಿಸಿಕೊಂಡಿದ್ದ 'ದಿನಚರಿ'ಯನ್ನು ದೀರ್ಘವಾಗಿ ಅನುಸರಿಸುವ ಮೂಲಕ ಅಸಾಮಾನ್ಯರಾದರು.

ನಿತ್ಯದ ಚಟುವಟಿಕೆ ಆರಂಭವೇ ಬೆಳಗಿನ ಜಾವ 2.15ಕ್ಕೆ. ಇಷ್ಟಲಿಂಗ ಪೂಜೆ, ಮಠದ ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ವಹಣೆ, ಬಂದ ಕಾಗದಪತ್ರಗಳನ್ನು ಓದಿ ಪ್ರತಿಕ್ರಿಯಿಸು ವುದು, ಭಕ್ತರಿಗೆ ಮತ್ತು ವಿದ್ಯಾರ್ಥಿಗಳಿಗೆ ದಾಸೋಹ ವ್ಯವಸ್ಥೆಯ ಪರಿಶೀಲನೆ, ದರ್ಶನ, ಹೊಲಗದ್ದೆಗಳಲ್ಲಿ ನಡೆಯುತ್ತಿದ್ದ ಕೆಲಸಗಳ ವೀಕ್ಷಣೆ, ಭಕ್ತರ ಮನೆಗಳಲ್ಲಿ ಪಾದಪೂಜೆ, ಶಿವಪೂಜೆ, ಸಾರ್ವಜನಿಕ ಸಮಾರಂಭಗಳಲ್ಲಿ ಭಾಗಿ... ಹೀಗೆ ಪ್ರತಿ ಕ್ಷಣವನ್ನು ಅಮೂಲ್ಯವಾಗಿ ವ್ಯಯಿಸಿ ರಾತ್ರಿ 11ಕ್ಕೆ ವಿಶ್ರಾಂತಿಗೆ ಜಾರುತ್ತಿದ್ದರು ಸ್ವಾಮೀಜಿ.

ಈ ದಿನಚರಿ ಅವರು ಮಠದ ಉತ್ತರಾಧಿಕಾರಿಯಾದ 1930ರಿಂದ ಬಹುಶಃ 105ರ ಪ್ರಾಯ ದಾಟುವವರೆಗೂ ಅನುಸರಣೆಯಲ್ಲಿತ್ತು. ಆರೋಗ್ಯದಲ್ಲಿ ವ್ಯತ್ಯಯವಾದ ನಂತರ ಸ್ವಲ್ಪಮಟ್ಟಿಗೆ ಬದಲಾಯಿತು. ಸ್ವಾಮೀಜಿ ಅವರ ದೀರ್ಘಾಯುಷ್ಯಕ್ಕೆ ಬೇವಿನ ಕಷಾಯ ಸೇವನೆಯೂ ಕಾರಣ ಎನ್ನುವ ನಂಬಿಕೆ ಇದೆ. ನಿತ್ಯ ಸಣ್ಣ ಲೋಟದಲ್ಲಿ ಅರ್ಧದಷ್ಟು ಕಷಾಯ ಸೇವಿಸುತ್ತಿದ್ದರು.

'ಸ್ವಾಮೀಜಿ ಅವರಿಗೆ ಯಾವುದೇ ನಿರ್ದಿಷ್ಟ ಆಹಾರವೇ ಬೇಕು ಎಂದೇನೂ ಇರಲಿಲ್ಲ. ಭಕ್ತರು ಕೊಟ್ಟಿದ್ದನ್ನು ಸ್ವೀಕರಿಸುತ್ತಿದ್ದರು. ಆದರೆ ಹಳ್ಳಿ ಜನರು ಒಬ್ಬಟ್ಟು, ಸೀಕರಣೆ ಇಷ್ಟ ಎಂದು ಮಾಡುತ್ತಿದ್ದರು. ಆದರೆ ಸ್ವಾಮೀಜಿ ಒಂದು ಒಬ್ಬಟ್ಟಿನಲ್ಲಿ ಅರ್ಧ ಮಾತ್ರ ಸೇವಿಸುತ್ತಿದ್ದರು. 30 ರಿಂದ 35 ವರ್ಷ ನಿತ್ಯ ಇಡ್ಲಿ ಸೇವಿಸಿದ್ದಾರೆ. ದಿನ ರಾತ್ರಿ ಉಪ್ಪಿಟ್ಟು ಮಾತ್ರ ಸೇವಿಸುತ್ತಿದ್ದರು. ಅನಾರೋಗ್ಯದ ತರುವಾಯ ಅನ್ನ,

ಮುದ್ದೆ ಸಾಂಬಾರು ಸೇವಿಸುತ್ತಿದ್ದರು. ನಿತ್ಯ 2 ಬಾರಿ ತಿಂಡಿ, ಒಮ್ಮೆ ಊಟ, ಹಣ್ಣಿನ ರಸ ಅವರ ಆಹಾರದ ಕ್ರಮವಾಗಿತ್ತು' ಎಂದು ವಿವರಿಸುವರು ಶ್ರೀಗಳ ಸೇವೆಯಲ್ಲಿ ನಿರತರಾಗಿದ್ದ ಕಣ್ಣೂರು ಮಕ್ಕಳ ದೇವರ ಮಠದ ಮೃತ್ಯುಂಜಯ ಸ್ವಾಮೀಜಿ.

ಆಂಧ್ರಪ್ರದೇಶದ ಹಿಂದೂಪುರಕ್ಕೆ ಸ್ವಾಮೀಜಿ ಪ್ರತಿ ವರ್ಷ ಭೇಟಿ ನೀಡುತ್ತಿದ್ದರು. ಆ ಭೇಟಿಯ ಹಿಂದೆ ಆದರ್ಶ ಪ್ರಸಂಗವೊಂದಿದೆ. ಕೊಳಾಲದಲ್ಲಿ ಸಿದ್ದಪ್ಪ ಎಂಬ ಸಿರಿವಂತ ಭಕ್ತರು ಇದ್ದರು. ಅವರಿಗೆ ಮೂವರು ಮಕ್ಕಳು. ಚಿಕ್ಕ ವಯಸ್ಸಿನಲ್ಲಿಯೇ ಸಿದ್ದಪ್ಪ ತೀರಿಕೊಂಡರು. ಅವರ ಮಕ್ಕಳು ಚಿಕ್ಕ ವಯಸ್ಸಿನವರು. ಸಾಯುವ ಮುನ್ನ ಅನಾರೋಗ್ಯದಲ್ಲಿದ್ದ ಸಿದ್ದಪ್ಪ, ತಮ್ಮ ಆಸ್ತಿಯನ್ನು ಸ್ವಾಮೀಜಿ ಅವರ ಹೆಸರಿಗೆ ಬರೆದರು. ಆ ಮಕ್ಕಳು ಪ್ರಾಪ್ತ ವಯಸ್ಕರಾದ ನಂತರ ಸ್ವಾಮೀಜಿ ಆ ಆಸ್ತಿಗಳನ್ನು ಸಿದ್ದಪ್ಪ ಅವರ ಮಕ್ಕಳ ಹೆಸರಿಗೆ ಬರೆದುಕೊಟ್ಟರು. ಆ ಶ್ರೀಮಂತ ಕುಟುಂಬಗಳು ಈಗ ಹಿಂದೂಪುರದಲ್ಲಿ ವಾಸಿಸುತ್ತಿವೆ. ಅವರು ಪ್ರತಿ ವರ್ಷ ತಮ್ಮ ಮನೆಗೆ ಸ್ವಾಮೀಜಿಯನ್ನು ಕರೆದುಕೊಂಡು ಹೋಗಿ ಪಾದಪೂಜೆ ಮಾಡುತ್ತಿದ್ದರು.

**ಪ್ರಶಾಂತ ಸ್ಥಳಗಳೇ ಅಚ್ಚುಮೆಚ್ಚು :** ಮಕ್ಕಳ ಆಟ-ಕಿರುಚಾಟ, ಜನಜಂಗುಳಿಯೊಳಗೆ ಬದುಕಿದ ಶಿವಕುಮಾರ ಸ್ವಾಮೀಜಿ ಅವರಿಗೆ ಪ್ರಶಾಂತವಾದ ತಾಣಗಳು ಅಚ್ಚುಮೆಚ್ಚಾಗಿದ್ದವು. ಅವರ ಬದುಕಿನ ಹಿನ್ನೋಟದಲ್ಲಿ ಹಳೇ ಮಠದ ಅಂಗಳದ ಜತೆಗೆ ದೊಡ್ಡಬಳ್ಳಾಪುರ ತಾಲ್ಲೂಕಿನ ಪುರುಷನಹಳ್ಳಿ, ಅಲ್ಲಿರುವ ಮಠದ ತೋಟವೂ ಸಾಧನೆಗಳ ತಾಣವಾಗಿ ಗುರುತಾಗಿದೆ.

ಆಗಾಗ್ಗೆ ಆ ಗ್ರಾಮಕ್ಕೆ ಭೇಟಿ ನೀಡಿ ಭಕ್ತರಿಗೆ ಮಾರ್ಗದರ್ಶನ ನೀಡುತ್ತಿದ್ದರು. ತೋಟದ ಪ್ರಶಾಂತ ವಾತಾವರಣ ಆಹ್ಲಾದಿಸುತ್ತಿದ್ದರು. ದೊಡ್ಡಬಳ್ಳಾಪುರ ತಾಲ್ಲೂಕಿನ ಗೂಳ್ಯ, ಅಂಬಲಗೆರೆ ಹಾಗೂ ದಾಬಸ್‌ಪೇಟೆ ಬಳಿಯ ಮಾದೇನಹಳ್ಳಿ, ಕರಿಮಣ್ಣೆ, ತಟ್ಟೇಕೆರೆ, ದಾಸೇನಹಳ್ಳಿ ಗ್ರಾಮಗಳು ಸ್ವಾಮೀಜಿ ಅವರಿಗೆ ಆಪ್ತವಾದ ನೆಲಗಳಾಗಿದ್ದವು. ಎಲ್ಲ ಹಳ್ಳಿಗಳ ಭಕ್ತರ ಮನೆಗಳಿಗೆ ಶಿವಪೂಜೆ, ಪಾದಪೂಜೆಗೆ ಸ್ವಾಮೀಜಿ ಹೋದರೂ ಈ ಗ್ರಾಮಗಳ ಸಂಪರ್ಕ ಸ್ವಲ್ಪ ಹೆಚ್ಚು. ಮಾದೇನಹಳ್ಳಿಯ ಭಕ್ತರ ಮನೆಗಳಲ್ಲಿ ಪೂಜೆ ಮುಗಿಸಿ ವಾಸ್ತವ್ಯ ಹೂಡಿದರೆ ನಂತರ ದಾಸೇನಹಳ್ಳಿ, ತಟ್ಟೇಕೆರೆ....ಹೀಗೆ ಮುಂದುವರಿಯುತ್ತಿತ್ತು ಅವರ ಪ್ರವಾಸ.

ಇತ್ತೀಚಿನ ವರ್ಷಗಳಲ್ಲಿ ಅನಾರೋಗ್ಯಕ್ಕೆ ತುತ್ತಾಗಿ ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಮರಳಿ ಬಂದಾಗ ಕಾರಿನಲ್ಲಿ ಅವರು ವಾಯುಸೇವನೆಗೆ ಹೋಗುತ್ತಿದ್ದುದು ಹಸಿರು ಸಿರಿಯ ದೇವರಾಯನದುರ್ಗ ಹಾಗೂ ನಾಮದ ಚಿಲುಮೆ ಪ್ರದೇಶಗಳಿಗೆ. **(ಕೃಪೆ: ಪ್ರಜಾವಾಣಿ)**

# ಹೊರಟೇ ಬಿಟ್ಟಿತು ಜಂಗಮದ ಜೋಳಿಗೆ

**ಕೆ.ವಿ. ಸಿಬಂತಿ ಪದ್ಮನಾಭ**

**ಸಿ**ದ್ಧಗಂಗೆಯ ಪರ್ವತೋಪಮ ವ್ಯಕ್ತಿತ್ವದ ಹಿಂದಿನ ಶಕ್ತಿ ಕರ್ನಾಟಕ ರತ್ನ ಶಿವಕುಮಾರ ಸ್ವಾಮಿಜಿ ಎಂಬುದು ಸರ್ವವಿಧಿತ. ಸರಳತೆ, ಸಜ್ಜನಿಕೆ, ಮಮತೆ, ನಿಸ್ವಾರ್ಥತೆಗಳ ಸಾಕಾರಮೂರ್ತಿ ಸಿದ್ಧಗಂಗಾ ಶ್ರೀಗಳು ಸಾರಿದ ತತ್ತ್ವಗಳು ಮತ್ತು ತಮ್ಮ ಬದುಕಿನಲ್ಲಿ ಅವುಗಳನ್ನು ಆಚರಿಸಿದ ರೀತಿ ಇಡೀ ವಿಶ್ವಕ್ಕೆ ಮಾದರಿಯಾದದ್ದು. ಮತ-ಧರ್ಮಗಳ ಕುಲುಮೆಯಲ್ಲಿ ಬೇಯುತ್ತಿರುವ, ಜಾತಿ-ಪಂಗಡಗಳ ಬಿರುಕುಗಳಲ್ಲಿ ಕುಸಿಯುತ್ತಿರುವ, ಹಿಂಸೆ-ಸಂಘರ್ಷಗಳ ಬೇಗೆಯಲ್ಲಿ ನಲಗುತ್ತಿರುವ ವರ್ತಮಾನದ ಪ್ರಪಂಚಕ್ಕೆ ಇಂದು ತುರ್ತಾಗಿ ಬೇಕಿರುವುದು ಸಿದ್ಧಗಂಗಾ ಶ್ರೀಗಳ ಎಲ್ಲ ನನ್ನವರೆನ್ನುವ ಭಾವದ ಕರುಣೆ ಮತ್ತು ಮನುಷ್ಯ ತಾನೇ ಸೃಷ್ಟಿಸಿಕೊಂಡಿರುವ ಕಟ್ಟುಪಾಡುಗಳನ್ನು ಮೀರಿ ನಿಲ್ಲುವ ಮಾನವೀಯತೆ.

> ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ
> ಕಾಯಕವೇ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ
> ಕಾಯವಿಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ
> ಎಲ್ಲ ನನ್ನವರೆನ್ನುವ ಭಾವದ ಕರುಣೆಯೇ ಕಣ್ತೆರೆದಿದೆ

ಸಿದ್ಧಗಂಗಾ ಮಠದ ಹಿರಿಯ ವಿದ್ಯಾರ್ಥಿ, ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ 1972ರಲ್ಲಿ ಬರೆದ 'ಸಿದ್ಧಗಂಗೆಯ ಶ್ರೀ ಚರಣಕ್ಕೆ' ಎಂಬ ಕವಿತೆಯ ಸಾಲುಗಳಿವು. ತ್ರಿವಿಧ ದಾಸೋಹವೆಂಬ ಮೌನಕ್ರಾಂತಿಯ ಮೂಲಕವೇ ವಿಶ್ವಪ್ರಸಿದ್ಧಿ ಪಡೆದ, ಕಾಯಕವೇ ಕೈಲಾಸವೆಂಬ ಶರಣ ತತ್ತ್ವದ ಶ್ರೇಷ್ಠ ಪ್ರಯೋಗಶಾಲೆಯಾದ, ಬಹುಮುಖ್ಯವಾಗಿ ಎಲ್ಲ ನನ್ನವರೆನ್ನುವ ಭಾವದ ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಸಾರಿದ್ದ ಸಿದ್ಧಗಂಗೆಯ ಅಮೋಘ ವ್ಯಕ್ತಿತ್ವವನ್ನು ಕಟ್ಟಿಕೊಡುವಲ್ಲಿ ಕವಿವಾಣಿ ನೂರು ಪ್ರತಿಶತ ಯಶಸ್ವಿಯಾಗಿದೆ.

ಇಡೀ ಶತಮಾನದ ಏಳುಬೀಳುಗಳನ್ನು ಕಣ್ಣಾರೆ ನೋಡಿ, ಶರಣ ಚಿಂತನೆಗಳ ಚೌಕಟ್ಟಿನಲ್ಲಿ ಅವುಗಳ ಮೌಲ್ಯಮಾಪನ ನಡೆಸಿರುವ ಶ್ರೀಗಳಿಗೆ ಪ್ರಪಂಚಕ್ಕೆ ಯಾವುದು ಸನ್ಮಾರ್ಗವೆಂದು ಬೋಧಿಸುವ ಎಲ್ಲ ಅಧಿಕಾರವೂ ಇತ್ತು. ಶ್ರೀ ಉದ್ದಾನ

ಶಿವಯೋಗಿಗಳಿಂದ ತೊಡಗಿ ಬಸವಾದಿ ಶರಣರು, ಸ್ವಾಮಿ ವಿವೇಕಾನಂದರು, ಮಹರ್ಷಿ ಅರವಿಂದರು ಹಾಗೂ ಡಾ. ಎಸ್. ರಾಧಾಕೃಷ್ಣನ್ ಅವರಂತಹ ದಾರ್ಶನಿಕರಿಂದ ಅಪಾರವಾಗಿ ಪ್ರಭಾವಿಸಲ್ಪಟ್ಟ ಡಾ. ಶಿವಕುಮಾರ ಸ್ವಾಮೀಜಿಯವರು ಅವರದೇ ಹಾದಿಯಲ್ಲಿ ಮುಂದುವರಿದು ಪ್ರಪಂಚಕ್ಕೆ ಮಾದರಿಯಾಗಿರುವುದಲ್ಲದೆ ಲಕ್ಷಾಂತರ ಮಂದಿಗೆ ಋಜುಮಾರ್ಗದ ಪರಿಚಯ ಮಾಡಿಕೊಟ್ಟಿದ್ದಾರೆ.

'ನನ್ನ ಜೀವನವೇ ನನ್ನ ಸಂದೇಶ' ಎಂದಿದ್ದರು ಗಾಂಧೀಜಿ. ಬಹುಶಃ ಅಂತಹ ಮಾತನ್ನು ಇನ್ನೊಮ್ಮೆ ಹೇಳುವ ನೈತಿಕ ಸ್ಥೈರ್ಯವಿದ್ದರೆ ಅದು ಅಭಿಮಾನಿಗಳ ಮನಸ್ಸಿನಲ್ಲಿ ನಡೆದಾಡುವ ದೇವರಾಗಿ ನೆಲೆಸಿರುವ ಸಿದ್ಧಗಂಗೆಯ ಶ್ರೀಗಳಿಗೆ ಮಾತ್ರ. ಜನರಿಗೆ ಬೇಕಿರುವುದು ಹೊಟ್ಟೆ ತುಂಬುವಷ್ಟು ಅನ್ನ, ಬಿಸಿಲು-ಮಳೆಗಳಿಂದ ರಕ್ಷಿಸಿಕೊಳ್ಳುವ ಆಶ್ರಯ ಮತ್ತು ಪ್ರಪಂಚ ನೋಡಲು ಬೇಕಾಗಿರುವ ಜ್ಞಾನದ ಕಣ್ಣು. ಮಹಾದಾಸೋಹಿ ಶಿವಕುಮಾರ ಸ್ವಾಮೀಜಿ ಅವರು ಈ ಮೂರು ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಜೀವನವನ್ನು ಮೀಸಲಾಗಿರಿಸಿಟ್ಟಿದ್ದರು.

'ಬಡವರಿಗಾಗಿ ಯಾರ ಹೃದಯ ಮಿಡಿಯುತ್ತದೆಯೋ ಅವನು ಮಹಾತ್ಮ. ಇಲ್ಲವಾದರೆ ದುರಾತ್ಮ' ಎಂದಿದ್ದರು ಸ್ವಾಮಿ ವಿವೇಕಾನಂದರು. ಸಿದ್ಧಗಂಗೆಯ ಪರಂಪರೆಯನ್ನು ಮುಂದುವರಿಸುವ ಮಹಾ ಜವಾಬ್ದಾರಿಯನ್ನು ಹೊತ್ತುಕೊಂಡಲ್ಲಿಂದೀಚೆಗಿನ ಸುದೀರ್ಘ ಅವಧಿಯಲ್ಲಿ ಶ್ರೀಗಳ ಅಂತರಂಗದಲ್ಲಿ ಅನುರಣಿಸುತ್ತಿದ್ದುದು ಬಹುಶಃ ಇದೇ ಮಾತು. 'ಹಸಿದು ಬಂದವನಿಗೆ ಅನ್ನ ನೀಡುವುದು ಧರ್ಮ. ಕತ್ತಲಿನಲ್ಲಿ ತೊಳಲಾಡುತ್ತಿರುವವನಿಗೆ ಬೆಳಕು ನೀಡುವುದು ಧರ್ಮ. ಶ್ರೀಗಳು ಧರ್ಮಕ್ಕೆ ನೀಡಿರುವ ವ್ಯಾಖ್ಯಾನ ಎಷ್ಟೊಂದು ಅದ್ಭುತವಾಗಿದೆ. 1966ರಲ್ಲಿ ತುಮಕೂರಿನಲ್ಲಿ ಭೀಕರ ಬರವಿದ್ದಾಗಲೂ ಜನರು ಉಪವಾಸ ಬೀಳದಂತೆ ಮಾಡಿದ್ದು ಸ್ವಾಮೀಜಿಯವರ ಇದೇ ಕರುಣೆಯ ಕಣ್ಣು.

ಭಿಕ್ಷೆ ಹೊರಟಿದೆ ಜಂಗಮದ ಜೋಳಿಗೆ
ಲಕ್ಷ ಜನಗಳ ಪೊರೆದಿದೆ ತೀರ್ಥವಾಗಿದೆ ಭಕ್ತರಿಗೆ
ಚಿರಸ್ಫೂರ್ತಿಯಾಗಿದೆ ಬುದ್ಧಿಗೆ
ಬಂದ ಹಣತೆಗೆ ಎಣ್ಣೆ ಬತ್ತಿಯ
ದೀಪ್ತಿದಾನವ ಮಾಡಿದೆ
ರಕ್ಷೆಯಾಗಿದೆ ಮುಗಿಲನೇರಿದ
ಎಷ್ಟೊ ರೆಕ್ಕೆಯ ಹಾದಿಗೆ

ಕವಿ ಜಿಎಸ್ಎಸ್ ಅವರ ಸಾಲುಗಳು ಎಷ್ಟೊಂದು ಮಾರ್ಮಿಕವಾಗಿದೆ. ಬಹುಶಃ ಈ ಜಂಗಮದ ಜೋಳಿಗೆ ಪೊರೆದಿರುವ ಹೊಟ್ಟೆ-ಹೃದಯಗಳ ಲೆಕ್ಕವಿಡುವುದು ಕಷ್ಟ.

ಇಂದಿಗೂ ಮಠದಲ್ಲಿ ಪ್ರತಿದಿನ ಹತ್ತುಸಾವಿರ ಮಂದಿಗೆ ಪ್ರಸಾದ ವಿನಿಯೋಗವಾಗುತ್ತದೆ ಎಂದರೆ ಅದೊಂದು ತಪಸ್ಸಿಗೆ ಸಮಾನವಾದ ಕೆಲಸ.

'ಒಂದು ತುತ್ತು ಅನ್ನದ ಹಿಂದೆ ಸಾವಿರಾರು ಮಂದಿಯ ಶ್ರಮದ ಶಕ್ತಿಯ ಸಾಗರವೇ ನಿಂತಿದೆ. ಅದನ್ನು ಅರಿತಾಗಲೇ ಮನುಷ್ಯ ಮನುಷ್ಯನಾಗುವುದು' ಎಂಬ ಶ್ರೀಗಳ ಮಾತು ಮಠದ ವಿದ್ಯಾರ್ಥಿನಿಲಯಗಳಲ್ಲಿ ಆಶ್ರಯ ಪಡೆದಿರುವ, ಅದರ ನೇತೃತ್ವದಲ್ಲಿ ಕಾರ್ಯಾಚರಿಸುತ್ತಿರುವ ಶಿಕ್ಷಣ ಸಂಸ್ಥೆಗಳಿಂದ ಹೊರಬರುವ ಲಕ್ಷ ವಿದ್ಯಾರ್ಥಿಗಳ ಮನದಾಳಕ್ಕೆ ಇಳಿದರೆ ಅದಕ್ಕಿಂತ ದೊಡ್ಡ ಸಾಧನೆ ಇನ್ನೊಂದಿಲ್ಲ. ಶ್ರಮದ ಬಗ್ಗೆ ಗೌರವ, ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗೆಗೂ ಅದರ ಇವೆರಡನ್ನೂ ಹೊಂದಿರುವ ವ್ಯಕ್ತಿಗಳು ಮಾತ್ರ ಆರೋಗ್ಯವಂತ ಸಮಾಜ ನಿರ್ಮಿಸಬಲ್ಲರು. ಇವರಲ್ಲವೇ ನಿಜವಾದ ಕಾಯಕ ಯೋಗಿಗಳು? ಇಷ್ಟೆಲ್ಲ ಸಾಧನೆಗಳ ನಡುವೆಯೂ ಸಿದ್ಧಗಂಗೆಯ ಮುಕುಟಮಣಿ ಡಾ. ಶಿವಕುಮಾರ ಸ್ವಾಮೀಜಿ ಅವರು ಹೇಳುತ್ತಿದ್ದ ಮಾತು ನಮ್ಮನ್ನು ವಿಸ್ಮಿತರಾಗಿಸಬಲ್ಲದು. 'ನಾವು ಮಾಡಿರುವ ಸಾಧನೆ ಅತ್ಯಂತ ಕಿರಿದು. ಮಾಡಬೇಕಾದುದು ಅತ್ಯಂತ ಹಿರಿದು. ಇದರ ಅರಿವೇ ಬದುಕು'. ಜಗುಲಿ ಹಾರದವರೇ ಗಗನ ಹಾರಿದೆವೆಂದು ಕೊಬ್ಬುವುದೇ ಸರ್ವೇಸಾಮಾನ್ಯವಾಗಿರುವ ಇಂದಿನ ದಿನಗಳಲ್ಲಿ ಲೋಕೋಪಕಾರದಲ್ಲೇ ಶತಸಂತವಸರ ಕಳೆದ ಹಿರಿಯ ಜೀವವೊಂದು ನಾವು ಮಾಡಬೇಕಾದುದು ಅತ್ಯಂತ ಹಿರಿದು ಎನ್ನುವುದು ಎಂತಹ ಉನ್ನತ ಭಾವ. ಇದೇ ಅಲ್ಲವೇ ಎನಗಿಂತ ಕಿರಿಯರಿಲ್ಲ ಎಂಬ ಬಸವತತ್ತ್ವದ ಸಾರ?' **(ಕೃಪೆ: ವಿಜಯವಾಣಿ)**

---

ರಾಗ-ದ್ವೇಷಗಳಿಲ್ಲದೆ ಸರ್ವರನ್ನೂ ಪ್ರೀತಿ-ವಾತ್ಸಲ್ಯದಿಂದ ಕಾಣುತ್ತಿದ್ದ ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳ ಅಗಲಿಕೆ ಧಾರ್ಮಿಕ ಪ್ರಪಂಚಕ್ಕೆ ಆದ ದೊಡ್ಡ ನಷ್ಟ. ಲಕ್ಷಾಂತರ ವಿದ್ಯಾರ್ಥಿಗಳ ಬಾಳಿಗೆ ಬೆಳಕು ನೀಡಿದ ಆದರ್ಶ ವ್ಯಕ್ತಿತ್ವ ಸ್ವಾಮೀಜಿಯವರದ್ದಾಗಿತ್ತು. ಇನ್ನಷ್ಟು ವರ್ಷ ಅವರ ಮಾರ್ಗದರ್ಶನ ಈ ಸಮಾಜಕ್ಕೆ ಅಗತ್ಯವಿತ್ತಾದರೂ ಭಗವಂತನ ಕರೆಗೆ ಭಕ್ತರನ್ನು ಅಗಲಿ ಹೋಗಿದ್ದಾರೆ. ಅವರ ಪವಿತ್ರಾತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ.

**ಜಗದ್ಗುರು ಶ್ರೀ ವೀರಸೋಮೇಶ್ವರ ಮಹಾಸ್ವಾಮಿಗಳು**
ರಂಭಾಪುರಿ ಶ್ರೀಕ್ಷೇತ್ರ, ಬಾಳೆಹೊನ್ನೂರು

# ಬಸವಣ್ಣ ಹೇಗಿದ್ದರು ಅಂದರೆ ಶ್ರೀಗಳನ್ನು ತೋರಿಸಬಹುದು

ನ್ಯಾ. ಡಾ. ಶಿವರಾಜ್ ಪಾಟೀಲ್

ತ್ರಿವಿಧ ದಾಸೋಹಿ, ನಡೆದಾಡುವ ದೇವರು ಸಿದ್ಧಗಂಗಾ ಮಠದ ಪೀಠಾಧಿಪತಿ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಶತಮಾನೋತ್ಸವ ಕಾರ್ಯಕ್ರಮದ ಸಮಿತಿಯ ಗೌರವಾಧ್ಯಕ್ಷ ಆಗುವ ಅವಕಾಶ ಸಿಕ್ಕಿದ್ದೇ ನನ್ನ ಪುಣ್ಯ. ಅನ್ನ, ಅಕ್ಷರ, ಆಶ್ರಯ ಒಂದು ಪರಿಕಲ್ಪನೆಯಾದರೆ, ನನ್ನ ವೈಯಕ್ತಿಕ ಪರಿಕಲ್ಪನೆಯಲ್ಲಿ ಸಿದ್ಧಗಂಗಾ ಶ್ರೀಗಳ ಕಾಯಕವು ಅನ್ನ, ಅಕ್ಷರ, ಆಧ್ಯಾತ್ಮ ಆಗಿದೆ. ಈ ಕಾಯಕವು ತ್ರಿವೇಣಿ ಸಂಗಮ ಇದ್ದಂತೆ. ಜಾತಿ ಭೇದ ಭಾವ ಮಾಡದೆ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಶತಾಯುಷಿ ಅವರು.

ನನ್ನ ವಕೀಲ ವೃತ್ತಿ ಕಲಬುರಗಿಯಲ್ಲಿ ಆರಂಭಗೊಂಡು ನಂತರ 1979 ರಲ್ಲಿ ಹೈಕೋರ್ಟ್‌ನಲ್ಲಿ ವೃತ್ತಿ ನಡೆಸಲು ಬೆಂಗಳೂರಿಗೆ ಬಂದೆ. ಆಗ ಶ್ರೀಗಳ ದರ್ಶನ ದೂರದಿಂದಲೇ ಆಗುತ್ತಿತ್ತು. ನ್ಯಾಯಾಧೀಶರಾದ ಬಳಿಕ ಕುಟುಂಬ ಸಮೇತರಾಗಿ ಸಿದ್ಧಗಂಗಾ ಮಠಕ್ಕೆ ತೆರಳಿ ಶ್ರೀಗಳ ಆಶೀರ್ವಾದ ಪಡೆದುಕೊಳ್ಳಲಾಯಿತು. ಅದೇ ಮೊದಲಿಗೆ ಅವರನ್ನು ನೇರವಾಗಿ ಕಂಡು ದರ್ಶನ ಪಡೆದಿದ್ದು, ಆ ಘಟನೆಯು ಇಂದಿಗೂ ನನ್ನ ಕಣ್ಣ ಮುಂದಿದೆ. ಅವರು ನನಗೆ ನೀಡಿದ ಹಿತವಚನಗಳೇ ನನ್ನ ಸಮಾಜಸೇವಾ ಕಾರ್ಯಕ್ಕೆ ಸ್ಫೂರ್ತಿ.

ಆಗಾಗ್ಗೆ ಶ್ರೀಗಳ ಭೇಟಿ ನಡೆಯುತ್ತಿತ್ತು. ಆದರೆ, ಅವರ ಶತಮಾನೋತ್ಸವ ಸಮಾರಂಭವು 2009ರಲ್ಲಿ ಜರುಗಿತು. ಅದರ ಸಮಿತಿಯ ಗೌರವಾಧ್ಯಕ್ಷರಾಗುವ ಅವಕಾಶ ಲಭಿಸಿತು. ನನ್ನ ಜೀವನದಲ್ಲಿ ಸಿಕ್ಕ ಸೌಭಾಗ್ಯ ಅದು. ನನಗೆ ಸಿಕ್ಕ ಪುಣ್ಯ ಅದು ಎಂದು ನಾನು ಭಾವಿಸಿದ್ದೇನೆ. ಶತಾಯುಷಿ ಸಿದ್ಧಗಂಗಾ ಶ್ರೀಗಳು ನಡೆದಾಡುವ ದೇವಮಾನವ, ಅಭಿನವ ಬಸವಣ್ಣ, ಜಾತಿ-ಪಂಥಗಳ ಎಲ್ಲೆಗಳನ್ನು ಮೀರಿ ಅತ್ಯಂತ ಎತ್ತರಕ್ಕೇರಿದ ಮೌಂಟ್ ಎವರೆಸ್ಟ್ ಮತ್ತು ಮಾನವ ಸೇವೆಗೆ ಸದಾ ಹರಿಯುವ ಸಿದ್ಧಗಂಗೆಯಂತೆ ಇದ್ದವರು.

ಬಸವಣ್ಣನವರ ಕಾಯಕ ದಾಸೋಹ ತತ್ತ್ವವನ್ನು ಅಕ್ಷರಶಃ ಅನುಷ್ಠಾನಕ್ಕೆ ತಂದವರು ಸ್ವಾಮಿಗಳು. ಸಮಾಜದಲ್ಲಿ ತಾರತಮ್ಯ ಸಲ್ಲದು. ಜಾತಿಯಿಂದ

ಮನುಷ್ಯರನ್ನು ಅಳೆಯಬಾರದು ಎಂದು ಬಸವಣ್ಣ ಹೇಳಿದರು. ಬಸವಣ್ಣ ಹೇಗಿದ್ದರು ಎಂದು ಕೇಳಿದರೆ ಸಿದ್ಧಗಂಗಾ ಶ್ರೀಗಳನ್ನು ತೋರಿಸಿ, ಇದೇ ರೀತಿ ಇದ್ದರು, ಇದೇ ರೀತಿ ಕೆಲಸ ಮಾಡುತ್ತಿದ್ದರು ಎಂದು ಹೇಳುವಷ್ಟರಮಟ್ಟಿಗೆ ಶ್ರೀಗಳು ಕಾಯಕಯೋಗಿಯಾಗಿದ್ದರು. ಎಲ್ಲಾ ಜಾತಿ ಮತಗಳನ್ನು ಸಮಾನವಾಗಿ ನೋಡುವ ವಿಶ್ವದೃಷ್ಟಿ ಅವರದ್ದಾಗಿತ್ತು. ಇಂತಹ ಸಮಾನಭಾವದ, ನಿಸ್ವಾರ್ಥ ಕೆಲಸ ಕಾರ್ಯಗಳಿಂದಾಗಿಯೇ ಅವರು ಎಲ್ಲರ ಹೃದಯದಲ್ಲಿ ಅಮರರಾಗಿ ಉಳಿಯುತ್ತಾರೆ.

ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯ ಅವಕಾಶ ನೀಡಿದ ಮಹಾನ್ ವ್ಯಕ್ತಿ. ಸಿದ್ಧಗಂಗಾ ಮಠದಲ್ಲಿ ಶಿಕ್ಷಣ ಪಡೆದವರು ಸಮಾಜದಲ್ಲಿ ದೊಡ್ಡ ಉದ್ಯೋಗಗಳನ್ನು ಅಲಂಕರಿಸಿದ್ದಾರೆ. ದೇಶ-ವಿದೇಶದಲ್ಲಿ ಭವಿಷ್ಯ ಕಂಡುಕೊಂಡಿದ್ದಾರೆ. ಶ್ರೀಗಳು ಲಿಂಗೈಕ್ಯರಾಗುವ ಮೊದಲು ಸಹ ತಮ್ಮ ಮಠದ ಮಕ್ಕಳ ಬಗ್ಗೆ ಚಿಂತನೆ ನಡೆಸಿದ್ದರು. ಮಕ್ಕಳು ಪ್ರಸಾದ ತೆಗೆದುಕೊಂಡ ಬಳಿಕ ಲಿಂಗೈಕ್ಯ ವಿಚಾರ ತಿಳಿಸುವಂತೆ ಹೇಳಿರುವುದನ್ನು ಗಮನಿಸಿದರೆ ಅವರ ಮಾತೃಹೃದಯ ಎಂತಹದ್ದು ಎಂಬುದನ್ನು ತಿಳಿದುಕೊಳ್ಳಬಹುದು. ಮಠದಲ್ಲಿ ಶಿಕ್ಷಣ ಒಳ್ಳೆಯ ಸಂಸ್ಕೃತಿ, ಸಂಸ್ಕಾರದಿಂದ ಹೊರಬರುವ ವಾತಾವರಣ ಇದೆ. ಇದು ಸಮಾಜಕ್ಕೆ ಮಾದರಿಯಾಗಿದ್ದು, ಇಂತಹ ಶಿಕ್ಷಣ ಇಂದಿನ ವಿದ್ಯಾರ್ಥಿಗಳಿಗೆ ಅಗತ್ಯ ಇದೆ.

ಶ್ರೀಗಳು ಎಂದಿಗೂ ತಮಗಾಗಿ ಬದುಕಿದವರು ಅಲ್ಲ. ಅವರು ತಮ್ಮ ಕೊನೆ ಉಸಿರು ಇರುವವರೆಗೂ ಮತ್ತೊಬ್ಬರಿಗಾಗಿ ಬದುಕಿದ್ದರು. ಸದಾ ಸಮಾಜದ ಏಳ್ಗೆಯನ್ನೇ ಬಯಸಿದವರು. ಅವರು ಲಿಂಗೈಕ್ಯರಾದ ವೇಳೆ ನೋಡಿದ ಜನಸಾಗರವೇ ಅವರ ಬದುಕು ಎಂತಹದ್ದು ಎಂಬುದಕ್ಕೆ ಸಾಕ್ಷಿಯಾಗಿದೆ. ಅವರ ಆದರ್ಶಗಳು ನನ್ನ ಮೇಲೆ ತುಂಬಾ ಪ್ರಭಾವ ಬೀರಿವೆ. ಮತ್ತೊಬ್ಬರಿಗೆ ಸಹಾಯಹಸ್ತ ಚಾಚುವ ಮನೋಭಾವ ಬಂದಿದ್ದು ಸಹ ಶ್ರೀಗಳೊಂದಿಗಿನ ಒಡನಾಟದಿಂದ. ಈಗಲೂ ನಾನು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಅವರ ಆದರ್ಶಗಳನ್ನು ಮುಂದಿಟ್ಟುಕೊಂಡು ನನ್ನ ಕೈಯಲ್ಲಾಗುವಷ್ಟು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಸಮಾಜ ಇರುವವರೆಗೂ ಶ್ರೀಗಳು ಅಜರಾಮರ. **(ಕೃಪೆ: ಕನ್ನಡಪ್ರಭ)**

# ಪವಾಡಸದೃಶ ವ್ಯಕ್ತಿತ್ವದ ಸಿದ್ಧಗಂಗಾ ಶ್ರೀ

**ಜಿ.ಎಸ್. ಜಯದೇವ**
ದೀನಬಂಧು ಸಂಸ್ಥೆ, ಚಾಮರಾಜನಗರ

ಅಲೌಕಿಕ ಪವಾಡಗಳಲ್ಲಿ ಮಿಥ್ಯೆ ಇರುತ್ತದೆ. ನಿಜವಾದ ಪವಾಡ ಪವಿತ್ರ ಉದ್ದೇಶ ಹೊಂದಿರುತ್ತದೆ. ಧರ್ಮ ಯಾವುದೆಂದರೆ ಇನ್ನೊಬ್ಬರಿಗೆ ಒಳ್ಳೆಯದು ಮಾಡುವುದು, ಈ ಎರಡೂ ಮಹತ್ವಪೂರ್ಣ ಕಾರ್ಯಗಳನ್ನು ಬದುಕಿನುದ್ದಕ್ಕೂ ಮುನ್ನಡೆಸಿದವರು ಸಿದ್ಧಗಂಗೆಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿ.

ಪವಿತ್ರ ಉದ್ದೇಶದ ಮೂಲಕ ಸಂಕಲ್ಪಗಳನ್ನು ರೂಢಿಸಿಕೊಂಡು ಅನುಷ್ಠಾನ ಮಾಡಿದಾಗ ಸಾರ್ವತ್ರಿಕವಾಗಿ ಅದ್ಭುತವಾದ ಒಳಿತು ಮಾಡುವ ಕ್ರಿಯೆಗೆ ಕಾರಣವಾಗುತ್ತದೆ. ಒಂದು ಶತಮಾನ ಈ ಕೆಲಸವನ್ನು ಶ್ರೀಗಳು ಮಾಡಿದ್ದಾರೆ. ಪಾವಿತ್ರ್ಯತೆಯ ಕಾರಣದಿಂದ ಸಕಲ ಪಡಿಪಾಡುಗಳು ಮಠಕ್ಕೆ ಬಂದು ಬೀಳುತ್ತಿದ್ದುದೇ ಒಂದು ರೀತಿಯ ಪವಾಡ. ನೂರು ವರ್ಷಗಳ ಕಾಲ ಇತರರಿಗೆ ಒಳಿತು ಮಾಡೋ ಕೆಲಸ ಶ್ರೀಗಳ ಮುಂದಾಳತ್ವದಲ್ಲಿ ನಡೆದಿದೆ. ಇನ್ನೊಬ್ಬರಿಗೆ ಒಳ್ಳೆಯದು ಮಾಡುವುದೇ ಧರ್ಮವೆಂದು ಅರಿತು ಆ ಕಾರ್ಯವನ್ನು ನಿರಂತರವಾಗಿ ನಡೆಸಿದ ಶ್ರೀಗಳದ್ದು ನಿಜವಾದ ಪವಾಡಸದೃಶ ವ್ಯಕ್ತಿತ್ವ.

ನಮ್ಮ ತಂದೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರು ನಾವು ಚಿಕ್ಕವರಾಗಿದ್ದಾಗ ಸಿದ್ಧಗಂಗಾ ಮಠಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಮಠಕ್ಕೆ ಬರುತ್ತಿದ್ದವರಿಗೆ ಆಶೀರ್ವಾದ ಮಾಡುತ್ತಿದ್ದನ್ನು ಹತ್ತಿರದಿಂದ ನೋಡಿದ್ದೇನೆ. ಆಗ ತಂದೆಯವರು ಅಲ್ಲಿನ ಕಟ್ಟಡಗಳನ್ನು ತೋರಿಸುತ್ತ ಶ್ರೀ ಸಿದ್ಧಗಂಗಾ ಸ್ವಾಮೀಜಿ ಅವರು ಇಟ್ಟಿಗೆ, ಕಲ್ಲು ಹೊತ್ತು ತಂದು ಕಟ್ಟಡ ನಿರ್ಮಾಣ ಮಾಡಿದ್ದಾರೆ ಎಂದು ಹೆಮ್ಮೆಯಿಂದ ಹೇಳಿದ್ದು ನೆನಪಿಗೆ ಬರುತ್ತಿದೆ. ನಮ್ಮ ತಂದೆಗೆ ರಾಷ್ಟ್ರಕವಿ ಪ್ರಶಸ್ತಿ ಬಂದಾಗ ಮೊದಲು ಸಿದ್ಧಗಂಗಾ ಶ್ರೀಗಳ ಕಂಡು ಆಶೀರ್ವಾದ ಪಡೆದಿದ್ದರು. ಸಿದ್ಧಗಂಗಾ ಶ್ರೀಗಳೆಂದರೆ ಅವರಿಗೆ ತುಂಬ ಗೌರವ.

ಚಾಮರಾಜನಗರದಲ್ಲಿ ದೀನಬಂಧು ಸಂಸ್ಥೆ ಪ್ರಾರಂಭಿಸಿರುವುದಕ್ಕೆ ಸಿದ್ಧಗಂಗೆಯ ಹಿರಿಯ ವಿದ್ಯಾರ್ಥಿ ಸಂಘದವರು ನನ್ನನ್ನು ಸನ್ಮಾನಿಸಿ ಶ್ರೀಗಳ ಪಕ್ಕದಲ್ಲಿ ಕೂರಿಸಿದ್ದರು. ಅನೇಕ ಬಾರಿ ಅವರ ಭಾಷಣಗಳನ್ನು ಕೇಳುವ ಅವಕಾಶ ಲಭಿಸಿದೆ. ಆಗೆಲ್ಲ ಅವರು ಒಂದೇ ವಿಷಯಕ್ಕೆ ಒತ್ತು ನೀಡುತ್ತಿದ್ದರು. ಅದೇನೆಂದರೆ 'ವಿಜ್ಞಾನ-ತಂತ್ರಜ್ಞಾನ ಸುಖ ಕೊಡಬಹುದು. ನಿಜವಾದ ಸಂತೋಷ ಅದರಿಂದ ದಕ್ಕುವುದಿಲ್ಲ. ಆಧ್ಯಾತ್ಮಿಕ ಅನುಭೂತಿ ಸಿಗುವುದಿಲ್ಲ. ವಿಜ್ಞಾನ-ತಂತ್ರಜ್ಞಾನವನ್ನು ವಿವೇಕಯುತವಾಗಿ ಬಳಸಬೇಕು. ಇಲ್ಲದಿದ್ದರೆ ಅದು ನಮ್ಮ ಸರ್ವನಾಶಕ್ಕೆ ಕಾರಣವಾಗುತ್ತದೆ' ಎನ್ನುತ್ತಿದ್ದರು.

# ಗದ್ದುಗೆಯೇರಿದ ಸದ್ದುಗದ್ದಲವಿರದ ಸಾಧನೆ

**ಪ್ರೊ. ಮೊರಬದ ಮಲ್ಲಿಕಾರ್ಜುನ**

2019 ಜನವರಿ 21, ಶಾಲಿವಾಹನ ಶಕೆ 1940, ಶ್ರೀ ವಿಳಂಬಿನಾಮ ಸಂವತ್ಸರ ಪುಷ್ಯ ಶುಕ್ಲ ಪೌರ್ಣಮಿ ಸೋಮವಾರ ಬನದ ಹುಣ್ಣಿಮೆಯ ದಿನ ಬೆಳಗ್ಗೆ 11.44ಕ್ಕೆ ಸಿದ್ಧಗಂಗೆಯ ಸಿದ್ಧಿಪುರುಷ ಪದ್ಮಭೂಷಣ ಕರ್ನಾಟಕರತ್ನ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು 111 ವರ್ಷಗಳ ಸಾರ್ಥಕ ಬದುಕನ್ನು ಪೂರೈಸಿ ಲಿಂಗೈಕ್ಯರಾದರು. ನಾಡಿನ ಎಲ್ಲ ಸಮೂಹ ಮಾಧ್ಯಮಗಳು ಈ ವಿಷಯವನ್ನು ಬಿತ್ತರಿಸಿದವು. ಪೂಜ್ಯ ಶ್ರೀಗಳವರ ಭಕ್ತರು, ಅಭಿಮಾನಿಗಳು ಕೇಳಿ ದಿಗ್ಭ್ರಾಂತರಾದರು. ಲಕ್ಷಾಂತರ ಸಂಖ್ಯೆಯಲ್ಲಿ ಜನ ಪೂಜ್ಯರ ಅಂತಿಮ ದರ್ಶನಕ್ಕಾಗಿ ಸಿದ್ಧಗಂಗೆಗೆ ಧಾವಿಸಿದರು. ವಿದ್ಯುನ್ಮಾನ ಮಾಧ್ಯಮಗಳು ಪೂಜ್ಯರ ಅಂತಿಮ ದರ್ಶನದ ದೃಶ್ಯಗಳನ್ನು ನಿರಂತರವಾಗಿ ಪಸರಿಸಿದವು. ಅಲ್ಲಿಗೆ ಹೋಗಲಾಗದ ಜನಸಮುದಾಯಕ್ಕೆ ಇಲ್ಲಿಂದಲೇ ದರ್ಶನದ ಭಾಗ್ಯವನ್ನು ಒದಗಿಸಿದವು.

ಪೂಜ್ಯರು ಲಿಂಗೈಕ್ಯರಾದ ಕ್ಷಣದಿಂದ ಮೊದಲುಗೊಂಡು ಮಾರನೆಯ ದಿನ ಮಂಗಳವಾರ ರಾತ್ರಿ ಕ್ರಿಯಾಸಮಾಧಿ ನೆರವೇರುವವರೆಗೂ ಎಲ್ಲ ದೃಶ್ಯಮಾಧ್ಯಮ ವಾಹಿನಿಗಳಲ್ಲೂ ಪೂಜ್ಯರ ಅಂತಿಮ ದರ್ಶನದ ದೃಶ್ಯಗಳು ನಿರಂತರವಾಗಿ ಪ್ರಸಾರ ವಾದವು. 111 ವರ್ಷಗಳ ಅಂತಃಕರಣವೇ ಮೂರ್ತಿಗೊಂಡು ಸಮಾಧಿಸ್ಥರಾದಂತೆ, ಪಕ್ವಗೊಂಡ ದೇಹದ ನಿಷ್ಪತ್ತಿಯೆಂಬ ಹಣ್ಣಿನಂತೆ, ಮಾತು ಮನಂಗಳಿಂದತ್ತತ್ತ ಮೀರಿದ ಸಾತಿಶಯದ ನಿರುಪಾಧಿಕ ನಿರ್ಮಲ ಪರಂಜ್ಯೋತಿಯಂತೆ ಪೂಜ್ಯರು ಕಂಗೊಳಿಸುತ್ತಿದ್ದರು. ಗಣ್ಯರು, ಜನಸಾಮಾನ್ಯರು ಸಾಗರದೋಪಾದಿಯಲ್ಲಿ ಹರಿದುಬರುತ್ತಿರುವ ದೃಶ್ಯ ಪ್ರತಿಕ್ಷಣವೂ ಗೋಚರವಾಗುತ್ತಿತ್ತು. ಪೂಜ್ಯರ ಜೀವಿತಾವಧಿಯ ಸಾಧನೆ ಸಿದ್ಧಿಗಳ ವಿವರ ಬಿತ್ತರವಾಗುತ್ತಿತ್ತು. ಇವುಗಳ ನಡುವೆ ಆಗಾಗ '**ಹರನ ಕರುಣೋದಯದ ತೆರದಲಿ ಬೆಳಗು ತೆರೆಯುವ ಹೊತ್ತಿಗೆ**' ಎನ್ನುವ ಹಾಡು ಮತ್ತೆ ಮತ್ತೆ ಅನುರಣನಗೊಳ್ಳುತ್ತಿತ್ತು.

---

**ಪ್ರೊ. ಮೊರಬದ ಮಲ್ಲಿಕಾರ್ಜುನ,** 3/1288, ಸಚ್ಚಿದಾನಂದ, ಒಂದನೇ ಮುಖ್ಯರಸ್ತೆ, ವಿಜಯನಗರ ನಾಲ್ಕನೇ ಹಂತ, ಒಂದನೇ ಘಟ್ಟ, ಮೈಸೂರು 570 030

ಈ ಹಾಡು ನನ್ನ ವಿದ್ಯಾಗುರುಗಳಾದ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಬರೆದದ್ದು. ಅವರು 1943 ರಿಂದ 1946 ರವರೆಗೆ ತುಮಕೂರಿನಲ್ಲಿ ಇಂಟರ್ ಮೀಡಿಯೇಟ್ ಪದವಿ ವ್ಯಾಸಂಗ ಮಾಡುವಾಗ ಸಿದ್ಧಗಂಗಾ ಮಠ ಅವರಿಗೆ ಆಶ್ರಯ ನೀಡಿತ್ತು. ಆ ಸಂದರ್ಭದಲ್ಲಿ ಗುರುಗಳಾದ ಶಿವರುದ್ರಪ್ಪನವರು ಸಿದ್ಧಗಂಗೆಯ ಶ್ರೀಗಳನ್ನು ತುಂಬ ಹತ್ತಿರದಿಂದ ಕಂಡಿದ್ದಾರೆ. ಅವರ ಸಾಧನೆಯ ಆಳ - ಅಗಲ, ಎತ್ತರ - ಬಿತ್ತರಗಳನ್ನು ಸೂಕ್ಷ್ಮವಾಗಿ ಮನಗಂಡಿದ್ದಾರೆ. ಆ ಕಾಣ್ಕೆಯ ಮಹತ್ತನ್ನು **'ಸಿದ್ಧಗಂಗೆಯ ಶ್ರೀ ಚರಣಕ್ಕೆ'** ಎಂಬ ಕವನದಲ್ಲಿ ಕಂಡರಿಸಿದ್ದಾರೆ.

ಐದು ಪದ್ಯಗಳನ್ನು ಒಳಗೊಂಡ ಈ ಕವನ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಅನುದಿನದ ಕಾರ್ಯಚಟುವಟಿಕೆಗಳನ್ನು ಮೊದಲುಗೊಂಡು ಇಡೀ ಜೀವಿತಾವಧಿಯ ಎಲ್ಲ ಸಾಧನೆಗಳನ್ನು ಚಿತ್ರವತ್ತಾಗಿ ಕಟ್ಟಿಕೊಟ್ಟಿದೆ. ಕೊನೆಯ ಪದ್ಯದಲ್ಲಿ ಬರುವ, **'ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ'** ಎನ್ನುವ ಸಾಲು ಈ ಕ್ಷಣದ ಸತ್ಯವಾಗಿ ಬಿಂಬಿತವಾಗುತ್ತಿದೆ. ಒಂದು ಶ್ರೇಷ್ಠ ಕೃತಿ ಹೇಗೆ ಕಾಲಾತೀತವಾಗಿ ನಿಲ್ಲಬಲ್ಲುದು ಎಂಬುದಕ್ಕೆ ಈ ಕವನ ಸಾಕ್ಷಿಯಾಗಿದೆ. ಈ ಮಾತು ಪೂಜ್ಯರ ಸಾಧನೆ ಮತ್ತು ಕವಿಕೃತಿ ಎರಡಕ್ಕೂ ಅನ್ವಯವಾಗುತ್ತದೆ.

ಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ಜೀವಿತಾವಧಿಯಲ್ಲಿ ಕಾಲವನ್ನು ತುಂಬಾ ಎಚ್ಚರಿಕೆಯಿಂದ ಬಳಸಿಕೊಂಡರು. ದಿನದ 24 ಗಂಟೆಗಳಲ್ಲಿ ಪೂಜ್ಯರು ಮಲಗಿ ವಿಶ್ರಮಿಸುತ್ತಿದ್ದುದು ಕೇವಲ 3 ಗಂಟೆ ಮಾತ್ರ, ಉಳಿದ 21 ಗಂಟೆ ಅಧ್ಯಯನ, ಅಧ್ಯಾಪನ, ಜ್ಞಾನಬೋಧನ, ಕಾಯಕ, ದಾಸೋಹ, ಇಷ್ಟಲಿಂಗ ಪೂಜೆಗಳಿಗೆ ಮೀಸಲಾಗಿತ್ತು. ಅವರು ಪ್ರತಿದಿನ ಏಳುತ್ತಿದ್ದುದು ಬೆಳಗಿಗೂ ಮುಂಚಿನ, ನಾವೆಲ್ಲ ಮಧ್ಯರಾತ್ರಿ ಎನ್ನುವ, 2.00 ಗಂಟೆಗೆ. ಜಗವೆಲ್ಲ ಗಾಢ ನಿದ್ರೆಯಲ್ಲಿರುವಾಗ ಪೂಜ್ಯರು ಏಳುತ್ತಿದ್ದರು. ಸ್ನಾನ, ಲಿಂಗಪೂಜೆ, ಪ್ರಸಾದ, ತತ್ವಪಠಣವನ್ನು ಪೂರೈಸಿ, ನಸುಕಿನ 5.30ಕ್ಕೆ ಇನ್ನೂ ಮಲಗಿರುವ ವಿದ್ಯಾರ್ಥಿಗಳನ್ನು ಎಚ್ಚರಿಸುತ್ತಾ ಸಾಮೂಹಿಕ ಪ್ರಾರ್ಥನೆಯ ತಾಣಕ್ಕೆ ಆಗಮಿಸುತ್ತಿದ್ದರು. ಇದೇ ಸಂದರ್ಭದೊಂದಿಗೆ ಶಿವರುದ್ರಪ್ಪನವರ ಕವನ ಆರಂಭವಾಗುತ್ತದೆ. ಸಿದ್ಧಗಂಗೆಯಲ್ಲಿರುವ ವಿದ್ಯಾರ್ಥಿಗಳ ಪ್ರತಿದಿನದ ಬೆಳಗು ಪೂಜ್ಯರ ರೂಪದಲ್ಲಿ ಶಿವನ ಕರುಣೆಯೆ ಮೈವೆತ್ತಂತೆ ಮೂಡುತ್ತಿತ್ತು. ಆ ಶಿವಕಾರುಣ್ಯಕ್ಕೆ ಹಿನ್ನೆಲೆಯೆಂಬಂತೆ ವೇದಘೋಷದ ಲಹರಿ ಮನದ ಜಡತ್ವವನ್ನು ನಿಧಾನವಾಗಿ ತೊಳೆಯುತ್ತಿತ್ತು. ಇದುವರೆಗೆ ಆವರಿಸಿದ್ದ ಮೌನಕ್ಕೆ ಶ್ರೀಗುರುವಿನ ಪಾದುಕೆಯ ಧ್ವನಿಯ ಅನುರಣನ ಚಲನಶೀಲತೆಯನ್ನು ತಂದುಕೊಡು ತ್ತಿತ್ತು. ಸಹಜವಾಗಿಯೆ ಗುರುವು ಅನುಗ್ರಹಿಸುವ ಎಚ್ಚರ ಇಡೀ ಸಿದ್ಧಗಂಗೆಯ

ಚರಾಚರಗಳೆಲ್ಲವುಗಳಲ್ಲೂ ಕೃತಜ್ಞತೆಯ ಭಾವವನ್ನು ಮೂಡಿಸುತ್ತಿತ್ತು. ಜಡವನ್ನು ಜಂಗಮವಾಗಿಸುವ ಪ್ರಕ್ರಿಯೆ ಇಲ್ಲಿ ಬಿಂಬಿತವಾಗಿದೆ.

ಮಾನವ ಚೈತನ್ಯದ ಎಚ್ಚರದ ಈ ಬೆಳಗಿನಲ್ಲಿ ಪ್ರಕೃತಿಯೂ ಪಾಲ್ಗೊಂಡದ್ದನ್ನು ಕವಿ ಮುಂದಿನ ಪದ್ಯದಲ್ಲಿ ದಾಖಲಿಸುತ್ತಾರೆ. ಸಿದ್ಧಗಂಗೆ ಬೆಟ್ಟ - ಬಂಡೆಗಳಿಂದ ಕೂಡಿದ ಪ್ರದೇಶ. ಆದರೂ ಅಲ್ಲಲ್ಲಿ ಇರುವ ಗಿಡ - ಮರಗಳು ಪೂಜೆಗಾಗಿ ಹೂವನ್ನು ಅರಳಿಸಿ ಸಜ್ಜಾಗಿವೆ. ಅಲ್ಲಿರುವ ದೇವಾಲಯದ ಪೂಜೆ ಆರತಿ ಗಂಟೆಗಳ ನಿನಾದ ಆಕಾಶವನ್ನು ಆವರಿಸುತ್ತದೆ. ಧೂಪ ಗಂಧಗಳ ಪರಿಮಳ ಮಂದ ಮಂದಾನಿಲದೊಂದಿಗೆ ಮೈ ಮನಸ್ಸುಗಳಿಗೆ ಮುದ ನೀಡುತ್ತದೆ. ಈ ಬಗೆಯ ಸಂಭ್ರಮವನ್ನು ಹೆಚ್ಚಿಸುವುದಕ್ಕಾಗಿ ಸಿದ್ಧಗಂಗಾ ಕ್ಷೇತ್ರಕ್ಕೆ ಬೆಳಗು ಇಳಿದು ಬರುವುದಂತೆ. ಜಡ ಮತ್ತು ಜಂಗಮ ಎರಡೂ ಒಂದಾಗಿ ಬೆಳಗಿನೆಡೆಗೆ ಸಾಗುವ ಸೂಕ್ಷ್ಮ ಇಲ್ಲಿ ವ್ಯಕ್ತವಾಗಿದೆ.

ಸಿದ್ಧಗಂಗೆಯಲ್ಲಿ ಶ್ರೀಗಳು ನಡೆಸಿದ ಸಾಧನೆಯ ಸ್ವರೂಪವನ್ನು ಮೂರನೆಯ ಪದ್ಯದಲ್ಲಿ ಶಿವರುದ್ರಪ್ಪನವರು ಅತ್ಯಂತ ನವಿರಾಗಿ ಚಿತ್ರಿಸಿದ್ದಾರೆ. ಶ್ರೀಗಳ ಸಾಧನೆ ಅತ್ಯದ್ಭುತ. ಆದರೆ ಅದು ಮಾನುಷವಾದ ಪ್ರತಿಸ್ಪಂದವೇ ಹೊರತು, ಅತಿಮಾನುಷವಾದ ಪವಾಡವಲ್ಲ; ಮಾನವ ಸಾಧನೆಯ ಸಂಭ್ರಮ ಉತ್ಸವದ ಅಬ್ಬರವೂ ಇಲ್ಲಿಲ್ಲ. ಸರಳ ಸಾಧಾರಣವಾದ ಬದುಕಿನ ಕ್ರಿಯೆಗಳೇ ಇಲ್ಲಿ ಗೋಪುರದೆತ್ತರಕ್ಕೆ ಬೆಳೆದಿವೆ. ಆ ಗೋಪುರದ ಮೇಲೆ ರಾರಾಜಿಸುತ್ತಿರುವುದು ವೈರಾಗ್ಯದ ಬಾವುಟ. ಅದು ಯಾವುದೇ ಮತ - ಪಂಥಗಳ ಭೇದವಿಲ್ಲದೆ ಪರಮ ನಿರಪೇಕ್ಷೆಯಿಂದ ಎಲ್ಲರನ್ನೂ ತನ್ನತ್ತ ಸೆಳೆಯುತ್ತಿದೆ. ಸಕಲ ಜೀವಾತ್ಮರಿಗೆ ಲೇಸ ಬಯಸುವ ಶರಣಭಾವವನ್ನು ಸರ್ವರಿಗೂ ಧಾರೆಯೆರೆಯುತ್ತಿದೆ. ನಿಜ ಜಂಗಮ ಚೈತನ್ಯ ಸ್ವರೂಪದ ಸಾಕ್ಷಾತ್ಕಾರ ಇಲ್ಲಿದೆ.

ಹಾಗಾದರೆ ಸಿದ್ಧಗಂಗೆಯ ಎಲ್ಲ ಚಟುವಟಿಕೆಗಳನ್ನು ಪೂಜ್ಯರು ಹೇಗೆ ಪೋಷಿಸುತ್ತಿದ್ದರು ಎಂಬ ಬೆರಗು ಯಾರನ್ನೂ ಕಾಡದಿರದು. ಅಲ್ಲಿ ಪೋಷಿತರಾದವರು ನೂರಾರು ಸಂಖ್ಯೆಯ ಜನರಲ್ಲ, ಲಕ್ಷ ಲಕ್ಷಾಂತರ ಜನರು. ಪೂಜ್ಯರು ತಮ್ಮ ಜಂಗಮಜೋಳಿಗೆಯ ಮೂಲಕವೇ ಎಲ್ಲರನ್ನೂ ಪೊರೆದಿದ್ದಾರೆ. ಶ್ರೀಗಳ ಅಂತಃಕರಣದ ಜಲವೇ ಭಕ್ತರ ಬದುಕಿನ ತೀರ್ಥವಾಗಿದೆ, ಅವರ ಬುದ್ಧಿಮತ್ತೆಗೆ ಚಿರಸ್ಫೂರ್ತಿಯಾಗಿದೆ. ವಿದ್ಯೆಯ ಬೆಳಕನ್ನು ಪಡೆಯಲು ಹಣತೆ ಹಿಡಿದು ಬಂದ ವಿದ್ಯಾರ್ಥಿಗಳಿಗೆ ಪೂಜ್ಯರು ಎಣ್ಣೆ - ಬತ್ತಿಯನ್ನು ಧಾರೆ ಎರೆಯುವಂತೆ ಅನ್ನ ಮತ್ತು ಆಶ್ರಯವನ್ನು ನೀಡಿದ್ದಾರೆ. ಬದುಕಿಗೆ ಜ್ಞಾನದ ಬೆಳಕಿನ ದೀಪ್ತಿದಾನವನ್ನು ಮಾಡಿದ್ದಾರೆ. ವಿಶ್ವದುದ್ದಕ್ಕೂ ವಿಹರಿಸುವ ಶಕ್ತಿ ಇರುವ ಅದೆಷ್ಟೋ ಜೀವಗಳಿಗೆ ಸಿದ್ಧಗಂಗೆ ಶ್ರೀರಕ್ಷೆ ನೀಡಿದೆ. ಹೀಗೆ ನಾಲ್ಕನೆಯ ಪದ್ಯದಲ್ಲಿ ಜಂಗಮ ಶಕ್ತಿಯ ಸಾಮರ್ಥಿಕೆ ಸಾಕಾರಗೊಂಡಿದೆ.

ಕೊನೆಯ ಪದ್ಯ ಈ ಕ್ಷಣದ ಘಟನೆಗೆ ಸಾಕ್ಷ್ಯ ನುಡಿದಂತಿದೆ. ಪರಮಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಶರಣರ ಕಾಯಕವೆ ಕೈಲಾಸ ಎಂಬ ಮಾತಿಗೆ ಭಾಷ್ಯ ಬರೆದಂತೆ ಬದುಕಿದರು. ಟಿವಿಯಲ್ಲಿ **'ಕಾಯಕವೇ ಕೈಲಾಸ ಎಂದರು ಬಸವ, ಅದರಂತೆ ಬದುಕಿದರು ನಡೆದಾಡುವ ದೈವ'** ಎಂಬ ಹಾಡೂ ಮತ್ತೆ ಮತ್ತೆ ಕೇಳಿಬರುತ್ತಿತ್ತು. ಇಡೀ ಆಕಾಶವೇ ಕಾವಿಯನ್ನು ಧರಿಸಿ ಕೈ ಚಾಚಿದಂತೆ, ಎಲ್ಲರನ್ನೂ ನನ್ನವರು ಎಂದು ಕಾಣುವ ಕರುಣೆಯ ಕಣ್ಣಿನಂತೆ ಶ್ರೀಗಳವರು ಬಾಳಿದರು. ಸದ್ದುಗದ್ದಲವಿರದ ಸಾಧನೆಯ ದಾರಿಯಲ್ಲಿ ಸಾಗಿಬಂದ ಶ್ರೀಗಳು ಈಗ ತಮ್ಮ ಬದುಕಿನ 111 ವರ್ಷಗಳ ಸುದೀರ್ಘ ಪ್ರಯಾಣವನ್ನು ಪೂರೈಸಿ ನಾನಿನ್ನು ದೇಹವನ್ನುಳಿದು ಚೈತನ್ಯಮೂರ್ತಿಯಾಗಿ ನಿಮ್ಮೊಂದಿಗಿರುವೆ ಎಂಬಂತೆ ಗದ್ದುಗೆಯೇರಿದ್ದಾರೆ. ಸ್ಥಾವರ ಜಂಗಮಗಳೆರಡನ್ನೂ ಮೀರಿನಿಂತ ಜಂಗಮಮೂರ್ತಿಯಾಗಿ ಮಠ ಮತ್ತು ಭಕ್ತರ ಮನೋಸಿಂಹಾಸನದಲ್ಲಿ ಪ್ರತಿಷ್ಠಾಪನೆಗೊಂಡಿದ್ದಾರೆ.

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಬರೆದ **'ಸಿದ್ಧಗಂಗೆಯ ಶ್ರೀ ಚರಣಕ್ಕೆ'** ಎನ್ನುವ ಈ ಕವನ ನಿಜಕ್ಕೂ ಪರಮಪೂಜ್ಯರ ಒಟ್ಟು ಬದುಕಿಗೆ ಕನ್ನಡಿ ಹಿಡಿದಂತಿದೆ. 1972ರಲ್ಲಿ ಪ್ರಕಟವಾದ ಈ ಕವನ ಅದಕ್ಕಿಂತಲೂ ಮೊದಲು ಶಿವರುದ್ರಪ್ಪನವರು ಶ್ರೀಗಳನ್ನು ಕಂಡು ಬರೆದ ಕವನವಾಗಿತ್ತು. ಬರೆದ ಕಾಲದಲ್ಲಿ ಇನ್ನಿಲ್ಲದ ಜನಪ್ರಿಯತೆಯನ್ನು ಪಡೆಯಿತು. ಸಿದ್ಧಗಂಗಾ ಶ್ರೀಗಳನ್ನು ಕುರಿತ ಎಲ್ಲರ ಭಾವನೆಗಳು ಹರಳುಗೊಂಡ ಕೃತಿಯೆಂಬಂತೆ ಇದು ಜನಮಾನಸದ ಮನ್ನಣೆ ಗಳಿಸಿತು. ಶ್ರೀಮಠದ ಎಲ್ಲ ಕಾರ್ಯಕ್ರಮ ಮತ್ತು ಪ್ರಕಟಣೆಗಳಲ್ಲಿ ಈ ಕೃತಿ ಅನುರಣನ ಗೊಳ್ಳುತ್ತಿತ್ತು, ಈಗಲೂ ಅನುರಣನಗೊಳ್ಳುತ್ತಿದೆ. ಇದೀಗ ಮೊದಲಿಗಿಂತಲೂ ಹೆಚ್ಚು ಧ್ವನಿಪೂರ್ಣ ಎನಿಸುತ್ತಿದೆ. ಪೂಜ್ಯರ ಕ್ರಿಯಾಸಮಾಧಿ ಭವನದ ಎದುರು ನಿಂತಾಗ **'ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ'** ಎನ್ನುವ ಕವನದ ಸಾಲು ಎಲ್ಲ ಕಾಲದ ಸತ್ಯದಂತೆ ಭಾಸವಾಗುತ್ತದೆ. **'ಗದ್ದುಗೆಯೇರಿದ'** ಅದಮ್ಯ ಚೈತನ್ಯಕ್ಕೆ ಅನಂತ ಶರಣು ಶರಣಾರ್ಥಿಗಳನ್ನು ಸಮರ್ಪಿಸುವಂತೆ ತ್ರಿಕರಣಗಳನ್ನು ಪ್ರೇರೇಪಿಸುತ್ತದೆ. ಒಂದು ಕೃತಿಯ ಸಾರ್ಥಕತೆಗೆ ಇದಕ್ಕಿಂತ ಇನ್ನೇನು ಬೇಕು!

□

# ಸಿದ್ಧಗಂಗೆಯ ದೇವಮಾನವ

**ನಗರ್ಲೆ ಶಿವಕುಮಾರ**

ಎನ್ನ ತನುವ ಶೋಧಿಸಿ ಚಿನುಮಯ ಲಿಂಗವ ಮಾಡಿ
ತೋರಿದನಯ್ಯ ಸದ್ಗುರು
ಎನ್ನ ಮನವ ಶೋಧಿಸಿ ಮನಘನ ಲಿಂಗವ ಮಾಡಿ
ತೋರಿದನಯ್ಯ ಸದ್ಗುರು
ಎನ್ನ ಭಾವವ ಶೋಧಿಸಿ ಭವಭರಿತ ಲಿಂಗವ ಮಾಡಿ
ತೋರಿದನಯ್ಯ ಸದ್ಗುರು
ಎನ್ನ ಅಂಗ ಕರಣಂಗಳ ಕಳೆದು ಲಿಂಗ ಕರಣಂಗಳ ಮಾಡಿದ
ಸದ್ಗುರುವಿಂಗೆ ನಮೋ ನಮಃ ಎಂಬೆನಯ್ಯ ಅಖಂಡೇಶ್ವರಾ

**– ಷಣ್ಮುಖ ಶಿವಯೋಗಿಗಳು**

ಪ್ರಾಚೀನ ಇತಿಹಾಸವಿರುವ, ದೀರ್ಘಕಾಲದ ಪರಂಪರೆ ಇರುವ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ದಾಸೋಹ ಸೇವೆಯಲ್ಲಿ ಪ್ರಸಿದ್ಧಿ ಪಡೆದಿರುವುದು ತುಮಕೂರು ಜಿಲ್ಲೆಯ ಶ್ರೀ ಸಿದ್ಧಗಂಗಾ ಕ್ಷೇತ್ರ. 'ಸಿದ್ಧಗಂಗೆಯ ಊಟ, ಶಿವಗಂಗೆಯ ನೋಟ' ಎನ್ನುವ ನಾಣ್ಣುಡಿಯೇ ಇದೆ. ಸಿದ್ಧಗಂಗೆಯ ಪ್ರಾಚೀನತೆಯಷ್ಟೇ ಸಂಬಂಧ ಪಡೆದಿದೆ ಶಿವಗಂಗೆ. ಸಿದ್ಧಗಂಗಾ ಕ್ಷೇತ್ರಕ್ಕೆ ಸುಮಾರು ಹದಿನೈದು ಕಿ.ಮೀ. ಅಂತರವಿರುವ ಶಿವಗಂಗಾ ಕ್ಷೇತ್ರ ವೀರಶೈವ ಲಿಂಗಾಯತರ ಇತಿಹಾಸದಲ್ಲಿ ಮಹತ್ವಪೂರ್ಣ ಬೆಳವಣಿಗೆಗೆ ಕಾರಣವೆನಿಸಿದೆ. ತುಮಕೂರು ಜಿಲ್ಲೆಯ ಆಸುಪಾಸಿನ ಅನೇಕ ಪ್ರಸಿದ್ಧ ಸ್ಥಳಗಳ ಬಗೆಗೆ ಬಹುತೇಕ ಮಾಹಿತಿ ನೀಡಬಲ್ಲದು ಗುಬ್ಬಿಯ ಮಲ್ಲಣಾರ್ಯರ 'ವೀರಶೈವಾಮೃತ ಮಹಾ ಪುರಾಣ'. ಈ ಗ್ರಂಥ ಶಿವಯೋಗಿಗಳನೇಕರ, ದಾರ್ಶನಿಕರ ಸಂಬಂಧವನ್ನು ತಿಳಿಸುವುದಷ್ಟೇ ಅಲ್ಲದೆ, ಸಿದ್ಧಗಂಗಾ ಕ್ಷೇತ್ರದ ಅನೇಕಾನೇಕ ಮಹತ್ವದ ಸಂಗತಿಗಳ ಬಗೆಗೆ ಹೆಚ್ಚು ಮಾಹಿತಿಯನ್ನು ನೀಡಬಲ್ಲ ಕೃತಿಯೆನಿಸಿದೆ.

ಸಿದ್ಧಗಂಗಾ ಕ್ಷೇತ್ರದ ಪರಂಪರೆಯನ್ನು ಅವಲೋಕಿಸಿದಾಗ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳವರ ನಂತರದ ಮಾಹಿತಿಗಳು ಲಭ್ಯವಿಲ್ಲವಾದರೂ

---

**ನಗರ್ಲೆ ಶಿವಕುಮಾರ,** ಬಿನ್ ಎನ್.ಎಸ್. ರಾಜಶೇಖರ, ನಗರ್ಲೆ ಅಂಚೆ, ನಂಜನಗೂಡು ತಾ.

ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀಮಠದಲ್ಲಿ ಶ್ರೀ ಮುಪ್ಪಿನಾರ್ಯರು, ಶ್ರೀ ರುದ್ರಸ್ವಾಮಿಗಳು, ಶ್ರೀ ಸಿದ್ಧಲಿಂಗಸ್ವಾಮಿಗಳು ಶ್ರೀಕ್ಷೇತ್ರದ ಅಧಿಪತಿಗಳಾಗಿದ್ದರು. ನಂತರ ಬಂದ ಶ್ರೀ ಅಟವೀಸ್ವಾಮಿಗಳವರು ಶ್ರೀಮಠದಲ್ಲಿ ದಾಸೋಹ ಮತ್ತು ಸಂಸ್ಕೃತ ವಿದ್ಯಾಭ್ಯಾಸಗಳೆರಡಕ್ಕೂ ಅಂಕುರಾರ್ಪಣೆಗೈದರು. ಶ್ರೀ ಅಟವೀಸ್ವಾಮಿ ಗಳು ಅಂದು ದಾಸೋಹಕ್ಕಾಗಿ ಹಚ್ಚಿದ ಒಲೆ ಇಂದಿಗೂ ಆರಿಲ್ಲ. ಅಂದು ಪ್ರಾರಂಭಿಸಿದ ಸಂಸ್ಕೃತ ಪಾಠಶಾಲೆ ಇಂದು ಭಾರತದಲ್ಲೇ ಬಹುದೊಡ್ಡ ಕಾಲೇಜೆಂದು ಹೆಸರು ಪಡೆದಿದೆ.

**ಮಠಾಧಿಪತಿ:** ಶ್ರೀ ಅಟವೀಸ್ವಾಮಿಗಳವರ ನಂತರ ಶ್ರೀ ಉದ್ದಾನ ಶಿವಯೋಗಿಗಳವರು ಶ್ರೀಮಠದ ಅಧಿಪತಿಗಳಾದರು. ಅವರು ಶಿವಯೋಗ ಸಾಧನೆಯಲ್ಲಿ ಅತ್ಯುನ್ನತ ಸ್ಥಿತಿಯನ್ನು ಸಾಧಿಸಿದ್ದರು. ಭಕ್ತರು ಉದ್ದಾನ ಶ್ರೀಗಳವರನ್ನು ಸಾಕ್ಷಾತ್ ಶಿವಸ್ವರೂಪಿಗಳೆಂದೇ ನಂಬಿದ್ದರು. ತಮ್ಮ ಮುಂದಿನ ಉತ್ತರಾಧಿಕಾರಿಗಳಾಗಿ ಶ್ರೀ ಮರುಳಾರಾಧ್ಯ ಸ್ವಾಮಿಗಳವರನ್ನು ಶ್ರೀ ಉದ್ದಾನ ಶಿವಯೋಗಿಗಳು ನೇಮಿಸಿಕೊಂಡರು. ಆದರೆ ಕೆಲವು ವರ್ಷಗಳ ನಂತರ ಶ್ರೀ ಮರುಳಾರಾಧ್ಯ ಸ್ವಾಮಿಗಳವರು ಹಠಾತ್ತನೆ ಖಾಯಿಲೆಗೊಳಗಾಗಿ ಲಿಂಗೈಕ್ಯರಾದರು. ಈ ಸಂದರ್ಭದಲ್ಲಿ ಲಿಂಗೈಕ್ಯ ಸ್ವಾಮಿಗಳವರ ಅಂತಿಮ ದರ್ಶನಕ್ಕಾಗಿ ಶ್ರೀ ಸಿದ್ಧಗಂಗಾ ಮಠಕ್ಕೆ ಆಗಮಿಸಿದ್ದವರು ಯುವಕರಾದ ವೀರಾಪುರದ ಶ್ರೀ ಶಿವಣ್ಣನವರು. ಅಂದಿನ ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದ ಪಟೇಲ್ ಹೊನ್ನಪ್ಪ ಮತ್ತು ಶ್ರೀಮತಿ ಗಂಗಮ್ಮನವರ ಹದಿಮೂರು ಮಕ್ಕಳ ಪೈಕಿ ಎಂಟನೆಯವರೇ ಶಿವಣ್ಣನವರು. ಪದವಿಯನ್ನು ಆಗತಾನೇ ಮುಗಿಸಿದ್ದ ಶಿವಣ್ಣನವರು ಸಿದ್ಧಗಂಗೆಯ ಶ್ರೀ ಮರುಳಾರಾಧ್ಯ ಸ್ವಾಮಿಗಳವರ ಅಂತಿಮ ದರ್ಶನ ಪಡೆಯಲು ಬಂದಿದ್ದರು. ನಂತರ ಶ್ರೀ ಉದ್ದಾನ ಶಿವಯೋಗಿಗಳವರ ಆಶೀರ್ವಾದ ಪಡೆಯಲು ಭೇಟಿ ಮಾಡಿದಾಗ ಶ್ರೀಗಳವರು 'ಶ್ರೀಮಠದ ಮುಂದಿನ ಉತ್ತರಾಧಿಕಾರಿ ನೀನೇ ಶಿವಣ್ಣ' ಎಂದಾಗ ಮಾತಿಗೆ ಪ್ರತಿಯಾಡದೆ ಸಿದ್ಧಗಂಗಾ ಕ್ಷೇತ್ರದ ಸ್ವಾಮಿಗಳಾಗಲು ಒಪ್ಪಿಕೊಂಡು ಶ್ರೀ ಶಿವಕುಮಾರ ಸ್ವಾಮಿಗಳಾಗಿದ್ದೇ ಮಹತ್ವದ ಸಂಗತಿ ಎನ್ನಬಹುದು. ಮನೆಯವರಿಗೆ ತಿಳಿಸದೆ, ಅವರ ಅನುಮತಿ ಪಡೆಯದೆ 1930ರಲ್ಲಿ ಸ್ವಾಮಿಗಳಾದದ್ದು, ಗುರುವಿನ ಮನ ಗೆದ್ದು ಮಠಾಧಿಪತಿ ಎನಿಸಿಕೊಂಡರು.

ಶ್ರೀ ಉದ್ದಾನ ಶಿವಯೋಗಿಗಳವರ ಕಠಿಣ ಕರ್ಮಯೋಗ ಹಾಗೂ ಶಿವಯೋಗಗಳ ಬಗೆಗೆ ಶ್ರೀ ಶಿವಕುಮಾರ ಸ್ವಾಮಿಗಳವರು ಸ್ಮರಿಸಿಕೊಳ್ಳುತ್ತಾ,

ನಮ್ಮ ಸ್ವಾಮಿಗಳವರು 'ಕೊಟ್ಟರೆ ವರ, ಇಟ್ಟರೆ ಶಾಪ' ಎಂಬ ಮಾತುಗಳನ್ನು ಆಗಾಗ್ಗೆ ಹೇಳುತ್ತಿದ್ದರು. ಶ್ರೀ ಸಿದ್ಧಗಂಗಾ ಮಠದ ಉತ್ತರಾಧಿಕಾರವನ್ನು ವಹಿಸಿಕೊಂಡು ಎಂಬತ್ತೆಂಟು ವರ್ಷಗಳ ಸಮರ್ಥ ಸಾರ್ಥಕ ಸಂನ್ಯಾಸ ಜೀವನವನ್ನು ಪವಿತ್ರವಾಗೇ ಉಳಿಸಿಕೊಂಡು ಮಾನವ ಜನಾಂಗದ ಹಿತವನ್ನು ಬಯಸಿದ ಮಹಾನುಭಾವರ ಮೇಲ್ಪಂಕ್ತಿಯಲ್ಲಿ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಸಂಸ್ಥಾಪಿತರಾಗಿದ್ದಾರೆ. ಧಾರ್ಮಿಕ, ಸಾಮಾಜಿಕ ಮುಖಿಗಳಾದ ಶ್ರೀಗಳವರು ತಮ್ಮ ಅವಧಿಯಲ್ಲಿ ಸ್ಥಾಪಿಸಿ, ಪೋಷಿಸುತ್ತಿರುವ ಶಿಕ್ಷಣ ಸಂಸ್ಥೆಗಳ ಸಂಖ್ಯೆ 125ಕ್ಕೂ ಹೆಚ್ಚಿವೆ. 1944ರಲ್ಲಿ ಶ್ರೀ ಸಿದ್ಧಗಂಗಾ ಪ್ರೌಢಶಾಲೆ ಸ್ಥಾಪಿಸುವುದರೊಂದಿಗೆ ಆರಂಭವಾದ ಸಂಸ್ಥೆಗಳು ಪೂರ್ವ ಪ್ರಾಥಮಿಕ ಶಾಲೆಯಿಂದ ಇಂಜಿನಿಯರಿಂಗ್, ಫಾರ್ಮಸಿ, ಬಿಜಿನೆಸ್ ಮ್ಯಾನೇಜ್‌ಮೆಂಟ್ ಕಾಲೇಜುಗಳ ತನಕ ಎಲ್ಲಾ ಹಂತಗಳ ಶಿಕ್ಷಣ ಸಂಸ್ಥೆಗಳೂ ಶ್ರೀಮಠದ ವತಿಯಿಂದ ನಡೆಯುತ್ತಿವೆ.

ಸಿದ್ಧಗಂಗಾ ಶ್ರೀಗಳವರು ವೇದಿಕೆಯ ಮೇಲೆ ಕುಳಿತು ಉಪದೇಶವನ್ನು ಕೊಡುವುದರ ಬದಲಿಗೆ ತಾವೇ ಹೊಲದಲ್ಲಿ ಅಡುಗೆ ಮನೆಯಲ್ಲಿ, ಶಾಲೆಯ ಕೋಣೆಯಲ್ಲಿ, ಕಟ್ಟಡ ಕಟ್ಟುವ ನಿವೇಶನದಲ್ಲಿ ಇಳಿದು ಕೆಲಸ ಮಾಡಿ ದುಡಿಮೆಯ ಅಗ್ಗಳಿಕೆಯನ್ನು ಮೆರೆಸಿದ್ದಾರೆ. ಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀಗಳವರು ನಡೆಸುತ್ತಾ ಬಂದಿರುವ 'ಅನ್ನದಾಸೋಹ' ಸೋಜಿಗ ಪಡೆಯುವಷ್ಟು ದೊಡ್ಡ ಪ್ರಮಾಣದಲ್ಲಿ ನಿರಂತರವಾಗಿ ನಡೆಯುತ್ತಾ ಬಂದಿರುವುದು ಒಂದು ಪವಾಡವೆನ್ನಬಹುದಾಗಿದೆ.

**ಮಾತೃವಾತ್ಸಲ್ಯ:** ವಿದ್ಯಾರ್ಥಿಗಳ ಕ್ಷೇಮಚಿಂತನೆ ಶ್ರೀಗಳವರ ಮೊದಲ ಗುರಿ. ಹಿಂದೆ ಶ್ರೀಮಠ ಆರ್ಥಿಕವಾಗಿ ದುರ್ಬಲವಾಗಿತ್ತು. ಧಾರ್ಮಿಕ ಕೊರತೆಯನ್ನಂತೂ ಸಿದ್ಧಗಂಗಾ ಮಠ ಕಂಡಿದ್ದೇ ಇಲ್ಲ. ಶ್ರೀಗಳವರು ಹತ್ತಾರು ಹಳ್ಳಿಗಳಿಗೆ ಹೋಗಿ ಭಿಕ್ಷೆ ತಂದು ಎಲ್ಲವನ್ನು ಸಲಹುತ್ತಿದ್ದರು. ಭಿಕ್ಷೆಗಾಗಿ ಒಂದು ತಿಂಗಳು ಪೂರ್ತ ಮಲೆನಾಡಿಗೆ ಹೋಗಿ ವಾಸ್ತವ್ಯ ಹೂಡುತ್ತಿದ್ದ ದಿನಗಳೂ ಇದ್ದವು. ಅಂತಹ ಸಂದರ್ಭಗಳಲ್ಲೂ ಶ್ರೀಗಳವರು ಯಾವುದರಲ್ಲೂ ವಿದ್ಯಾರ್ಥಿಗಳಿಗೆ ಕೊರತೆಯುಂಟಾಗದಂತೆ ನೋಡಿಕೊಳ್ಳುತ್ತಿದ್ದರು. ಊಟ ಬಡಿಸುವ ವೇಳೆಯಲ್ಲಿ ತಾವೇ ಮುಕ್ತವಾಗಿ ಎಲ್ಲರಿಗೆ ಉಣಬಡಿಸಿದ್ದಾರೆ. ಅವರದು ಮಾತೃವಾತ್ಸಲ್ಯ, ತಂದೆ ತಾಯಿ ಎಲ್ಲವೂ ಅವರೇ ಆಗಿದ್ದರು. ಎಲ್ಲರನ್ನು ತಮ್ಮವನೆಂದು ಒಪ್ಪಿಕೊಂಡಿದ್ದರು. ಸಿದ್ಧಗಂಗಾ ಶ್ರೀಗಳು ಗುರುವಾಗಿ ನುಡಿದು ನಿಜದ ಜಂಗಮರಾಗಿ ನಡೆದು ಅಮರರಾಗಿದ್ದಾರೆ.

ಶ್ರೀಮಠದಲ್ಲಿ ವಿದ್ಯಾಭ್ಯಾಸಕ್ಕೆ ಸೇರಿದ ಕೆಲವು ವಿದ್ಯಾರ್ಥಿಗಳು ಶ್ರೀಗಳವರನ್ನು ಮಾತನಾಡಿಸಲು ಹೋಗುವುದಿರಲಿ, ಅವರ ಕಣ್ಣಿಗೆ ಬೀಳದಂತೆ ಎಚ್ಚರವಹಿಸಿದ್ದರೆ ಶ್ರೀಗಳವರೇ ವಿದ್ಯಾರ್ಥಿಗಳಿರುವ ಕೊಠಡಿಗಳಿಗೆ ಹೋಗಿ ಕ್ಷೇಮಸಮಾಚಾರಗಳನ್ನು ವಿಚಾರಿಸಿಕೊಂಡು, ಪಾಠಪ್ರವಚನಗಳ ಬಗೆಗೆ ತಿಳಿದುಕೊಂಡು, ಅವರೊಡನೆ ತಮಾಷೆ ಮಾಡುತ್ತಿದ್ದರು. ಪ್ರತಿದಿನ ಸಾಯಂಕಾಲ ಪ್ರಾರ್ಥನಾಮಂದಿರದಲ್ಲಿ ಎಲ್ಲರಿಗೂ ಉಪದೇಶವಾಣಿ ಲಭ್ಯವಾಗುತ್ತಿತ್ತು. ಶ್ರೀಗಳವರ ಉಪದೇಶಾಮೃತಗಳನ್ನು ಕೇಳುತ್ತಿದ್ದ ಸಿದ್ಧಗಂಗಾ ಕ್ಷೇತ್ರದಲ್ಲಿ ಓದಿದ ಸಹಸ್ರಾರು ವಿದ್ಯಾರ್ಥಿಗಳು ಇಂದು ನಾಡಿನ ಎಲ್ಲೆಡೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಭಕ್ತಾದಿಗಳು ತಮ್ಮ ಹೃದಯದ ಹರಕೆಯನ್ನು ತುಂಬಿಕೊಳ್ಳುವ ಸಲುವಾಗಿ ಪೂಜ್ಯ ಶ್ರೀ ಶಿವಕುಮಾರಸ್ವಾಮಿಗಳವರ ಅಪೂರ್ವ ಮಹೋತ್ಸವವನ್ನು ಏರ್ಪಡಿಸಿದಾಗ ಶ್ರೀಗಳವರಲ್ಲಿ ಯಾವುದೇ ವಿಧವಾದ ಚಿತ್ತಚಂಚಲತೆ ಕಾಣುತ್ತಿರಲಿಲ್ಲ. ಹಳೆಯ ವಿದ್ಯಾರ್ಥಿಗಳೆಲ್ಲಾ ಒಂದೆಡೆ ಸೇರಿ ಈ ಬಗೆಗೆ ಸಮಾಲೋಚಿಸಿದಾಗಲೂ ಯಾವ ಉತ್ಸಾಹವಾಗಲೀ ಕಾಣಿಸುತ್ತಿರಲಿಲ್ಲ. ಬದಲಿಗೆ ನಾಡಿನ ಸೇವೆ ಸಲ್ಲಿಸುತ್ತಿರುವ ಹಿರಿಯರನ್ನು, ವಿದ್ವಾಂಸರನ್ನು, ಗಣ್ಯರನ್ನು, ಪ್ರತಿಭಾವಂತರನ್ನು ಕರೆಸಿ ಗೌರವಿಸುವ ಸೂಚನೆಗಳನ್ನು ತಿಳಿಸುತ್ತಿದ್ದರೇ ಹೊರತು, ಉಳಿದ ವಿಷಯಗಳ ಬಗೆಗೆ ತಾಟಸ್ಥ್ಯ ವಹಿಸುತ್ತಿದ್ದರು. ಶ್ರೀಗಳವರು ತಮ್ಮ ದೀರ್ಘ ಅವಧಿಯಲ್ಲಿ ಅತಿ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿರುವುದು ಕಾಯಕ ಮತ್ತು ದಾಸೋಹಕ್ಕೆ ಎನ್ನಬಹುದು.

ವಿದ್ಯಾಭ್ಯಾಸಕ್ಕೆಂದು ಬೇರೆ ಮಠದ ವಟುವೊಬ್ಬರು ಸಿದ್ಧಗಂಗಾ ಕ್ಷೇತ್ರದಲ್ಲಿ ಅಭ್ಯಾಸ ಮಾಡುತ್ತಿದ್ದರು. ತಮ್ಮ ತರಗತಿಯ ಸಹಪಾಠಿ ವಿದ್ಯಾರ್ಥಿನಿಯೊಬ್ಬಳಿಗೆ ಪ್ರೇಮಪತ್ರವೊಂದನ್ನು ಬರೆದಿದ್ದರು. ಆ ಪತ್ರ ಹೇಗೊ ಆ ತರಗತಿಯ ಶಿಕ್ಷಕರಿಗೆ ಸಿಕ್ಕಿದ್ದು ಮಾತ್ರವೇ ಅಲ್ಲ, ಶ್ರೀಗಳವರ ತನಕ ದೂರು ತಲುಪಿತು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದ ಶ್ರೀ ಶಿವಕುಮಾರಸ್ವಾಮಿಗಳು ಪಾಠ ಮಾಡುವ ಸಂದರ್ಭವೊಂದರಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಾ 'ಮಠಾಧೀಶರಾದವರು ಬ್ರಹ್ಮಚರ್ಯೆಯನ್ನು ಕಾಪಾಡಿಕೊಳ್ಳಬಲ್ಲ ಶಕ್ತಿ ಸಂಪಾದಿಸಿಕೊಳ್ಳಬೇಕು, ಇಲ್ಲವಾದಲ್ಲಿ ಕಾವಿಬಟ್ಟೆ ಕಳಚಿ ಹಾಕಿ' ಎಂಬುದಾಗಿ ಅವರನ್ನೇ ಕುರಿತು ಘರ್ಜಿಸಿದ್ದರು. ಇಂತಹ ಕೆಲ ಘಟನೆಗಳು ಶ್ರೀಮಠದ ಆವರಣದಲ್ಲಿ ನಡೆದಾಗ ಕೆಲವರನ್ನಂತೂ ಪತ್ರದ ಮುಖೇನ ತಿದ್ದಿ, ತಿಳುವಳಿಕೆ ನೀಡಿದ್ದಾರೆ. ಪವಿತ್ರವಾದ ಕಾವಿಬಟ್ಟೆ

ತೊಟ್ಟವರು ಹೇಗಿರಬೇಕೆಂದು ವಿವರಿಸಿ ಉದಾಹರಿಸಿ ತಿಳಿಸಿಕೊಟ್ಟಿದ್ದಾರೆ.

ಕನಕಪುರದ ದೇಗುಲ ಮಠಾಧೀಶರಾಗಿದ್ದ ಪೂಜ್ಯ ಶ್ರೀ ಮಹಾಲಿಂಗಸ್ವಾಮಿಗಳವರಿಗೆ ಶ್ರೀ ಶಿವಕುಮಾರಸ್ವಾಮಿಗಳೆಂದರೆ ಅಪಾರವಾದ ಗೌರವ. ಅವರೀರ್ವರೂ ಬಾಲ್ಯದ ಗೆಳೆಯರಾಗಿದ್ದರಂತೆ. ಹಾಗೆಯೇ ಕಲ್ಲುಮಠದ ಶ್ರೀಗಳು, ಗುರುವಣ್ಣದೇವರ ಮಠದ ಶ್ರೀಗಳವರು, ಹೊನ್ನಗಳ್ಳಿ ಮಠದ ಶ್ರೀಗಳು, ಚಿಕ್ಕಮಗಳೂರಿನ ಶ್ರೀಗಳು, ಚಿಲುಮೆ ಮಠದ ಶ್ರೀಗಳು, ಕುಡಿನೀರು ಕಟ್ಟೆ ವಿರಕ್ತ ಮಠದ ಶ್ರೀಗಳು, ಬೇಗೂರು ಶ್ರೀಗಳು, ಬೈರಮಂಗಲದ ಶ್ರೀಗಳು ಸೇರಿದಂತೆ ನಾಡಿನ ಹಲವಾರು ಮಠಾಧೀಶ್ವರರೆಲ್ಲಾ ಸಿದ್ಧಗಂಗಾ ಕ್ಷೇತ್ರದಲ್ಲಿದ್ದವರೇ ಆಗಿದ್ದರು. ಶ್ರೀಮಠದಲ್ಲಿದ್ದ ವಿದ್ಯಾರ್ಥಿಗಳನ್ನಾಗಲಿ, ವಟುಗಳನ್ನಾಗಲೀ ಇತರೆ ಯಾರನ್ನೇ ಆಗಿರಲಿ ಶ್ರೀ ಶಿವಕುಮಾರಸ್ವಾಮಿಗಳವರು ಸಂದರ್ಭವಶಾತ್ ದಂಡಿಸಿದಾಗ, ತದನಂತರದ ಸಂದರ್ಭದಲ್ಲಿ ಅವರನ್ನು ಕರೆದು ಸಾಂತ್ವನ ಮಾಡುತ್ತಿದ್ದ ಸ್ವಾಮಿಗಳವರ ರೀತಿ ವಿಶಿಷ್ಟವಾದುದು ಎಂದು ಶ್ರೀಮಠದ ಸಾಧಕರು ನೆನಪಿಸಿಕೊಳ್ಳುತ್ತಾರೆ.

ಶ್ರೀಮಠದ ದನಕರುಗಳ ಪಾಲನೆ ಹಾಗೂ ಗಿಡಗಳನ್ನು ನೆಟ್ಟು ಬೆಳೆಸಿ ಪೋಷಿಸುತ್ತಿದ್ದವರು ಶ್ರೀ ಸುಬ್ಬಣ್ಣಜ್ಜ ಎಂಬುವರು. ಅವರು ಎಂತಹುದೇ ಸಂದರ್ಭದಲ್ಲಿ ಮರಗಿಡಗಳನ್ನು ಕತ್ತರಿಸಲೂ ಬಿಡುತ್ತಿರಲಿಲ್ಲವಂತೆ. ಅವರನ್ನು ನೋಡಿದ್ದ ಅನೇಕರು ಆತ ಪುಣ್ಯಜೀವಿಯೆಂದು ಸ್ಮರಿಸುತ್ತಾರೆ. ವಯಸ್ಸಾಗಿ ಮೃತ್ಯುಶಯ್ಯೆಯಲ್ಲಿ ಸುಬ್ಬಣ್ಣಜ್ಜ ಮಲಗಿದ್ದಾಗ ಶ್ರೀಗಳವರನ್ನು ನೋಡಲೇ ಬೇಕೆಂದು ಹಠ ಹಿಡಿದಿದ್ದರಂತೆ. ಆದರೆ ಆಗ ಶ್ರೀ ಶಿವಕುಮಾರಸ್ವಾಮಿಗಳವರು ಮಲೆನಾಡಿನ ಪ್ರವಾಸದಲ್ಲಿದ್ದರಂತೆ. ಪ್ರಾಣ ಹೋಗುವ ಕೆಲವು ಗಂಟೆಗಳ ಮುಂಚೆ ಶ್ರೀಗಳವರು ಬಂದರೇ ಎಂದು ಪ್ರಲಾಪಿಸುತ್ತಿದ್ದರಂತೆ. ಅದಾವ ಕಾರಣವೋ ಏನೋ ತಮ್ಮ ಪ್ರವಾಸವನ್ನು ಮೊಟಕುಗೊಳಿಸಿದ ಶ್ರೀಗಳವರು ಅಂದೇ ಶ್ರೀಮಠಕ್ಕೆ ಹಿಂದಿರುಗಿ, ವಿಷಯವರಿತು ಕೂಡಲೇ ಸುಬ್ಬಣ್ಣಜ್ಜರ ವಾಸಸ್ಥಳಕ್ಕೆ ಧಾವಿಸಿ ಆಶೀರ್ವದಿಸಿದರಂತೆ. ನಂತರವೇ ಸುಬ್ಬಣ್ಣಜ್ಜ ಕಣ್ಣುಮುಚ್ಚಿದರು. ಇಂತಹ ಸತ್ಯಸಂಗತಿಗಳು ಹಲವಾರು ಇವೆ. ಇದಕ್ಕೆಲ್ಲಾ ಶ್ರೀಗಳವರ ತತ್ತ್ವನಿಷ್ಠೆ, ಪೂಜೆ ಹಾಗೂ ತಪಸ್ಸಿನ ಫಲವೆನ್ನಬಹುದು.

**ಕ್ಷಮಾಗುಣ:** ಶ್ರೀಗಳವರು ಪೂಜೆ ಮುಗಿಸಿ ಪ್ರಸಾದಕ್ಕಾಗಿ ಒಂದು ದಿನ ಹಳೇಮಠದಲ್ಲಿ ಕುಳಿತಿದ್ದಾರೆ. ಪೂಜಾಮರಿ ಸರಿಯಾದ ಸಮಯಕ್ಕೆ ಪ್ರಸಾದ ತರುವುದು ಕಾರಣಾಂತರಗಳಿಂದ ತಡವಾಯಿತು. ತಕ್ಷಣ ಎದ್ದು ತಮ್ಮ ವಸ್ತ್ರ ಧರಿಸಿ ಶ್ರೀಗಳವರು ಹೊರನಡೆದರು. ಪೂಜಾ ಕೊಠಡಿಯಿಂದ ಹೊರಕ್ಕೆ

ವೇಗವಾಗಿ ಹೋಗುತ್ತಿದ್ದ ಶ್ರೀಗಳವರಲ್ಲಿ ಆ ಪೂಜಾಮರಿ ಪ್ರಾರ್ಥನೆ ಸಲ್ಲಿಸಿಕೊಂಡರೂ ಪೂಜ್ಯರ ಮನ ಬದಲಿಸಲಾಗಲಿಲ್ಲ. ಆಮೇಲೆ ಕಾರಣ ತಿಳಿಯಿತು. ಅಂದು ನಿಗದಿಯಾಗಿದ್ದ ಕಾರ್ಯಕ್ರಮದಂತೆ ಶ್ರೀಗಳವರು ದೂರದ ಊರಿನ ಸಮಾರಂಭವೊಂದರಲ್ಲಿ ಪಾಲ್ಗೊಳ್ಳಬೇಕಾಗಿತ್ತು. ದೂರದ ಆಯಾಸವನ್ನೂ ಲೆಕ್ಕಿಸದೆ, ಪ್ರಸಾದವನ್ನೂ ಸ್ವೀಕರಿಸದೆ ಪ್ರಯಾಣ ಬೆಳೆಸಿದ ಶ್ರೀಗಳು ಸಕಾಲದಲ್ಲಿ ಸಮಾರಂಭಕ್ಕೆ ಹಾಜರಾಗಿ ಅಂದೇ ಸಂಜೆ ಶ್ರೀಮಠಕ್ಕೆ ವಾಪಸ್ಸಾದರು. ಬೆಳಗಿನಿಂದ ರಾತ್ರಿಯ ತನಕ ಪ್ರಯಾಣ ಮಾಡಿ ಬಂದಿದ್ದರೂ ಯಾರ ಬಗ್ಗೆಯೂ ಯಾವುದರ ಬಗೆಗೂ ಬೇಸರಗೊಳ್ಳದಿದ್ದ ಅವರ ವ್ಯಕ್ತಿತ್ವ, ಆ ಪೂಜಾಮರಿಯ ಜೀವನದಲ್ಲಿ ಕಲಿಸಿದ ಪಾಠದಂತಿತ್ತು ಹಾಗೂ ಸಮಯ ಪರಿಪಾಲನೆಯಲ್ಲಿ ಎಚ್ಚರವಾಗಿರುವಂತೆ ಮಾಡಿತ್ತು.

ಶ್ರೀಮಠದಲ್ಲಿ ಇತರರು ಮಾಡಿದ ತಪ್ಪುಗಳಿಗೆ, ಅಪರಾಧಕ್ಕೆ ಶ್ರೀಗಳವರು ತಮ್ಮನ್ನು ಹೊಣೆಗಾಗಿಸಿಕೊಂಡು ಉಪವಾಸದ ಮೂಲಕವೋ ಅಥವಾ ಯಾವುದಾದರೊಂದು ರೂಪದಲ್ಲೋ ಶಿಕ್ಷೆಯನ್ನು ಕೊಟ್ಟುಕೊಳ್ಳುತ್ತಿದ್ದರು. ಮೈಸೂರಿನ ಅಂದಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್‌ರವರು ಸಿದ್ಧಗಂಗಾ ಮಠಕ್ಕೆ ಆಗಮಿಸಿ, ಪೂಜಾಕಾರ್ಯಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಶ್ರೀ ಶಿವಕುಮಾರಸ್ವಾಮಿಗಳವರೊಂದಿಗೆ ಮಾತನಾಡಿ, ಶ್ರೀಮಠದ ಬೆಳವಣಿಗೆಗೆ ಬೇಕಾದ ಸಹಾಯವನ್ನು ತಮ್ಮಿಂದ ಪಡೆದುಕೊಳ್ಳುವಂತೆ ತಿಳಿಸಿದಾಗ ಶ್ರೀಗಳವರು ಏನನ್ನೂ ಕೇಳಲಿಲ್ಲವಂತೆ. ಕಷ್ಟಗಳು ಬಂದಾಗ ದೇವರೇ ಅಂತಹ ಪರಿಸ್ಥಿತಿಗಳನ್ನು ಪರಿಹರಿಸುತ್ತಾನೆಂದು ಅಷ್ಟೇ ವಿನಯದಿಂದ ಮಹಾರಾಜರಿಗೆ ತಿಳಿಸಿದರಂತೆ. ಈ ಸಂದರ್ಭದಲ್ಲಿ ಮಹಾರಾಜರು ತುಂಬಾ ಸಂತೋಷ ವ್ಯಕ್ತಪಡಿಸಿದರು. ರಾಜಕಾರಣಿಗಳು, ಸರ್ಕಾರದ ಹಿರಿಯ ಅಧಿಕಾರಿಗಳು ಯಾರೇ ಬಂದರೂ ಅವರಿಂದ ಯಾವುದೇ ಪ್ರತಿಫಲ ಅಪೇಕ್ಷಿಸದೆ ಅವರಿಗೆ ಪೂಜಾ ಪ್ರಸಾದದ ವ್ಯವಸ್ಥೆಯನ್ನು ಶ್ರೀಗಳವರು ಕಲ್ಪಿಸುತ್ತಿದ್ದರು.

ಸಿದ್ಧಗಂಗಾ ಕ್ಷೇತ್ರದಲ್ಲಿ 1963ರಲ್ಲಿ ಅಖಿಲ ಭಾರತ 44ನೇ ಕನ್ನಡ ಸಾಹಿತ್ಯ ಸಮ್ಮೇಳನ ರಂ.ಶ್ರೀ. ಮುಗಳಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಟಿ.ಎಂ.ಎ.ಪೈ, ಶ್ರೀ ಬಿ. ಶಿವಮೂರ್ತಿಶಾಸ್ತ್ರಿ, ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸೇರಿದಂತೆ ನಾಡಿನ ಪ್ರಸಿದ್ಧ ಸಾಹಿತಿಗಳು ಈ ಕಾರ್ಯಕ್ರಮದಲ್ಲಿ ಹಾಜರಿದ್ದು, ಶ್ರೀಗಳವರ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ನಾಡು, ನುಡಿಗೆ ಸಂಬಂಧಿಸಿದಂತೆ ಅನೇಕ ಸಮ್ಮೇಳನಗಳು ಶ್ರೀಮಠದಲ್ಲಿ ನಡೆದಿವೆ.

ಅವುಗಳಿಗೆಲ್ಲಾ ಸಹಾಯ, ಸಹಕಾರಗಳನ್ನು ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ನೀಡಿದ್ದಾರೆ.

ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ 1965ನೇ ಇಸವಿಯಲ್ಲಿ ನಡೆದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮೈಸೂರು ಮಹಾರಾಜರು ಹಾಗೂ ಸಿದ್ಧಗಂಗಾ ಶ್ರೀಗಳು ಮತ್ತು ಇತರೆ ಗಣ್ಯರು ಪಾಲ್ಗೊಂಡಿದ್ದರು. ಸಮಾರಂಭ ಮುಗಿಸಿಕೊಂಡು ಹಿಂದಿರುಗುತ್ತಿರುವಾಗ ಕಾಮಗೆರೆ ಗ್ರಾಮದಲ್ಲಿ ಮಹಾರಾಜರನ್ನು ನೋಡುವ ಸಲುವಾಗಿ ರಸ್ತೆಯ ಎರಡು ಬದಿಯಲ್ಲಿ ಬಹುಜನಸಂದಣಿಯೇ ಸೇರಿತ್ತು. ಶ್ರೀಗಳವರ ಕಾರು ಬರುತ್ತಿರುವ ಸಂದರ್ಭದಲ್ಲಿ ಒಬ್ಬ ಬಾಲಕ ಅಡ್ಡಲಾಗಿ ಓಡುವಾಗ ಕಾರಿಗೆ ಢಿಕ್ಕಿಯಾಗಿ ಗಾಯಗೊಂಡಿದ್ದ. ಚಾಲಕ ಕಾರು ನಿಲ್ಲಿಸದೆ ಹೋಗುತ್ತಿದ್ದುದನ್ನು ಗಮನಿಸಿದ ಶ್ರೀಗಳು ತಕ್ಷಣವೇ ಕಾರು ನಿಲ್ಲಿಸುವಂತೆ ಸೂಚಿಸಿ, ವಾಹನದಿಂದ ಕೆಳಗಿಳಿದು ಆ ಹುಡುಗನಿಗೆ ಧೈರ್ಯ ಹೇಳಿ, ತಮ್ಮ ಕಾರಿನಲ್ಲಿ ಆ ಹುಡುಗನನ್ನು ಕೊಳ್ಳೇಗಾಲದ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿ, ಯೋಗಕ್ಷೇಮವನ್ನು ತಿಳಿದು ಆಶೀರ್ವದಿಸಿ, ನಂತರ ತಮ್ಮ ಪ್ರಯಾಣವನ್ನು ಶ್ರೀ ಶಿವಕುಮಾರಸ್ವಾಮಿಗಳವರು ಮುಂದುವರಿಸಿದರು. ಇಂತಹ ಸಾವಿರಾರು ನಿದರ್ಶನಗಳನ್ನು ಪೂಜ್ಯರ ಜೀವನದಲ್ಲಿ ಕಾಣಬಹುದಾಗಿದೆ.

**ದೇವಮಾನವ:** ಗೃಹಪ್ರವೇಶ, ಪೂಜೆ, ನಾಮಕರಣ, ಮದುವೆ, ಶಿವಗಣಾರಾಧನೆ ಹಾಗೂ ನೂತನ ಅಂಗಡಿಗಳ ಉದ್ಘಾಟನೆಗಳೇ ಅಲ್ಲದೆ, ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಂದ ಪ್ರಾರಂಭಿಸಲ್ಪಟ್ಟ ಕಟ್ಟಡಗಳ ಮಾಲೀಕರಿಗೆಲ್ಲ ಯಶಸ್ಸು ದೊರಕಿದೆ. ಸಿದ್ಧಗಂಗೆಯ ಶ್ರೀಗಳವರ ಹಸ್ತದಿಂದ ಧರ್ಮಸ್ಥಳದಲ್ಲಿ ಅತಿಥಿ ನಿರ್ಮಾಣಗೃಹಕ್ಕೆ ಶಂಕುಸ್ಥಾಪನೆ ಆದ ಕಟ್ಟಡಗಳು ಎಂದೂ ಯಾವುದೇ ಅಡ್ಡಿ ಆತಂಕಗಳನ್ನು ಕಾಣದೆ ಅದರ ಉದ್ದೇಶ–ಸಾಧನೆಗಳು ಫಲಪ್ರದಗೊಂಡಿವೆ ಯೆಂದು ಧರ್ಮಸ್ಥಳದ ಧರ್ಮಾಧಿಕಾರಿಗಳು ಹೇಳಿರುವುದನ್ನು ಇಲ್ಲಿ ನೆನೆಯಬಹುದು.

ನಾಡಿನ ಹಲವಾರು ಶ್ರೀಮಠದ ಶ್ರೀಗಳವರೊಂದಿಗೆ ಬಾಂಧವ್ಯವನ್ನು ಹೊಂದಿದ್ದ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಸುತ್ತೂರು ಶ್ರೀಮಠದ ಬಗ್ಗೆ ಹಾಗೂ ಹಿಂದಿನ, ಈಗಿನ ಜಗದ್ಗುರುಗಳವರಲ್ಲಿ ಉತ್ತಮ ಒಡನಾಟವನ್ನು ಹೊಂದಿದ್ದರು. ಅಲ್ಲದೆ ಮೈಸೂರಿನ ಪಂಚಗವಿ ಮಠದ ಪೀಠಾಧ್ಯಕ್ಷರು, ಬಹುಭಾಷಾ ವಿದ್ವಾಂಸರಾಗಿದ್ದ ಪೂಜ್ಯ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರ ಆತ್ಮೀಯರಲ್ಲಿ ಒಬ್ಬರಾಗಿದ್ದರು. ಸಿದ್ಧಗಂಗೆಯ

ಮಹಾಸಾಧಕರಾದ ಶ್ರೀಗಳವರು ಈ ತಲೆಮಾರಿನ ಜನರ ಮೇಲೆ ಬೀರಿರುವ ಪ್ರಭಾವ ಅಗಾಧ. ಅವರ ಸಾಧಕ ಬದುಕು, ಧಾರ್ಮಿಕ ಇತಿಹಾಸದ ಒಂದು ದೊಡ್ಡ ಅಧ್ಯಾಯ. ಕಾಯಕ ಮತ್ತು ದಾಸೋಹಕ್ಕಾಗಿ ಇಡೀ ಜೀವನವನ್ನು ಈಶ ಸೇವೆಗಾಗಿ ಮುಡಿಪಾಗಿಟ್ಟಿದ್ದ ಪೂಜ್ಯರು ಮಾನವಲೋಕದ ಸಮಸ್ತರ ಕಲ್ಯಾಣಕ್ಕಾಗಿ ಶ್ರಮಿಸುತ್ತಾ ಬಂದು ನೂರ ಹನ್ನೊಂದು ವರುಷಗಳ ಪರಮ ಸಾರ್ಥಕ ಜೀವನವನ್ನು ನಡೆಸಿ ನಡೆದಾಡುವ ದೇವರೆಂದೇ ಪ್ರಸಿದ್ಧರಾಗಿದ್ದ ಸಿದ್ಧಗಂಗೆಯ ನಿಜದ ಜಂಗಮರಾದ ಕರ್ನಾಟಕ ರತ್ನ ಪರಮಪೂಜ್ಯ ನಿ.ಪ್ರ.ಸ್ವ. ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು 21 ಜನವರಿ 2019ರಂದು ಲಿಂಗೈಕ್ಯರಾಗಿರುತ್ತಾರೆ. ಪೂಜ್ಯರ ದಿವ್ಯಚರಣಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು.

ಸಕಲ ಜೀವಗಳ ಲೇಸನ್ನೇ ಬಯಸುತ್ತ ಜಗತ್ತಿನ ಶಾಂತಿಗೆ, ಸಮಾಜದ ಸರ್ವೋದಯಕ್ಕೆ, ಕಾಯಕ, ದಾಸೋಹ, ಜ್ಞಾನ ಸಿಂಚನವೇ ಶಕ್ತಿ ಎಂಬುದನ್ನು ಎಲ್ಲರಿಗೂ ಉಣಬಡಿಸಿದ್ದ ಮಹಾದಾಸೋಹಿ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು. ಶ್ರೀಗಳವರಿಂದಾಗಿ ಇಂದು ಸಿದ್ಧಗಂಗೆ ಮತ್ತು ಶ್ರೀಮಠ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದೆ. ಪೂಜ್ಯರ ಸಂದೇಶದಲ್ಲಿ ಸಹಜತೆ, ಸಂವಹನ ಪ್ರೀತಿ ಹಾಗೂ ನಿರ್ಮಲ ಅಂತಃಕರಣ ಇದ್ದಿದ್ದರಿಂದಲೇ 'ನಡೆದಾಡುವ ದೇವರು' ಎಂಬ ಹೆಸರಿಗೆ ಅನ್ವರ್ಥವಾಗಿದ್ದರು. ಮಾತನಾಡುವ ದೇವರೆಂದೇ ಜನರ ವಿಶ್ವಾಸ, ಭಕ್ತಿಯನ್ನು ಗಳಿಸಿಕೊಂಡಿದ್ದರು. ತ್ಯಾಗ, ಭಕ್ತಿ, ಶ್ರದ್ಧೆ, ಸೇವಾಮನೋಭಾವನೆಯಿಂದ ಮಾನವ ಮಹಾತ್ಮನಾಗಬಲ್ಲ ಎಂಬುದಕ್ಕೆ ಸಿದ್ಧಗಂಗಾ ಶ್ರೀಗಳು ಜೀವಂತ ಸಾಕ್ಷಿಯಾಗಿದ್ದರು.

ಸಿದ್ಧಗಂಗಾ ಶ್ರೀಗಳು ಶತಾಯುಷಿಗಳಾಗಿ ಜೀವಿಸಿದ್ದೇ ಈ ಶತಮಾನದ ಪವಾಡ. ಕೋಟಿ ಚಿನ್ನದ ನಾಣ್ಯಗಳನ್ನು ನೀಡಿದರೂ ಆಯುಷ್ಯದ ಒಂದು ಕ್ಷಣ ಸಿಕ್ಕುವುದಿಲ್ಲ. ಶ್ರೀಗಳು ಜೀವಿತಾವಧಿಯ ಒಂದೊಂದು ಕ್ಷಣವನ್ನು ಪೂಜೆ, ಸಮಾಜದ ಸೇವೆ, ವಿದ್ಯಾರ್ಥಿಗಳ ಭವಿಷ್ಯ, ದುರ್ಬಲರ ಕಲ್ಯಾಣಕ್ಕಾಗಿ ಮುಡಿಪಾಗಿಟ್ಟಿದ್ದರು. ಅವರ ಅಗಲುವಿಕೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಭಕ್ತರಿಗೆ ಭಗವಂತ ನೀಡಲಿ.

**ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು**
ಶ್ರೀ ಜಂಗವಾಡಿ ಮಠ, ಕಾಶಿ

# ಬಟ್ಟೆ ಹರಿದಿದ್ದರೂ ಪರವಾಗಿಲ್ಲ, ಕೈಲೊಂದು ಪುಸ್ತಕವಿರಲಿ!

ಶ್ರೀಗಳಿಗೆ ಪುಸ್ತಕಗಳೆಂದರೆ ಬಲು ಪ್ರೀತಿ. ಬಿಡುವು ಸಿಕ್ಕಾಗಲೆಲ್ಲಾ ಓದುತ್ತಲೇ ಇರುತ್ತಿದ್ದರು. ಒಳ್ಳೆಯ ವಿಚಾರಗಳು ಎಲ್ಲಿಂದ ಬೇಕಾದರೂ ಬರಲಿ, ಅವುಗಳಿಗೆ ತಡೆ ಹಾಕುವುದು ಬೇಡ ಎಂಬ ನಿಲುವನ್ನು ಶ್ರೀಗಳು ಹೊಂದಿದ್ದರು. ಪಂಪ, ರನ್ನ, ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಹರಿಹರ, ರಾಘವಾಂಕ, ಕನಕದಾಸ, ಪುರಂದರದಾಸ, ಸರ್ವಜ್ಞರ ಜೊತೆಗೆ ರಸಲ್, ಬರ್ನಾಡ್ ಷಾ, ಸಾಕ್ರೆಟೀಸ್, ಪ್ಲೇಟೋ, ಅರಿಸ್ಟಾಟಲ್, ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಶೆಲ್ಲಿ, ಮಾರ್ಕ್ಸ್, ಡಾರ್ವಿನ್, ಐನ್‌ಸ್ಟೈನ್ ಹೀಗೆ ಪ್ರಪಂಚದ ಎಲ್ಲಾ ಜ್ಞಾನಿಗಳ, ದಾರ್ಶನಿಕರ, ಚಿಂತನಶೀಲರ ವಿಚಾರಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿನ ಸಾರಸಂಗ್ರಹವನ್ನು ಅರ್ಥಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಂಡಿದ್ದರು.

ತಾವು ಓದಿದ್ದನ್ನು ವಿದ್ಯಾರ್ಥಿಗಳಿಗೂ ಬೋಧಿಸುತ್ತಿದ್ದರು. ಕೃತಿಗಳ ಮಹತ್ವ ತಿಳಿಸಿ ಅಧ್ಯಯನದಲ್ಲಿ ತೊಡಗಲು ವಿದ್ಯಾರ್ಥಿಗಳು, ಹಿರಿಯ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತಿದ್ದರು. ಜ್ಞಾನಸಂಪತ್ತಿಗಿಂತ ಮಿಗಿಲಾದ ಸಂಪತ್ತಿಲ್ಲ. ಮೈಮೇಲೆ ಹರಿದ ಬಟ್ಟೆ ಇದ್ದರೂ ಪರವಾಗಿಲ್ಲ, ಕೈಯಲ್ಲೊಂದು ಪುಸ್ತಕವಿರಲಿ ಎಂಬುದು ಶ್ರೀಗಳ ಅಂಬೋಣವಾಗಿತ್ತು. ತಮ್ಮ ಕಾರ್ಯಾಲಯದ ಟೇಬಲ್ ಮುಂದೆ ಪುಸ್ತಕಗಳನ್ನು ಇಡುತ್ತಿದ್ದರು. ತಮ್ಮ ಕಣ್ಣೆದುರಿಗೆ ಪುಸ್ತಕ ಇರಬೇಕೆಂದು ಹೇಳುತ್ತಿದ್ದರು. ಕಣ್ಣೆದುರಿಗಿರುವ ಯಾವ ಪುಸ್ತಕವನ್ನು ಓದಬೇಕು, ಓದಿಲ್ಲದಿರುವುದು ಯಾವುದು, ಹೊಸದಾಗಿ ಬರೆದ ಗ್ರಂಥ ಯಾವುದು ಎಂಬುದನ್ನು ನೆನಪಿಸಿಕೊಳ್ಳುತ್ತಿದ್ದರು.

ಅಲ್ಲದೇ ಶ್ರೀಗಳು ದೂರದೂರಿಗೆ ಹೋಗುವಾಗಲಂತೂ ಪುಸ್ತಕಗಳು ಜೊತೆ ಇರಲೇಬೇಕು. ಸಭೆ ಸಮಾರಂಭಗಳಿಗೆ ಹೋದಾಗ ಬೇರೆ ಗಣ್ಯರು ಬರಲು ತಡವಾದಾಗಲೂ ಕೂಡ ಶ್ರೀಗಳು ಪುಸ್ತಕದ ಮೊರೆ ಹೋಗುತ್ತಿದ್ದರು. ಗ್ರಂಥಗಳು ಕೈಯಲ್ಲಿದ್ದರೆ ಎಂತದ್ದೋ ನೆಮ್ಮದಿ ಎಂಬುದು ಶ್ರೀಗಳ ಅಚಲ ನಂಬಿಕೆಯಾಗಿತ್ತು. ಅಷ್ಟೇ ಅಲ್ಲ ಮಠದಲ್ಲಿದ್ದಾಗ, ಹೊಲ ಗದ್ದೆಗಳಿಗೆ ಕೆಲಸಕ್ಕೆ ಹೋಗುವಾಗಲೂ ಕೂಡ ಕೈಯಲ್ಲಿ ಗ್ರಂಥಗಳಿರುತ್ತಿದ್ದವು. ಪೂಜಾಗೃಹದಲ್ಲೂ ಕೂಡ ಪುಸ್ತಕಗಳನ್ನು ಇಟ್ಟಿರುತ್ತಿದ್ದರು. ಮಲಗುವ ಮುನ್ನ ಹಾಗೂ ಎದ್ದ ಕೂಡಲೇ ಪುಸ್ತಕ ಓದುವ ಕಾಯಕವನ್ನು ನಿರಂತರವಾಗಿ ಮಾಡುತ್ತಲೇ ಬಂದಿದ್ದರು. ಪುಸ್ತಕ ಓದುವಾಗ ಪುಸ್ತಕದಲ್ಲಿ ಮುಖ್ಯವಾದ ವಿಷಯವಿದ್ದರೆ ಅದನ್ನು ಪೆನ್ನಿನಲ್ಲಿ ಗುರುತುಮಾಡಿ ಕೊಂಡು ಮರುದಿನ ಬೇರೆಯವರಿಗೆ ಅದರ ಬಗ್ಗೆ ವಿವರಿಸುತ್ತಿದ್ದರು. ಗ್ರಂಥಗಳು ಸನ್ಮಿತ್ರ, ಗ್ರಂಥಾವಲೋಕನ ಒಂದು ತಪಸ್ಸು, ಅದೊಂದು ಸತ್ಸಂಗ ಯೋಗ, ಅದರಿಂದ ಜೀವನ ಯೋಗದ ಪರಿಪೂರ್ಣ ದರ್ಶನಭಾಗ್ಯ ಸಿಗುತ್ತದೆ ಎನ್ನುತ್ತಿದ್ದರು ಶ್ರೀಗಳು. **(ಕೃಪೆ: ಕನ್ನಡಪ್ರಭ)**

## ಸಿದ್ಧಗಂಗಾ ಶ್ರೀಗಳ ಮೊದಲ ಪ್ರತಿಮೆ ತಯಾರಾಗಿದ್ದು ಮೈಸೂರಲ್ಲಿ

ಪರಮಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರ ಮೊದಲ ಪ್ರತಿಮೆ ತಯಾರಾಗಿದ್ದು ಮೈಸೂರಿನಲ್ಲಿ ಎನ್ನುವುದು ವಿಶೇಷ. ಇಲ್ಲಿಯ ಅರುಣ್ ಯೋಗರಾಜ್ ಇದರ ಶಿಲ್ಪಿ...! ಹಸನ್ಮುಖಿಯಾಗಿ ಆಸನದಲ್ಲಿ ಕುಳಿತಿರುವ ಶ್ರೀಗಳ ಐದು ಅಡಿ ಎತ್ತರದ ಮೂರ್ತಿಯನ್ನು ಸದ್ಯ ತುಮಕೂರಿನ ಹರಲಾಳು ಗ್ರಾಮದ ಪುರಾತನ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗಿದೆ. ಎಚ್.ಡಿ. ಕೋಟೆ ತಾಲ್ಲೂಕಿನ ಗುಜ್ಜೆಗೌಡನಪುರದಲ್ಲಿ ಖರೀದಿಸಿದ ಏಕಶಿಲೆಯಲ್ಲಿ ಶ್ರೀಗಳ ಸುಂದರ ಪ್ರತಿಮೆಯನ್ನು ನಿರ್ಮಾಣ ಮಾಡಲಾಗಿದೆ.

ತುಮಕೂರಿನ ಸಿದ್ಧಗಂಗಾ ಮಠದ ಮೂಲಮಠದ ಸಮೀಪವಿರುವ ಅರಳೂರು ಗ್ರಾಮದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರೀಗಳ ಪ್ರತಿಮೆ ಸ್ಥಾಪನೆ ಮಾಡಬೇಕೆಂದು ಗ್ರಾಮಸ್ಥರು ತೀರ್ಮಾನಿಸಿದ್ದರು. ಈ ಹಿನ್ನೆಲೆಯಲ್ಲಿ ಮಠದ ಕಿರಿಯಶ್ರೀಗಳಾದ ಸಿದ್ಧಲಿಂಗ ಸ್ವಾಮೀಜಿ ಹಾಗೂ ಆಡಳಿತ ಮಂಡಳಿಯ ಗಮನಕ್ಕೆ ತಂದಿದ್ದರು. ಅದಕ್ಕೆ ಒಪ್ಪಿಗೆ ಸೂಚಿಸಿದ ಸ್ವಾಮೀಜಿ ಹಾಗೂ ಆಡಳಿತ ವರ್ಗ, ಆರು ತಿಂಗಳ ಕಾಲ ದೇಶದ ವಿವಿಧ ರಾಜ್ಯಗಳಲ್ಲಿ ಒಂದೇ ಶಿಲೆಯಲ್ಲಿ ಪ್ರತಿಮೆ ನಿರ್ಮಿಸಲು ಶಿಲ್ಪಿಗಳಿಗಾಗಿ ಹುಡುಕಾಟ ನಡೆಸಿದ್ದರು. ಅಂತಿಮವಾಗಿ ಸಾಂಸ್ಕೃತಿಕ ನಗರಿ ಹಾಗೂ ಹಲವು ಕಡೆ ಏಕಶಿಲ್ಪಗಳಲ್ಲಿ ಪ್ರತಿಮೆಗಳನ್ನು ನಿರ್ಮಿಸಿ ಪ್ರಸಿದ್ಧಿ ಪಡೆದಿರುವ ಅರುಣ್ ಯೋಗರಾಜ್ ಅವರಿಗೆ ಆಹ್ವಾನ ಬಂತು. ಅಂತೆಯೇ, ಮಠಕ್ಕೆ ತೆರಳಿದ ಅವರು ಡಾ. ಶಿವಕುಮಾರ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಅವರಿಗೆ ಪ್ರಿಯವಾದ ಶಿವಲಿಂಗವನ್ನು ನೀಡಿದರು.

ಅದನ್ನು ನೋಡಿದ ಸ್ವಾಮೀಜಿ ಖುಷಿಪಟ್ಟರು. ಪ್ರತಿಮೆ ನಿರ್ಮಾಣ ಮಾಡಲು ತಮ್ಮ ಅನುಮತಿ ಬೇಕಿದೆ ಎಂದು ಸ್ವಾಮೀಜಿ ಅವರನ್ನು ಅರುಣ್ ಕೇಳಿದಾಗ, ಮುಗುಳ್ನಕ್ಕ ಶ್ರೀಗಳು ಯಾವ ಸಾಧನೆ ಮಾಡಿದ್ದೀನಿ ಅಂತ ಪ್ರತಿಮೆ ಎಂದು ಪ್ರತಿಕ್ರಿಯಿಸಿದ್ದರು.

ಈ ಬಗ್ಗೆ ಶಿಲ್ಪಿ ಅರುಣ್ ಪ್ರತಿಕ್ರಿಯಿಸಿ, ನಾನು ಹಲವು ಪ್ರತಿಮೆಗಳನ್ನು ನಿರ್ಮಾಣ ಮಾಡಿದ್ದು, ಇದನ್ನು ತಿಳಿದು ಶ್ರೀಗಳ ಪ್ರತಿಮೆ ನಿರ್ಮಿಸುವಂತೆ ಕೇಳಿಕೊಂಡಾಗ ಸಂತೋಷವಾಯಿತು. ಮಳೆ, ಬಿಸಿಲು, ಚಳಿ ಯಾವ ವಾತಾವರಣವೇ ಇರಲಿ ಇದಕ್ಕೆ ನೂರಾರು ವರ್ಷಗಳ ಕಾಲ ತೊಂದರೆಯಾಗುವುದಿಲ್ಲ ಎಂದು ತಿಳಿಸಿದರು.

**(ಕೃಪೆ: ವಿಜಯವಾಣಿ)**

# 111ರ ಸಾರ್ಥಕ ಬದುಕು

| | |
|---|---|
| 1908 ಏಪ್ರಿಲ್ 1 | ಬೆಂಗಳೂರು ಗ್ರಾಮಾಂತರ ಜಿಲ್ಲೆ (ಈಗಿನ ರಾಮನಗರ ಜಿಲ್ಲೆ) ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದ ಹೊನ್ನಪ್ಪ, ಗಂಗಮ್ಮ ದಂಪತಿಗೆ ಕೊನೆಯ ಪುತ್ರನಾಗಿ ಜನನ. ಬಾಲ್ಯದ ಹೆಸರು ಶಿವಣ್ಣ. |
| 1913 ರಿಂದ 1927 | ವೀರಾಪುರ, ಪಾಲಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, ನಾಗವಲ್ಲಿಯಲ್ಲಿ ಮಾಧ್ಯಮಿಕ, ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣ ಹಾಗೂ ಮೆಟ್ರಿಕ್ಯುಲೇಷನ್ ತೇರ್ಗಡೆ |
| 1927 ರಿಂದ 1930 | ಬೆಂಗಳೂರಿನ ತೋಟದಪ್ಪ ವಿದ್ಯಾರ್ಥಿನಿಲಯದಲ್ಲಿ ಆಶ್ರಯ, ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ., ವಿದ್ಯಾಭ್ಯಾಸ ಪೂರ್ಣ. |
| 1930 ನವೆಂಬರ್ 16 | ಸಿದ್ಧಗಂಗಾ ಮಠದ ಶ್ರೀ ಮರುಳಾರಾಧ್ಯ ಸ್ವಾಮಿಗಳ ಸಮಾಧಿ ಕ್ರಿಯೆಗೆ ಬಂದಾಗ ಉದ್ದಾನಶಿವಯೋಗಿಗಳ ಕೃಪಾದೃಷ್ಟಿಗೆ ಬಿದ್ದ ಶಿವಣ್ಣ. |
| 1930 ಮಾರ್ಚ್ 3 | ಸಿದ್ಧಗಂಗಾ ಕ್ಷೇತ್ರದ ಉತ್ತರಾಧಿಕಾರಿಯಾಗಿ ಆಯ್ಕೆ. ಗುರುಗಳ ಪೂರ್ವಾನುಗ್ರಹ ಹಾಗೂ ಶಿವಕುಮಾರ ಸ್ವಾಮಿಗಳೆಂದು ನೂತನ ನಾಮಧೇಯ. |
| 1941 ಜನವರಿ 11 | ಶ್ರೀ ಉದ್ದಾನಶಿವಯೋಗಿ ಸ್ವಾಮೀಜಿ ಲಿಂಗೈಕ್ಯರಾದ ನಂತರ ಮಠಾಧ್ಯಕ್ಷರಾಗಿ ಡಾ. ಶಿವಕುಮಾರ ಸ್ವಾಮೀಜಿ ಅಧಿಕಾರ ಸ್ವೀಕಾರ. |
| 1951 | ಶ್ರೀಗಳಿಂದ ಪ್ರಭುಲಿಂಗಲೀಲೆ ಪ್ರವಚನ - ಪ್ರಭುಲಿಂಗ ಲೀಲೆಯ ತತ್ವಸಾರಾಂಶಗಳನ್ನು ಪ್ರಚುರಪಡಿಸುವ ಮೊದಲ ಹೆಜ್ಜೆ. |
| 1962 | ಧರ್ಮಸ್ಥಳದಲ್ಲಿ ನಡೆದ ವಿಶ್ವಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆ ವಹಿಸಿ, ಇಡೀ ವಿಶ್ವವೇ ಮೆಚ್ಚುವಂತೆ ಪ್ರವಚನ ನೀಡಿದ ಸ್ವಾಮೀಜಿ. |
| 1968 | ಬಸವಕಲ್ಯಾಣದಲ್ಲಿ ನಡೆದ ಬಸವೇಶ್ವರರ ಅಷ್ಟ ಶತಮಾನೋತ್ಸವದ ಅಧ್ಯಕ್ಷತೆ, - ಬಸವಣ್ಣನವರ ಮಹಾತತ್ವ ಸಾರಿದ ಶ್ರೀಗಳು ದೇಶದ ಮೂಲೆಮೂಲೆಯಿಂದ ಆಗಮಿಸಿದ್ದ ಭಕ್ತರು. |

| | |
|---|---|
| 1969 ಜೂನ್ 2 | ಮುಂಬೈನಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಶ್ರೀಗಳು. |
| 1970 ಡಿಸೆಂಬರ್ 27 | ಬೆಂಗಳೂರಿನಲ್ಲಿ ನಡೆದ 47ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ. |
| 1978 ರಿಂದ 1979 | ಗ್ರಾಮಾಂತರ ಬಸವ ಜಯಂತಿ ಯೋಜನೆ ಆರಂಭ. ಗ್ರಾಮೀಣ ಭಾಗದಲ್ಲೂ ಬಸವತತ್ತ್ವ ಪ್ರಚಾರ ಮಾಡುವ ಉದ್ದೇಶದಿಂದ ಈ ಯೋಜನೆ. ಹಳ್ಳಿಗಳಲ್ಲಿ ಬಸವ ಜಯಂತಿ ಆಚರಣೆ. |
| 1982 ಏ. 24 | ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ ಸಮ್ಮುಖದಲ್ಲಿ ಮುಖ್ಯಮಂತ್ರಿ ಶ್ರೀ ಎಸ್. ಗುಂಡೂರಾವ್ ಅವರಿಂದ ಸುವರ್ಣ ಮಹೋತ್ಸವ ನೆನಪಿಗಾಗಿ ಗೌರವ ಗ್ರಂಥ 'ಸಿದ್ಧಗಂಗಾಶ್ರೀ' ಬಿಡುಗಡೆ. |
| 1982 | ಶಿವಕುಮಾರ ಸ್ವಾಮಿಗಳ ಪೀಠಾರೋಹಣದ ಸುವರ್ಣ ಮಹೋತ್ಸವ ಸಮಾರಂಭ. |
| 1988 ಮಾರ್ಚಿ 30 | ಉತ್ತರಾಧಿಕಾರಿಯಾಗಿ ಕಿರಿಯ ಶ್ರೀ ಸಿದ್ಧಲಿಂಗ ಸ್ವಾಮೀಜಿ ನೇಮಕ. |
| 1997 ಮಾರ್ಚಿ 22 | ಶ್ರೀಗಳ ಪೀಠಾರೋಹಣದ ವಜ್ರಮಹೋತ್ಸವ, ಬೃಹತ್ ವಿದ್ಯಾರ್ಥಿನಿಲಯ, ಪ್ರಸಾದನಿಲಯ ಹಾಗೂ ದಾಸೋಹ ಸಿರಿ ಗ್ರಂಥ ಸಮರ್ಪಣೆ. |
| 2005 | ಪೀಠಾರೋಹಣದ ಅಮೃತಮಹೋತ್ಸವ ಸಮಾರಂಭ, ಕೇಂದ್ರ ಗೃಹಸಚಿವ ಶಿವರಾಜ್ ಪಾಟೀಲ್, ಸಿ.ಎಂ. ಧರಂಸಿಂಗ್ ಭಾಗಿ. |
| 2007 | ರಾಜ್ಯ ಸರ್ಕಾರದಿಂದ ಶ್ರೀಗಳಿಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರಧಾನ, ಸರ್ಕಾರದಿಂದಲೇ ಶ್ರೀಗಳ ಜನ್ಮಶತಮಾನೋತ್ಸವ ಸಮಾರಂಭ ಆಚರಣೆ. |
| 2009 | ಶ್ರೀಗಳ ಶತಮಾನೋತ್ಸವ ಗುರುವಂದನಾ ಕಾರ್ಯಕ್ರಮ, ಅಂದಿನ ರಾಷ್ಟ್ರಪತಿ ಪ್ರತಿಭಾ ಸಿಂಗ್ ಪಾಟೀಲ್ ಭಾಗಿ. |
| 2011 ಆ. 4 | ಕಿರಿಯ ಶ್ರೀ ಸಿದ್ಧಲಿಂಗಸ್ವಾಮಿಗಳವರಿಗೆ ಶಿವಕುಮಾರಸ್ವಾಮಿಗಳಿಂದ ಸಿದ್ಧಗಂಗಾ ಮಠದ ಅಧ್ಯಕ್ಷ ಪದವಿಯ ವರ್ಗಾವಣೆ. |
| 2014 | ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯದ ಸುವರ್ಣ ಮಹೋತ್ಸವದ ಅಂಗವಾಗಿ ಹಳೆಯ ವಿದ್ಯಾರ್ಥಿಗಳ ಜಾಗತಿಕ ಸಮಾವೇಶ. |
| 2015 ಜು. | ಶಿವಕುಮಾರ ಶ್ರೀಗಳಿಗೆ ಕೇಂದ್ರ ಸರ್ಕಾರದಿಂದ ಪದ್ಮಭೂಷಣ ಪ್ರಶಸ್ತಿ ಪ್ರಧಾನ. ಮಠಕ್ಕೇ ಬಂದು ಪ್ರಧಾನ ಮಾಡಿದ ಅಧಿಕಾರಿಗಳು. |

**(ಕೃಪೆ: ಕನ್ನಡಪ್ರಭ)**

## ಶ್ರೀಮಠದ ನೆನಪಿನ ಪುಟಗಳಲ್ಲಿ..... ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರುಗಳವರು ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರನ್ನು ಸ್ವಾಗತಿಸುತ್ತಿರುವುದು



ಸುತ್ತೂರು ಶ್ರೀಕ್ಷೇತ್ರದಲ್ಲಿ: ಜಗದ್ಗುರುಗಳು, ಚಿತ್ರದುರ್ಗದ ಶ್ರೀಗಳು, ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು, ರಂಭಾಪುರಿ ಶ್ರೀಗಳು



ಸೌಹಾರ್ದಸಮ್ಮಿಲನ ಸಮಾವೇಶದಲ್ಲಿ ಪುತ್ತಿಗೆ ಶ್ರೀಗಳು, ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಕನಕಗಿರಿ ಶ್ರೀಗಳು, ಸಿದ್ಧಗಂಗಾ ಶ್ರೀಗಳು, ಶ್ರೀ ಜಿ.ವಿ. ಅಯ್ಯರ್, ಆದಿಚುಂಚನಗಿರಿ ಶ್ರೀಗಳು, ಸಿರಿಗೆರೆ ಶ್ರೀಗಳು, ಮುಸ್ಲಿಂ ಧರ್ಮಗುರುಗಳು, ರೆ. ಫಾದರ್ ನರ್ರೋನ ಹಾಗೂ ಇತರರು




ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮ ಶತಮಾನೋತ್ಸವ ಸಮಾರಂಭದ ಉದ್ಘಾಟನೆ.

ಚಿತ್ರದಲ್ಲಿ ಸಂಸದ ಶ್ರೀ ಪ್ರಹ್ಲಾದ್ ಜೋಶಿ, ಕೇಂದ್ರ ಸಚಿವ ಶ್ರೀ ಅನಂತಕುಮಾರ್, ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ, ರಾಜ್ಯಪಾಲ ಶ್ರೀ ವಜೂಭಾಯಿ ರೂಡಾಭಾಯಿ ವಾಲಾ, ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಕೇಂದ್ರ ಸಚಿವ ಶ್ರೀ ಸದಾನಂದಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ



ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಹಾಗೂ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು



ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು, ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಹಾಗೂ ಡಾ. ರಾಜೇಂದ್ರ ಶ್ರೀಗಳು



**ಹೃದಯ ಸಂವಾದ:** ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಹಾಗೂ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು



ಸಿದ್ಧಗಂಗಾ ಶ್ರೀಗಳವರೊಂದಿಗೆ ಸುತ್ತೂರು ಶ್ರೀಗಳವರ ಒಂದು ಸಂತಸದ ಕ್ಷಣ